## ವಾಂತಿ– ಭೇದಿ ಪ್ರಕರಣ: ಮತ್ತೊಬ್ಬ ಮಹಿಳೆ ಸಾವು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಹೊತಪೇಟ ಗ್ರಾಮದಲ್ಲಿ ಸೋಮವಾರ ಸಿದ್ದಮ್ಮ ಸೋಮಯ್ಯ ಚಿಕ್ಕಮಠ (65) ಎಂಬುವರು ಮೃತಪಟ್ಟಿದ್ದು, ಇದಕ್ಕೆ ವಾಂತಿ ಭೇದಿ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ. ಇದರಿಂದ ಮೃತರ ಸಂಖ್ಯೆ ಮೂರಕ್ಕೆ ಏರಿದೆ.

'ಗ್ರಾಮದಲ್ಲಿ ಕಾಲರಾ ಹರಡಿಲ್ಲ. ವರದಿಯಲ್ಲಿ ನಕರಾತ್ಮಕ ಫಲಿತಾಂಶ ಬಂದಿದೆ. ಜಲ ಜೀವನ ಮಿಷನ್ ಯೋಜನೆಯಡಿ ಕಾಮಗಾರಿ ನಡೆಯುತ್ತಿದ್ದು ಪೈಪ್ ಒಡೆದು, ಕಲುಷಿತ ನೀರು ಸಂಗ್ರಹವಾಗಿದೆ. ಈ ನೀರು ಕುಡಿದು ಜನರು ಅಸ್ವಸ್ಥರಾಗಿದ್ದಾರೆ' ಎಂದು ತಹಶೀಲ್ದಾರ್ ಮಧುರಾಜ ಕೂಡ್ಲಗಿ ತಿಳಿಸಿದರು.

'ಕಲುಷಿತ ನೀರನ್ನು ಪರೀಕ್ಷೆಗಾಗಿ ರಾಯಚೂರಿಗೆ ಕಳುಹಿಸಲಾಗಿದೆ. ಗ್ರಾಮದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕದ ದುರಸ್ತಿ ಮಾಡಲಾಗುವುದು. ಯಾರೂ ಕಲುಷಿತ ನೀರು ಕುಡಿಯಬಾರದು. ನೀರನ್ನು ಕುದಿಸಿ, ಆರಿಸಿ ಕುಡಿಯಬೇಕು' ಎಂದರು.

### ಗೆಜೆಟೆಡ್ ಪ್ರೊಬೇಷನರಿ 350ಕ್ಕೂ ಹೆಚ್ಚು ಹುದ್ದೆ ಖಾಲಿ • ಭರ್ತಿಗೆ ನಿರಾಸಕ್ತಿ

# ಕೆಎಎಸ್ ಹುದ್ದೆ ಭರ್ತಿಗೆ ಗ್ರಹಣ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆಎಎಸ್ (ಕಿರಿಯ ಶ್ರೇಣಿ) ವೃಂದದ ನೇರ ನೇಮಕಾತಿ ಕೋಟಾದಡಿ 40 ಹುದ್ದೆಗಳು ಸೇರಿದಂತೆ ರಾಜ್ಯ ಸರ್ಕಾರದ ನಾನಾ ಇಲಾಖೆಗಳಲ್ಲಿ ಗೆಜೆಟೆಡ್ ಪ್ರೊಬೇಷನರಿ (ಗ್ರೂಪ್ 'ಎ' ಮತ್ತು 'ಬಿ') 350ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದರೂ, ಈ ಹುದ್ದೆಗಳ ಭರ್ತಿಗೆ ಆಡಳಿತ ಇಲಾಖೆಗಳು ಆಸಕ್ತಿ ತೋರಿಸುತ್ತಿಲ್ಲ ಎಂದು ಉದ್ಯೋಗಾಕಾಂಕ್ಷಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಖಾಲಿ ಹುದ್ದೆಗಳ ಕುರಿತು 3-4 ಇಲಾಖೆಗಳು ಮಾತ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ (ಡಿಪಿಎಆರ್) ಮಾಹಿತಿ ನೀಡಿವೆ. ನಾಲ್ಕು ಬಾರಿ ಜ್ಞಾಪನಾ ಪತ್ರ ಬರೆದರೂ ಇಲಾಖೆಗಳು ಮಾಹಿತಿಯನ್ನೇ ನೀಡಿಲ್ಲ. ಹೀಗಾಗಿ, ನೇಮಕಾತಿಗಾಗಿ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲು ಡಿಪಿಎಆರ್‌ಗೆ ಸಾಧ್ಯ ಆಗಿಲ್ಲ.

ಮೂಲ ವೃಂದದ ಮತ್ತು ಹೈ-ಕ ನಿಯಮದ (371 ಜೆ) ಅನ್ವಯ ಲಭ್ಯವಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು, ಈ ಹುದ್ದೆಗಳ ವರ್ಗೀಕರಣ ವಿವರಗಳನ್ನು ಒದಗಿಸುವಂತೆ ಎಲ್ಲ ಇಲಾಖೆಗಳಿಗೆ 2020ರ ಫೆ. 17, ನ. 23, ಡಿ. 30, 2021ರ ಸೆ. 9ರಂದು ಪತ್ರ ಬರೆಯಲಾಗಿದೆ ಎಂದು ಡಿಪಿಎಆರ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರ ಶೇ 3 ಮೀಸಲಾತಿಯನ್ನು ಶೇ 4ಕ್ಕೆ ಹೆಚ್ಚಿಸಿ 2020ರ ಸೆ. 25ರಂದು ಸರ್ಕಾರ ಆದೇಶ ಹೊರಡಿಸಿದೆ. ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಶೇ 1ರಷ್ಟು ಮೀಸಲಾತಿ ಕಲ್ಪಿಸಿ 2021ರ ಜುಲೈ 14 ರಂದು ಆದೇಶ ಹೊರಡಿಸಲಾಗಿದೆ. ಅಂಗವಿಕಲರಿಗೆ ಮೀಸಲಾತಿಯನ್ನು ಶೇ 4ರಷ್ಟು ಹೆಚ್ಚಿಸುವ ಕುರಿತಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಸೂಚನೆಯಂತೆ ಆಯಾ ಇಲಾಖೆಗಳು ಹುದ್ದೆಗಳನ್ನು ಗುರುತಿಸಿ, ಆರ್ಥಿಕ ಇಲಾಖೆಯ ಸಹಮತಿ ಪಡೆದು ಪ್ರಸ್ತಾವನೆ ಸಲ್ಲಿಸಬೇಕು' ಎಂದು ವಿವಿಧ ಇಲಾಖೆಗಳಿಗೆ ಡಿಪಿಎಆರ್ ಕಾರ್ಯದರ್ಶಿ ಪಿ. ಹೇಮಲತಾ ಈಗಾಗಲೇ ಸೂಚಿಸಿದ್ದಾರೆ.

'ಹೆಚ್ಚಳಗೊಳಿಸಿದ ಶೇ 1ರಷ್ಟು ಅಂಗವಿಕಲ ಹುದ್ದೆಯನ್ನು ಯಾರಿಗೆ (ಯಾವ ವೈಕಲ್ಯಕ್ಕೆ) ಮೀಸಲಿಡಬೇಕು ಎಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಸೂಚನೆ ಹೊರಡಿಸಬೇಕು. ಆದರೆ, ಇಲಾಖೆಗಳಿಂದ ಈ ಮಾಹಿತಿ ಬಂದಿಲ್ಲ. ಈವರೆಗೆ 40 ಹುದ್ದೆಗಳ ಭರ್ತಿಗೆ ಮಾತ್ರ ಪ್ರಸ್ತಾವನೆ ಬಂದಿದೆ. ಕನಿಷ್ಠ 300 ಹುದ್ದೆಗಳಿಗೆ ನೇಮಕಾತಿಗೆ ಕೆಪಿಎಸ್‌ಸಿ ಪ್ರಸ್ತಾವನೆ ಸಲ್ಲಿಸುವ ಉದ್ದೇಶದಿಂದ ಇಲಾಖೆಗಳಿಂದ ಮಾಹಿತಿಗೆ ನಿರೀಕ್ಷಿಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'2011, 2014, 2015ನೇ ಸಾಲಿನ ನೇಮಕಾತಿಯಲ್ಲಿ ಆಯ್ಕೆಯಾದವರಲ್ಲಿ 180ಕ್ಕೂ ಹೆಚ್ಚು ಅಭ್ಯರ್ಥಿಗಳು ಹುದ್ದೆಗೆ ಸೇರಿಲ್ಲ. ಅವುಗಳನ್ನು ಖಾಲಿ ಹುದ್ದೆಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸಬೇಕು. ಈ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ಅಗತ್ಯ ಇಲ್ಲ. ಕೆಎಎಸ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕೆಪಿಎಸ್‌ಸಿಗೆ ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಅಧಿವೇಶನದಲ್ಲಿ ಮುಖ್ಯಮಂತ್ರಿ ಹೇಳಿದ್ದರು. ಆದರೆ, ಆಡಳಿತ ಇಲಾಖೆಗಳು ಡಿಪಿಎಆರ್‌ಗೆ ಮಾಹಿತಿ ನೀಡುತ್ತಿಲ್ಲ' ಎಂದು ಉದ್ಯೋಗಾಕಾಂಕ್ಷಿಗಳೂ ಅಳಲು ತೋಡಿಕೊಂಡಿದ್ದಾರೆ.

### 'ದಶಕದಲ್ಲಿ ನಾಲ್ಕು ಬಾರಿಯಷ್ಟೆ ನೇಮಕಾತಿ'

'ಕಳೆದೊಂದು ದಶಕದಲ್ಲಿ ನಾಲ್ಕು ಬಾರಿ 2011 (362 ಹುದ್ದೆಗಳು), 2014(464 ಹುದ್ದೆಗಳು), 2015 (428 ಹುದ್ದೆಗಳು), 2017 (106 ಹುದ್ದೆಗಳು) ಮಾತ್ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನೇಮ ಕಾತಿ ನಡೆದಿದೆ. 2017ನೇ ಸಾಲಿನ ನೇಮಕಾತಿಯಲ್ಲಿ ಬಹುತೇಕ ಗ್ರೂಪ್ 'ಬಿ' ಹುದ್ದೆಗಳಿದ್ದವು. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಆಹಾರ ಇಲಾಖೆಯಲ್ಲಿ ಸಹಾಯಕ ನಿರ್ದೇಶಕ ಹುದ್ದೆಗಳಿಗೆ 2014ರ ಬಳಿಕ ನೇಮಕಾತಿಯೇ ನಡೆದಿಲ್ಲ' ಎಂದು ಕೆಎಎಸ್ ಹುದ್ದೆ ಆಕಾಂಕ್ಷಿಯೊಬ್ಬರು ಹೇಳಿದರು.

**ಗೆಜೆಟೆಡ್ ಪ್ರೊಬೇಷನರಿ ಖಾಲಿ ಹುದ್ದೆಗಳು**

| ವೃಂದ | ಎಷ್ಟು |
|---|---|
| ಉಪ ವಿಭಾಗಾಧಿಕಾರಿ | 40 |
| ಡಿವೈಎಸ್‌ಪಿ | 30 |
| ತಹಶೀಲ್ದಾರ್ | 135 |
| ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ | 77 |
| ಪೌರಾಯುಕ್ತ (ಗ್ರೇಡ್–2) | 91 |
| ಕಾರ್ಮಿಕ ಅಧಿಕಾರಿ | 23 |
| ವಾಣಿಜ್ಯ ತೆರಿಗೆ ಅಧಿಕಾರಿ | 150 |


(ಆಹಾರ, ಹಿಂದುಳಿದ ವರ್ಗ, ಸಮಾಜ ಕಲ್ಯಾಣ, ನಗರಾಭಿವೃದ್ಧಿ, ಸಹಕಾರ, ಬಂದೀಖಾನೆ, ಪ್ರವಾಸೋದ್ಯಮ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಗಳಲ್ಲೂ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳು ಖಾಲಿ ಇವೆ)

## ಸುದ್ದಿ 2 ನಿಮಿಷ

### ಕಾಲಚಕ್ರದಲ್ಲಿ ಏನು ಬೇಕಾದರೂ ಆಗಬಹುದು: ವಿಶ್ವನಾಥ್

ಕೆ.ಆರ್.ನಗರ, (ಮೈಸೂರು ಜಿಲ್ಲೆ): '40 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ರಾಜಕಾರಣ ಹೀಗೆಯೇ ಇರುತ್ತದೆ ಎನ್ನಲಾಗದು. ಕಾಲಚಕ್ರದಲ್ಲಿ ಏನು ಬೇಕಾದರೂ ಆಗಬಹುದು' ಎಂದು ವಿಧಾನಪರಿಷತ್ ಸದಸ್ಯ ಬಿಜೆಪಿಯ ಎ.ಎಚ್.ವಿಶ್ವನಾಥ್ ಹೇಳಿದರು.

'ಮತ್ತೆ ಕಾಂಗ್ರೆಸ್ ಸೇರುವಿರಾ?' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದರು. 'ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಈ ಯಾವ ಪಕ್ಷಗಳೂ ಮುಳುಗುವ ಹಡಗುಗಳಲ್ಲ. ಅವು ಜನರೊಂದಿಗೆ ತೇಲುವಂಥವು; ಇರುವಂಥವು' ಎಂದು ಅವರು ಹೇಳಿದರು.



'ಭಾರತ್ ಜೋಡೊ ಯಾತ್ರೆಯಿಂದ ಕಾಂಗ್ರೆಸ್‌ಗೆ ಶಕ್ತಿ ಬರುತ್ತಿದೆ. ರಾಹುಲ್ ಗಾಂಧಿ ಬಗ್ಗೆ ಜನರಲ್ಲಿ ಕೆಟ್ಟ ಅಭಿಪ್ರಾಯಗಳನ್ನು ವಿರೋಧಿಗಳು ಮೂಡಿಸಿದ್ದರು. ಪಾದಯಾತ್ರೆಯ ಮೂಲಕ ದೇಶದಲ್ಲಿ ಪರ್ಯಾಯ ನಾಯಕ ಇದ್ದಾನೆ ಎಂದು ಅವರು ತೋರಿಸಿಕೊಟ್ಟಿದ್ದಾರೆ' ಎಂದರು.

'10 ಲಕ್ಷ ಉದ್ಯೋಗದ ಭರವಸೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಮೀಸಲಾತಿ ಆಧಾರದಲ್ಲಿ ಭರ್ತಿಗೆ ಕ್ರಮ ಕೈಗೊಳ್ಳಬೇಕು. ದುರ್ಬಲ ವರ್ಗದವರು ಉದ್ಯೋಗದಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು' ಎಂದು ವಿಶ್ವನಾಥ್ ಅವರು ಒತ್ತಾಯಿಸಿದರು.

### ಕಾರಿನಲ್ಲಿ ಸ್ಫೋಟ: ಭಯೋತ್ಪಾದನಾ ಕೃತ್ಯದ ಸಾಧ್ಯತೆ ತಳ್ಳಿಹಾಕದ ಪೊಲೀಸರು

ಚೆನ್ನೈ: ಕೊಯಮತ್ತೂರಿನ ಉಕ್ಕಡಂ ದೇವಾಲಯದ ಬಳಿ ಕಾರಿನಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು ಯುವಕನೊಬ್ಬ ಮೃತಪಟ್ಟಿರುವ ಘಟನೆಯ ಹಿಂದೆ ಭಯೋತ್ಪಾದನಾ ಕೃತ್ಯದ ಸಾಧ್ಯತೆಯನ್ನು ಪೊಲೀಸರು ತಳ್ಳಿಹಾಕಿಲ್ಲ.

ಈ ಸಂಬಂಧ ಮೃತ ಯುವಕನ ಆಪ್ತರಾಗಿರುವ 9 ಮಂದಿಯನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಭಾನುವಾರ ಬೆಳಿಗ್ಗೆ ಕಾರಿನಲ್ಲಿ ಸಿಲಿಂಡರ್ ಸ್ಫೋಟಗೊಂಡು ಅದರಲ್ಲಿದ್ದ ಜಮೀಶಾ ಮುಬಿನ್ ಎಂಬಾತ ಮೃತಪಟ್ಟಿದ್ದ. ಶ್ರೀಲಂಕಾದಲ್ಲಿ ಈಸ್ಟರ್ ದಿನದಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಮುಬಿನ್ ಸೇರಿದಂತೆ ಐದು ಮಂದಿಯನ್ನು 2019ರಲ್ಲಿ ರಾಷ್ಟ್ರೀಯ ತನಿಖಾ ದಳ ವಿಚಾರಣೆಗೆ ಒಳಪಡಿಸಿತ್ತು. ಸಿಲಿಂಡರ್ ಸ್ಫೋಟದ ಬಳಿಕ ಪೊಲೀಸರು ಮುಬಿನ್ ಮನೆಯಲ್ಲಿ ಶೋಧ ನಡೆಸಿದಾಗ ಸ್ಫೋಟಕ ವಸ್ತುಗಳು ಲಭಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಬಿನ್ ದಾಳಿಗೆ ಸಂಚು ರೂಪಿಸಿದ್ದ ಎಂಬುದಕ್ಕೆ ಇದುವರೆಗೆ ಯಾವುದೇ ಪುರಾವೆಗಳು ಸಿಕ್ಕಿಲ್ಲ. ಆದರೆ ಮುಬಿನ್ ಮತ್ತು ಇತರ ಮೂವರು ಮನೆಯಿಂದ ಭಾರವಾದ ವಸ್ತುವೊಂದನ್ನು ಕೊಂಡೊಯ್ಯುತ್ತಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದು ಅಡುಗೆ ಅನಿಲ ಸಿಲಿಂಡರ್ ಇರಬಹುದು ಎಂದಿದ್ದಾರೆ.

ಈ ಕುರಿತು ತನಿಖೆ ನಡೆಸಲು ಪೊಲೀಸರು ಆರು ವಿಶೇಷ ತಂಡಗಳನ್ನು ರಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

## ಮೀಸಲಾತಿ ಹೆಚ್ಚಳಕ್ಕೆ ಬೊಮ್ಮಾಯಿ 'ಚಾಣಕ್ಯ' ವಿದ್ಯೆ: ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಹೆಚ್ಚಳ ಆಗದಂತೆ ಪ್ರಯತ್ನಿಸಿದವರೂ ಇದ್ದರು. ಆದರೆ, ನಮ್ಮ ಮುಖ್ಯಮಂತ್ರಿ ಚಾಣಕ್ಯರು, ಚಾಣಕ್ಯ ವಿದ್ಯೆ ಪ್ರಯೋಗ ಮಾಡಿ, ಮೀಸಲಾತಿ ಹೆಚ್ಚಳದ ದೃಢ ನಿರ್ಧಾರ ತೆಗೆದುಕೊಂಡು ಸುಗ್ರೀವಾಜ್ಞೆಯನ್ನೂ ಹೊರಡಿಸಿದರು' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ಕಳೆದ 257 ದಿನಗಳಿಂದ ಹೋರಾಟ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅವರಿಗೆ ಸೋಮವಾರ ಸರ್ಕಾರದ ಆದೇಶ ಪ್ರತಿಯನ್ನು ನೀಡಿದ ಬಳಿಕ ಅವರು ಮಾತನಾಡಿದರು.

'ಇದು ಜೇನುಗೂಡಿಗೆ ಕಲ್ಲೆಸೆಯುವ ಕೆಲಸವೆಂದು ಬಹಳಷ್ಟು ಜನ ಹೇಳಿದ್ದರು. ಆದರೂ ಹೆಚ್ಚಳ ಮಾಡುವ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಸ್ವಾಮೀಜಿ ಬಹಳ ಕಾಲ ಧರಣಿಯಲ್ಲೇ ಇರಲಿ ಎಂದು ಹಲವು ಜನ ಆಶಿಸಿದ್ದರು. ಬದ್ಧತೆಯಿಂದ ನಮ್ಮ ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡಿದೆ. ವಾಲ್ಮೀಕಿ ಸಮಯದಾಯದ ಪೀಠಾಧ್ಯಕ್ಷರಿಗೆ ರಾಜ್ಯ ಪತ್ರ ಕೊಟ್ಟಿದ್ದೇವೆ. ಸಮುದಾಯ ಆನಂದದಿಂದ ವಿಶೇಷ ದೀಪಾವಳಿ ಆಚರಿಸಲಿ' ಎಂದರು.

'ನಮ್ಮ ಮುಖ್ಯಮಂತ್ರಿಯವರು ಚಾಣಕ್ಯ ಇದ್ದಂತೆ, ಯಾವ ಸಮಯದಲ್ಲಿ ಏನು ಮಾಡಬೇಕು. ಯಾವಾಗ ಕಲ್ಲು ಹೊಡೆದರೆ ಮಾವಿನಕಾಯಿ ಬೀಳುತ್ತದೆ ಎಂಬುದು ಅವರಿಗೆ ಗೊತ್ತು. ಆದ್ದರಿಂದ, ನೀವು ಹರ್ಷದಿಂದ ದೀಪಾವಳಿಯನ್ನು ಆಚರಿಸಿ. ಮೀಸಲಾತಿ ಹೆಚ್ಚಳ ದೀಪಾವಳಿಯ ಕೊಡುಗೆ' ಎಂದು ಅಶೋಕ ಅವರು ಹೇಳಿದರು.

'ಮೀಸಲಾತಿಗೆ ಸಂಬಂಧಿಸಿದಂತೆ ಒಕ್ಕಲಿಗ ಮತ್ತು ಇತರ ಸಮುದಾಯಗಳ ಬೇಡಿಕೆ ಬಗ್ಗೆ, ನಾವು ತೆರೆದ ಮನಸ್ಸು ಹೊಂದಿದ್ದೇವೆ. ನಮ್ಮ ಸಮುದಾಯದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಕರೆ ಮಾಡಿದ್ದರು. ಎಲ್ಲ ಸಮುದಾಯಗಳಿಗೂ ನ್ಯಾಯ ಕೊಡಿಸುವ ಕೆಲಸ ಮಾಡುತ್ತೇವೆ ಎಂದಿದ್ದೇನೆ. ಸ್ವಾಮೀಜಿಯವರ ಜೊತೆ ವಿವರವಾಗಿ ಮಾತನಾಡಿದ ನಂತರ ನಿರ್ಧಾರ ಮಾಡುತ್ತೇವೆ' ಎಂದರು.

### ವಾಲ್ಮೀಕಿ ಸ್ವಾಮೀಜಿ ಧರಣಿ ಅಂತ್ಯ



ವಾಲ್ಮೀಕಿ ಪ್ರಸನ್ನಾನಂದ ಶ್ರೀ

ಬೆಂಗಳೂರು: ಮೀಸಲಾತಿ ಹೆಚ್ಚಳಕ್ಕಾಗಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅವರು 257 ದಿನಗಳಿಂದ ನಡೆಸಿದ್ದ ಧರಣಿ ಸತ್ಯಾಗ್ರಹವನ್ನು ಸೋಮವಾರ ಮುಕ್ತಾಯಗೊಳಿಸಿದರು.

ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸುಗ್ರೀವಾಜ್ಞೆಯ ಅಧಿಸೂಚನೆ ಪ್ರತಿಯನ್ನು ಕಂದಾಯ ಸಚಿವ ಆರ್. ಅಶೋಕ ಅವರು ನೀಡಿದ ಬಳಿಕ ಸುದ್ದಿಗಾರರ ಜತೆ ಸ್ವಾಮೀಜಿ ಮಾತನಾಡಿದರು.

'ಹಿಂದಿನ ಮುಖ್ಯಮಂತ್ರಿಗಳು ನಮ್ಮ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದರು. ತೀರ್ಮಾನ ತೆಗೆದುಕೊಳ್ಳಲು ಹಿಂದೇಟು ಹಾಕಿದರು. ಆದರೆ ಈಗಿನ ಮುಖ್ಯಮಂತ್ರಿ ಬೊಮ್ಮಾಯಿ ಅವರು ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ. ಮೀಸಲಾತಿ ಹೋರಾಟದಲ್ಲಿ ಶಾಸಕ ರಾಜೂಗೌಡ ಅವರ ಪಾತ್ರ ಮಹತ್ವದ್ದು, ಅವರೊಬ್ಬ ಡೈನಾಮಿಕ್ ಹೀರೋ' ಎಂದು ಶ್ಲಾಘಿಸಿದರು.

## ವೈದ್ಯಕೀಯ ಪಿಜಿ: ಸೇವಾನಿರತರ ಕೋಟಾ ಇಳಿಕೆ– ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022-23ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಲ್ಲಿ ಸೇವಾನಿರತ ಅಭ್ಯರ್ಥಿಗಳಿಗೆ ಸರ್ಕಾರಿ ಕೋಟಾದ ಸೀಟುಗಳ ಸಂಖ್ಯೆಯನ್ನು ಶೇ 30 ರಿಂದ ಶೇ 15ಕ್ಕೆ ಇಳಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ, ಸೀಟ್ ಮ್ಯಾಟ್ರಿಕ್ಸ್ ಪ್ರಕ್ರಿಯೆಯನ್ನೂ ರದ್ದುಗೊಳಿಸಿ ಆದೇಶಿಸಿದೆ.

'ಸರ್ಕಾರದ ನಿರ್ಧಾರ ಏಕ ಪಕ್ಷೀಯ ಮತ್ತು ಆಕ್ಷೇಪಾರ್ಹವಾಗಿದೆ. ಸೀಟುಗಳನ್ನು ಶೇ 30 ರಿಂದ ಶೇ15ಕ್ಕೆ ಕಡಿಮೆ ಮಾಡಿರು ವುದಕ್ಕೆ ಸೂಕ್ತ ಕಾರಣಗಳನ್ನು ಉಲ್ಲೇಖಿಸಿಲ್ಲ. ಆದ್ದರಿಂದ, ಸಂಬಂಧಿತ ಮಾನದಂಡಗಳನ್ನು ಪರಿಗಣಿಸುವ ಮೂಲಕ ಸೇವಾನಿರತ ಅಭ್ಯರ್ಥಿಗಳಿಗೆ ಸೀಟುಗಳ ಕೋಟಾವನ್ನು ಹೊಸದಾಗಿ ಸೂಚಿಸುವ ಮತ್ತು ಸೀಟುಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಸ್ವತಂತ್ರವಿದೆ' ಎಂದು ನ್ಯಾಯಪೀಠ ಹೇಳಿದೆ.

ಸೀಟುಗಳ ಸಂಖ್ಯೆಯನ್ನು ಶೇ15ಕ್ಕೆ ಇಳಿಸಿ ರಾಜ್ಯ ಸರ್ಕಾರ ಅಕ್ಟೋಬರ್ 6ರಂದು ಹೊರಡಿಸಿದ್ದ ಅಧಿಸೂಚನೆ ಹಾಗೂ ಅಕ್ಟೋಬರ್ 9ರಂದು ನಡೆದ ಸೀಟ್ ಮ್ಯಾಟ್ರಿಕ್ಸ್ ಪ್ರಕ್ರಿಯೆಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಚಿಂತಾಮಣಿಯ ಡಾ.ಕೆ.ಎಸ್.ಸ್ವಾತಿ ಮತ್ತು ಹಳಿಯಾಳ ತಾಲ್ಲೂಕಿನ ಮುರ್ಕವಾಡದ ಡಾ.ಭೀಮಣ್ಣ ಎಸ್.ಸಿನ್ನೂರ ಈ ರಿಟ್ ಅರ್ಜಿ ಸಲ್ಲಿಸಿ ದ್ದರು.

ಅರ್ಜಿದಾರರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಆದೇಶದಿಂದಾಗಿ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ಹೊಸ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾದ ಸನ್ನಿವೇಶ ಎದುರಾದಂತಾಗಿದೆ.

## ಸಾಮೂಹಿಕ ನಾಯಕತ್ವದಲ್ಲಿ ಮತ್ತೊಂದು ಯಾತ್ರೆ:ಡಿಕೆಶಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಎಲ್ಲರ ಸಹಕಾರ ಮತ್ತು ಪರಿಶ್ರಮದಿಂದ ಭಾರತ್ ಜೋಡೊ ಯಾತ್ರೆ ಯಶಸ್ವಿ
- ಮತ್ತೊಂದು ಯಾತ್ರೆಯ ಬಗ್ಗೆ ಎಲ್ಲ ನಾಯಕರೊಂದಿಗೆ ಚರ್ಚಿಸಿ ತೀರ್ಮಾನ: ಡಿಕೆಶಿ

ಬೆಂಗಳೂರು: 'ಪಕ್ಷದ ವತಿಯಿಂದ ರಾಜ್ಯದಲ್ಲಿ ಮತ್ತೊಂದು ಯಾತ್ರೆ ಹಮ್ಮಿಕೊಳ್ಳುವ ಬಗ್ಗೆ ಎಲ್ಲ ನಾಯಕರು ಚರ್ಚಿಸಿ ತೀರ್ಮಾನಿಸುತ್ತೇವೆ. ಸಾಮೂಹಿಕ ನಾಯಕತ್ವದಲ್ಲಿ ಯಾತ್ರೆ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಈ ಯಾತ್ರೆಯ ವಿಚಾರವಾಗಿ ಸದ್ಯವೇ ಚರ್ಚೆ ಮಾಡುತ್ತೇವೆ. ಇದು ನಾನೊಬ್ಬನೇ ತೀರ್ಮಾನಿಸುವ ವಿಚಾರವಲ್ಲ' ಎಂದರು.

'ಭಾರತ ಜೋಡೊ ಯಾತ್ರೆಯಿಂದ ದೇಶಕ್ಕೆ, ರಾಜ್ಯಕ್ಕೆ, ನೊಂದ ಜನರಿಗೆ ಹಾಗೂ ಪಕ್ಷಕ್ಕೆ ಲಾಭ ಆಗಿದೆ. ನಾನು ಪಕ್ಷದ ಅಧ್ಯಕ್ಷನಾಗಿದ್ದ ಕಾಲದಲ್ಲಿ ಇಂಥ ಯಾತ್ರೆ ನಡೆದಿದೆ ಎಂಬುದು ಹೆಮ್ಮೆಯ ವಿಚಾರ. ಮೇಕೆದಾಟು ಪಾದಯಾತ್ರೆ, ಸ್ವಾತಂತ್ರ್ಯ ನಡಿಗೆ ಹಾಗೂ ಭಾರತ ಐಕ್ಯತಾ ಯಾತ್ರೆ ಮತ್ತೆ ಮಾಡಲು ಸಾಧ್ಯವಿಲ್ಲ' ಎಂದರು.

'ಬಳ್ಳಾರಿ ಸಮಾವೇಶದಲ್ಲಿ ಕೆಲವು ಅವ್ಯವಸ್ಥೆಯಾಗಿದ್ದು ಶಿವಕುಮಾರ್ ಜವಾಬ್ದಾರಿ ತೆಗೆದುಕೊಳ್ಳದಿದ್ದರೆ ಬೇರೆಯವರಿಂದ ಅದನ್ನು ನಿರ್ವಹಿಸಲು ಸಾಧ್ಯವಿಲ್ಲವೇ' ಎಂಬ ಪ್ರಶ್ನೆಗೆ, 'ಎಲ್ಲರೂ ಶಿವಕುಮಾರ್, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಸುರೇಶ್ ಆಗಲು ಸಾಧ್ಯವಿಲ್ಲ. ಯುವ ಕಾಂಗ್ರೆಸ್ ಅಧ್ಯಕ್ಷರು ಯಾತ್ರೆ ಸಾಗಿದ ನಂತರ ಬಿದ್ದಿದ್ದ ಕಸವನ್ನು ಎತ್ತಿ ಹಾಕಿದ್ದಾರೆ. ಪಕ್ಷ ಕಟ್ಟುವ, ಜನ ಸಂಘಟಿಸುವ ಹಾಗೂ ಕಸ ಎತ್ತುವ ಕೆಲಸ ಮಾಡಿದ್ದಾರೆ. ನಾನು ಯಾರ ಶ್ರಮವನ್ನೂ ಅಲ್ಲಗೆಳೆಯುವುದಿಲ್ಲ. ಎಲ್ಲರ ಸಹಕಾರ, ಪರಿಶ್ರಮದಿಂದ ಯಾತ್ರೆ ಯಶಸ್ವಿಯಾಗಿದೆ' ಎಂದರು.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದ ಕುರಿತು ಪ್ರಸ್ತಾಪಿಸಿದ ಅವರು, 'ಪರಿಶಿಷ್ಟರಿಗೆ ಮೀಸಲಾತಿ ಆಧಾರದ ಮೇಲೆ ಕೆಲಸ ಸಿಗುತ್ತಿರುವುದು ಕಾಂಗ್ರೆಸ್ ಪಕ್ಷದ ಕೂಸು. ಸುಗ್ರೀವಾಜ್ಞೆ ಬದಲು ವಿಶೇಷ ಅಧಿವೇಶನ ಕರೆದು, ಮೀಸಲಾತಿಗೆ ಅನುಮೋದನೆ ಪಡೆದು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲಿ. ಕೇವಲ ಸುಗ್ರೀವಾಜ್ಞೆ ಮೂಲಕ ಮೂಗಿಗೆ ತುಪ್ಪ ಸವರುವ ಪ್ರಯತ್ನ ಬೇಡ' ಎಂದರು.

ಒಕ್ಕಲಿಗರಿಗೆ ಮೀಸಲಾತಿ ಬಗ್ಗೆ ಕೇಳಿದ ಪ್ರಶ್ನೆಗೆ, 'ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ' ಎಂದು ಅವರು ಉತ್ತರಿಸಿದರು.



**ಪಟಾಕಿ ಭೀತಿ** ಚಿಣ್ಣರು ಪಟಾಕಿ ಹೊಡೆಯುವುದನ್ನು ಸಾಮಾನ್ಯವಾಗಿ ಸಂಭ್ರಮಿಸುತ್ತಾರೆ. ಆದರೆ, ಬೆಂಗಳೂರಿನಲ್ಲಿ ಮಗುವೊಂದು ದ್ವಿಚಕ್ರವಾಹನದಲ್ಲಿ ಸಂಚರಿಸುವಾಗ ಸುತ್ತಲೂ ಪಟಾಕಿಯ ಹೊಗೆ ಆವರಿಸಿದ ಕ್ಷಣ ಭಯಭೀತಗೊಂಡಿತು –ಪ್ರಜಾವಾಣಿ ಚಿತ್ರ/ಕಿಶೋರ್‌ಕುಮಾರ್ ಬೋಳಾರ

### ಹೊಸ ಯೋಜನೆಗಳನ್ನು ಪ್ರಕಟಿಸಿದ ಡಿ.ವೀರೇಂದ್ರ ಹೆಗ್ಗಡೆ

## ತುರ್ತು ನೆರವಿಗಾಗಿ 3 ಸಾವಿರ 'ಶೌರ್ಯ' ಸ್ವಯಂಸೇವಕರ ತಂಡ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಗ್ರಾಮೀಣ ಪ್ರದೇಶಗಳಲ್ಲಿ ವಿಪತ್ತು ಸಂಭವಿಸಿದಾಗ ತುರ್ತು ನೆರವು ಮತ್ತು ರಕ್ಷಣೆಗಾಗಿ ಮೂರು ಸಾವಿರ 'ಶೌರ್ಯ' ಸ್ವಯಂ ಸೇವಕರ ತಂಡಗಳನ್ನು ರಚಿಸಲಾಗಿದೆ. ಸದ್ಯದಲ್ಲಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದಾರೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಧರ್ಮಸ್ಥಳದಲ್ಲಿ ಸೋಮವಾರ ನಡೆದ, ತಮ್ಮ 55ನೇ ಪಟ್ಟಾಭಿಷೇಕ ವರ್ಧಂತ್ಯುತ್ಸವ ಸಮಾರಂಭದಲ್ಲಿ ಅವರು ಈ ಯೋಜನೆ ಪ್ರಕಟಿಸಿದರು.

ಸರ್ಕಾರದ ಸೇವೆಗಳನ್ನು ಜನರಿಗೆ ತಲುಪಿಸಲು ಈಗಾಗಲೇ ಧರ್ಮಸ್ಥಳ ಸಂಸ್ಥೆಯಿಂದ 6,500 ಸಾಮಾನ್ಯ ಸೇವಾ ಕೇಂದ್ರಗಳನ್ನು ಪ್ರಾರಂಭಿಸಿದ್ದು, ಈ ವರ್ಷ ಇನ್ನೂ ಒಂದು ಸಾವಿರ ಸಾಮಾನ್ಯ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ರಾಜ್ಯದಲ್ಲಿ 365 ಸರ್ಕಾರಿ ಶಾಲೆಗಳಿಗೆ 2700 ಬೆಂಚು-ಡೆಸ್ಕ್‌ಗಳನ್ನು ವಿತರಿಸಲಾಗುವುದು. ಈ ವರ್ಷ 100 ಕೆರೆಗಳ ಹೂಳೆತ್ತಿ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ. 40 ಶುದ್ಧಗಂಗಾ ಘಟಕಗಳ ಮೂಲಕ ಶುದ್ಧ ಕುಡಿಯುವ ನೀರು ಪೂರೈಸಲಾಗುವುದು. ಉಜಿರೆಯಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ₹ 47 ಲಕ್ಷ ನೆರವು ನೀಡಲಾಗುವುದು. ಅನಾಥ ಹಿರಿಯ ನಾಗರಿಕರ ಪಾಲನೆ ಮತ್ತು ಪೋಷಣೆಗಾಗಿ ₹ 5 ಕೋಟಿ ವೆಚ್ಚದಲ್ಲಿ 500 ಮನೆಗಳನ್ನು ನಿರ್ಮಿಸಲಾಗುವುದು ಎಂದು ಹೆಗ್ಗಡೆಯವರು ಹೇಳಿದರು.

ಕಳೆದ ವರ್ಷ ₹ 6 ಕೋಟಿ ವೆಚ್ಚದಲ್ಲಿ ಮೂರು ಆಸ್ಪತ್ರೆಗಳಿಗೆ ಮೂರು ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ನೀಡಿದ್ದು, ಈ ವರ್ಷ ಇನ್ನೂ ಮೂರು ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ನೀಡಲಾಗುವುದು. ಮೈಸೂರಿನಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಈ ವರ್ಷ 7,312 ದೇವಸ್ಥಾನಗಳಿಗೆ ₹ 89 ಕೋಟಿ ನೆರವು ನೀಡಲಾಗಿದೆ. ಧಾರವಾಡದಲ್ಲಿ 200 ಹಾಸಿಗೆ ಸಾಮರ್ಥ್ಯದ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಶೀಘ್ರವೇ ಪ್ರಾರಂಭಗೊಳ್ಳಲಿದೆ. ಧರ್ಮಸ್ಥಳದಲ್ಲಿ ಕ್ಯೂ ಕಾಂಪ್ಲೆಕ್ಸ್ ಕಾಮಗಾರಿ ವರ್ಷದೊಳಗೆ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ತಮ್ಮ ರಾಜ್ಯಸಭಾ ಸದಸ್ಯರ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಹಾಲು ಉತ್ಪಾದನೆಗೆ ಪ್ರೋತ್ಸಾಹ ನೀಡಲು ಉದ್ದೇಶಿಸಿದ್ದು ಈಗಾಗಲೇ ಸಮೀಕ್ಷೆ ನಡೆಸಲಾಗಿದೆ ಎಂದು ಅವರು ಹೇಳಿದರು.

## ಎನ್‌ಸಿಎಫ್: ಆಟಿಕೆ ಮೂಲಕ ಮಕ್ಕಳ ಕಲಿಕೆಗೆ ಒತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ವರ್ಷದೊಳಗಿನ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ಹಂತದಲ್ಲಿ ಪದ್ಯಗಳು, ಕತೆಗಳು ಮತ್ತು ಆಟಿಕೆಗಳ ಮೂಲಕ ಶಿಕ್ಷಣ ನೀಡಬೇಕು. ಈ ಹಂತದಲ್ಲಿಯೇ ಮಕ್ಕಳಿಗೆ ಸಂಸ್ಕೃತಿ, ಸಂಪ್ರದಾಯ, ಪರಂಪರೆ, ಪದ್ಧತಿ, ಭಾಷೆ, ಭೌಗೋಳಿಕತೆ ಮತ್ತು ಭಾರತದ ಪ್ರಾಚೀನ ಮತ್ತು ಸಮಕಾಲೀನ ಜ್ಞಾನವನ್ನೂ ಕಲಿಸಬೇಕು.

ಇದು ಕೇಂದ್ರ ಶಿಕ್ಷಣ ಸಚಿವಾಲಯ ಕಳೆದ ವಾರದ ಬಿಡುಗಡೆ ಮಾಡಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (ಎನ್‌ಸಿಎಫ್) ಕೆಲವು ಶಿಫಾರಸುಗಳು.

ಎಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಮತ್ತು ಬಾಲ್ಯದ ಆರೈಕೆಯ ಕ್ರಮಗಳ ಕುರಿತು ಎನ್‌ಸಿಎಫ್ ಶಿಫಾರಸು ಮಾಡಿದೆ.

**ಮನೆ ಕಲಿಕೆಯೇ ಮುಖ್ಯ:** ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮನೆ ಮಾತ್ರವೇ ಕಲಿಕೆಯ ವಾತಾವರಣ ಆಗಿರಬೇಕು ಎಂದು ಎನ್‌ಸಿಎಫ್ ಸೂಚಿಸಿದೆ. ಈ ಮಕ್ಕಳಿಗೆ ಮನೆಯ ಪರಿಸರವು ಸಾಕಷ್ಟು ಪೌಷ್ಟಿಕಾಂಶ, ಉತ್ತಮ ಆರೋಗ್ಯ, ಆರೈಕೆ, ಸುರಕ್ಷತೆ ಮತ್ತು ಬಾಲ್ಯದ ಕಲಿಕೆಯನ್ನು ಉತ್ತೇಜಿಸುತ್ತದೆ ಎಂದು ಅದು ಹೇಳಿದೆ.

ಎಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಆರಂಭಿಕ ಕಲಿಕೆಯು ವರ್ಣಮಾಲೆ, ಭಾಷೆಗಳು, ಸಂಖ್ಯೆಗಳು, ಎಣಿಕೆ, ಬಣ್ಣಗಳು, ಆಕಾರಗಳು, ಚಿತ್ರಕಲೆ, ಒಳಾಂಗಣ ಮತ್ತು ಹೊರಾಂಗಣ ಆಟಗಳು, ಒಗಟುಗಳನ್ನು ಒಳಗೊಂಡಿರಬೇಕು. ಕಲೆ, ಕರಕುಶಲತೆ, ಸಂಗೀತ ಕಲಿಕೆಗೂ ಒತ್ತು ನೀಡಬೇಕು ಎಂದು ಶಿಫಾರಸು ಮಾಡಲಾಗಿದೆ.

ಮಕ್ಕಳಿಗೆ ಆಟದ ಮಹತ್ವದ ಬಗ್ಗೆ ಎನ್‌ಸಿಎಫ್ ಒತ್ತಿ ಹೇಳುತ್ತದೆ. ಆಟವು ಮಕ್ಕಳಲ್ಲಿ ಕುತೂಹಲ, ಹಾಗೂ ತೃಪ್ತಿ ನೀಡುವಂತೆ ಇರಬೇಕು ಎಂದು ಎನ್‌ಸಿಎಫ್ ಹೇಳಿದೆ.

### ಬೆಳಗಾವಿ: ರಾಣಿ ಚನ್ನಮ್ಮನ ನೆಲದಲ್ಲಿ ಅದ್ದೂರಿ ಉತ್ಸವ, ಮನಸೂರೆಗೊಂಡ ವಿವಿಧ ಜಾನಪದ ಕಲಾಮೇಳಗಳು

## ಕಿತ್ತೂರು ಉತ್ಸವಕ್ಕೆ ಹರಿದುಬಂತು ಜನಸಾಗರ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ರಾಣಿ ಚನ್ನಮ್ಮನ ಕರ್ಮಭೂಮಿಯಲ್ಲಿ ಸೋಮವಾರ ನಡೆದ ಕಿತ್ತೂರು ಉತ್ಸವದ ಮೆರವಣಿಗೆಗೆ ಜನಸಾಗರವೇ ಹರಿದುಬಂತು.

ಬ್ಯಾಂಡ್, ಗೆಜ್ಜೆಮೇಳ, ಹುಲಿ ವೇಷ, ಗೊಂಬೆ ಕುಣಿತ, ಭಜನೆ ಸೇರಿ ವಿವಿಧ ಕಲಾತಂಡಗಳ ಮೆರುಗಿನೊಂದಿಗೆ 4 ಕಿ.ಮೀ. ದೂರದವರೆಗೆ ಅದ್ದೂರಿ ಮೆರವಣಿಗೆ ನಡೆಯಿತು.

ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರು. ಸಾರೋಟದ ಕುದುರೆಗಳು ಕೋಡಿ ಹಾಗೂ ಆನೆ ಚನ್ನಮ್ಮನ ಚಿತ್ರ ಹೊತ್ತು ಸಾಗಿದವು.

ಕಿತ್ತೂರು ಸೇನೆ 1824 ಅ.23ರಂದು ಬ್ರಿಟಿಷ್ ಸೇನೆಯನ್ನು ಸೋಲಿಸಿತು. ಆ ವಿಜಯದ ಸಂಕೇತವಾಗಿ ಉತ್ಸವ ಆಚರಿಸಲಾಗುತ್ತಿದೆ. ಈ ಬಾರಿ ರಾಜ್ಯ ಮಟ್ಟದಲ್ಲಿ ಆಚರಿಸುತ್ತಿರುವುದು ಈ ಭಾಗದವರ ಸಂಭ್ರಮವನ್ನು ಇಮ್ಮಡಿಗೊಳಿಸಿದೆ.





ಚನ್ನಮ್ಮನ ಕಿತ್ತೂರಿನಲ್ಲಿ ಸೋಮವಾರ ಕಿತ್ತೂರು ಉತ್ಸವದ ಅಂಗವಾಗಿ ವರ್ಣರಂಜಿತ ಮೆರವಣಿಗೆ ನಡೆಯಿತು (ಎಡಚಿತ್ರ) ಜಾನಪದ ಕಲಾಮೇಳದಲ್ಲಿ ಪೌರಾಣಿಕ ವೇಷಧಾರಿಗಳು ರೂಪಕ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಶಾಸಕ ಮಹಾಂತೇಶ ದೊಡ್ಡಗೌಡರ ಮತ್ತು ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಉತ್ಸವಕ್ಕೆ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಕಿತ್ತೂರು ಸಂಸ್ಥಾನದ ನಂದಿಧ್ವಜ ಆರೋಹಣ ಮಾಡಿದರು.

ನಿಚ್ಚಣಕಿವರೆಗೆ ಮೆರವಣಿಗೆ ನಡೆಯಿತು. ಮೆರವಣಿಗೆ ಉದ್ಘಾಟಿಸಬೇಕಿದ್ದ ಜಿಲ್ಲಾ ಉಸ್ತುವಾರಿ ಸಚಿವರು ಬರಲಿಲ್ಲ. ಕಿತ್ತೂರು, ಬೈಲಹೊಂಗಲ ಶಾಸಕರ ಹೊರತಾಗಿ ಜಿಲ್ಲೆಯ ಇತರ ಜನಪ್ರತಿನಿಧಿಗಳೂ ಇತ್ತ ಸುಳಿಯಲಿಲ್ಲ.

ಜನೋತ್ಸವದಲ್ಲಿ ಉತ್ಸಾಹ ಮತ್ತು ಹುಮ್ಮಸ್ಸಿಗೂ ಕೊರತೆ ಇರಲಿಲ್ಲ.

## ಯುವತಿ ಮೇಲೆ ಅತ್ಯಾಚಾರ ಆರೋಪ: ಸಿಪಿಐ ಅಮಾನತು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಿವೇಶನ ಕುರಿತ ವಿವಾದ ಬಗೆಹರಿಸುವ ನೆಪದಲ್ಲಿ ಯುವತಿಯೊಬ್ಬರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ಜಿಲ್ಲೆಯ ಚಳ್ಳಕೆರೆ ಪೊಲೀಸ್ ಠಾಣೆ ಸಿಪಿಐ ಜಿ.ಬಿ. ಉಮೇಶ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿದೆ.

'5 ವರ್ಷಗಳಿಂದ ನಿರಂತರವಾಗಿ ಅತ್ಯಾಚಾರವೆಸಗಿದ್ದಲ್ಲದೆ, ನಾಲ್ಕೈದು ಬಾರಿ ಗರ್ಭಪಾತ ಮಾಡಿಸಿದ್ದಾರೆ. ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಬಿ.ಇಡಿ ಓದುತ್ತಿರುವ ಯುವತಿಯು ಭಾನುವಾರ ಚಿತ್ರದುರ್ಗದ ಮಹಿಳಾ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಅತ್ಯಾಚಾರ ಮತ್ತು ಜೀವ ಬೆದರಿಕೆ ಆರೋಪ ಹಿನ್ನೆಲೆಯಲ್ಲಿ ಸಿಪಿಐ ಉಮೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ದಾವಣಗೆರೆ ಪೂರ್ವ ವಲಯ ಐಜಿಪಿ ತ್ಯಾಗರಾಜನ್ ಆದೇಶಿಸಿದ್ದಾರೆ.

ಭಾನುವಾರ ದೂರು ದಾಖಲಾದ ನಂತರ ಸಿಪಿಐ ಜಿ.ಬಿ.ಉಮೇಶ್ ನಾಪತ್ತೆಯಾಗಿದ್ದಾರೆ.



ಜಿ.ಬಿ.ಉಮೇಶ್

**ಘಟನೆ ವಿವರ:** '5 ವರ್ಷಗಳ ಹಿಂದೆ ಉಮೇಶ್ ದಾವಣಗೆರೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ವೇಳೆ ನಿವೇಶನದ ವಿವಾದ ಬಗೆಹರಿಸುವ ವಿಚಾರ ಕುರಿತು ಸಂಪರ್ಕಿಸಿದಾಗ ನೆರವಿಗೆ ಬಂದಿದ್ದರು. ಬಳಿಕ ಈ ನೆರವನ್ನೇ ನೆಪವಾಗಿಸಿಕೊಂಡು ಅತ್ಯಾಚಾರ ಎಸಗಿ ದ್ದಾರೆ. ಈಗಾಗಲೇ ಉಮೇಶ್ ಅವರಿಗೆ ಇಬ್ಬರು ಹೆಂಡತಿಯರಿದ್ದಾರೆ. ನನ್ನನ್ನು 3ನೇ ಹೆಂಡತಿಯಂತೆ ಇರಬೇಕು ಎಂಬ ಒತ್ತಡ ಹೇರಿದ್ದಾರೆ. ಮಾತು ಕೇಳದಿದ್ದರೆ ನಿವೇಶನ ಸಿಗದಂತೆ ಮಾಡುತ್ತೇನೆ. ನಿಮ್ಮ ಕುಟುಂಬವನ್ನು ಬೀದಿಗೆ ತರುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದಾರೆ' ಎಂದು ಯುವತಿ ದೂರಿನಲ್ಲಿ ವಿವರಿಸಿದ್ದಾರೆ.

ಈ ಮಧ್ಯೆ, ಸೋಮವಾರ ಠಾಣೆಗೆ ತೆರಳಿ ಹೇಳಿಕೆ ನೀಡಿರುವ ಯುವತಿಯು, 'ಮಾನಸಿಕ ಒತ್ತಡದಿಂದ ನಾನು ದೂರು ನೀಡಿದ್ದೇನೆ. ಉಮೇಶ್ ಯಾವುದೇ ರೀತಿಯ ಲೈಂಗಿಕ ದೌರ್ಜನ್ಯ ನೀಡಿಲ್ಲ' ಎಂದು ಹೇಳಿದ್ದಾರೆ.

ಮಂಗಳವಾರ, ಅಕ್ಟೋಬರ್ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 295 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಜಗದಗಲ ಭಾರತೀಯರ ಬಲ
ಮುಂದಿನ 2 ತಿಂಗಳಲ್ಲಿ ಪ್ರಧಾನಿ 3 ಬಾರಿ ರಾಜ್ಯಕ್ಕೆ 9
ಗುಜರಾತ್: ಶೇ 30ರಷ್ಟು ಕ್ಷೇತ್ರಗಳಲ್ಲಿ ಹೊಸಬರಿಗೆ ಅವಕಾಶ? 9

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) |
|---|---|---|---|
| 59,831 ▲ | 17,730 ▲ | ₹52,400 (ಬೆಂಗಳೂರು) | ₹59,600 (ಬೆಂಗಳೂರು) |



ಉನ್ನತ ಸ್ಥಾನಕ್ಕೇರಿ ಇತಿಹಾಸ ಸೃಷ್ಟಿಸಿದ ಬಿಳಿಯನಲ್ಲದ ಮೊದಲ ವ್ಯಕ್ತಿ • ಇಂದು ಪ್ರಮಾಣ

# ಬ್ರಿಟನ್ ಪ್ರಧಾನಿ ಹುದ್ದೆಗೆ ರಿಷಿ

ಲಂಡನ್ (ಎಎಫ್‌ಪಿ): ಇನ್ಫೊಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಅವರ ಮಗಳು ಅಕ್ಷತಾ ಮೂರ್ತಿ ಅವರ ಗಂಡ ರಿಷಿ ಸುನಕ್ ಅವರು ಸೋಮವಾರ ಇತಿಹಾಸ ಸೃಷ್ಟಿಸಿದ್ದಾರೆ. ಬ್ರಿಟನ್‌ನ ಆಡಳಿತಾರೂಢ ಕನ್ಸರ್ವೇಟಿವ್ ಪಕ್ಷದ ನಾಯಕತ್ವವನ್ನು ಪಡೆದುಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಹೀಗಾಗಿ, ಆ ದೇಶದ ಪ್ರಧಾನಿ ಹುದ್ದೆಗೆ ಆಯ್ಕೆಯಾದ ಬಿಳಿಯನಲ್ಲದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸುನಕ್ ಅವರು ಮಂಗಳವಾರ ರಾಜ ಮೂರನೇ ಚಾರ್ಲ್ಸ್ ಅವರನ್ನು ಭೇಟಿ ಮಾಡಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಸ್ಪರ್ಧೆಯಿಂದ ಸೋಮವಾರ ಹಿಂದಕ್ಕೆ ಸರಿದಾಗಲೇ ಪಕ್ಷದ ನಾಯಕತ್ವವು ರಿಷಿ ಅವರ ಕೈಸೇರುತ್ತದೆ ಎಂಬುದು ಬಹುತೇಕ ಖಚಿತವಾಗಿತ್ತು. ಆಗ ಪೆನಿ ಮಾರ್ಡಂಟ್ ಮಾತ್ರ ಸ್ಪರ್ಧೆಯಲ್ಲಿದ್ದರು. ನಾಮಪತ್ರಕ್ಕೆ ಅಗತ್ಯವಾಗಿದ್ದ ನೂರು ಸಂಸದರ ಬೆಂಬಲ ಪಡೆಯುವಲ್ಲಿ ಅವರು ವಿಫಲರಾದರು. ಹಾಗಾಗಿ, ಅವರು ಹಿಂದಕ್ಕೆ ಸರಿದರು. ಬಳಿಕ, ರಿಷಿ ಅವರ ಗೆಲುವನ್ನು ಘೋಷಿಸಲಾಯಿತು.


ರಿಷಿ ಸುನಕ್ —ಎಎಫ್‌ಪಿ ಚಿತ್ರ

ಬೋರಿಸ್ ಜಾನ್ಸನ್ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ, ನಾಯಕತ್ವಕ್ಕೆ ನಡೆದ ಸ್ಪರ್ಧೆಯಲ್ಲಿ ಲಿಜ್ ಟ್ರಸ್ ಎದುರು ರಿಷಿ ಸೋತಿದ್ದರು. ಆದರೆ, ಪ್ರಧಾನಿ ಹುದ್ದೆಗೇರಿದ 44 ದಿನಗಳಲ್ಲಿಯೇ ಟ್ರಸ್ ಅವರು ರಾಜೀನಾಮೆ ನೀಡುವುದಾಗಿ ಘೋಷಿಸಿದ್ದರಿಂದ ಪಕ್ಷದ ನಾಯಕ ಸ್ಥಾನ ಮತ್ತು ಪ್ರಧಾನಿ ಹುದ್ದೆಗೆ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡಬೇಕಿತ್ತು. ಬೋರಿಸ್ ಜಾನ್ಸನ್ ಅವರ ಸಚಿವ ಸಂಪುಟದಲ್ಲಿ ರಿಷಿ ಅವರು ಹಣಕಾಸು ಸಚಿವರಾಗಿದ್ದರು. ರಿಷಿ ಅವರ ಬಂಡಾಯವೇ ಬೋರಿಸ್ ಅವರು ಹುದ್ದೆ ಕಳೆದುಕೊಳ್ಳುವುದಕ್ಕೂ ಕಾರಣವಾಗಿತ್ತು.

ಪಕ್ಷದ ನಾಯಕತ್ವ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಘೋಷಿಸಿದ್ದ ರಿಷಿ ಅವರಿಗೆ ನೂರು ಸಂಸದರ ಬೆಂಬಲ ಶುಕ್ರವಾರವೇ ದೊರೆತಿತ್ತು. ಈಗ ಅವರಿಗೆ ಸುಮಾರು 200 ಸಂಸದರ ಬೆಂಬಲ ಲಭಿಸಿದೆ. ಭಾರತವು ದೀಪಾವಳಿ ಹಬ್ಬ ಆಚರಿಸುತ್ತಿರುವ ಸಂದರ್ಭದಲ್ಲಿಯೇ ರಿಷಿ ಅವರಿಗೆ ಮಹತ್ವದ ಹುದ್ದೆ ದೊರೆತಿದೆ.

8ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 8

## ದೊಡ್ಡ ಹೊಣೆಗಾರಿಕೆ

ಬ್ರಿಟನ್ ಆರ್ಥಿಕವಾಗಿ ಅತ್ಯಂತ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿ ರಿಷಿ ಅವರಿಗೆ ಪ್ರಧಾನಿ ಹುದ್ದೆ ಸಿಕ್ಕಿದೆ. ಆರ್ಥಿಕ ಪ್ರಗತಿ ಅತ್ಯಂತ ನಿಧಾನಗೊಂಡಿದೆ, ಹಣದುಬ್ಬರ ಏರುತ್ತಲೇ ಇದೆ. ಕೊರತೆ ಬಜೆಟ್‌ನಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣಕಾಸು ವಿಶ್ವಾಸಾರ್ಹತೆ ಕುಗ್ಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣಕಾಸು ವಿಶ್ವಾಸಾರ್ಹತೆಯನ್ನು ಮರಳಿ ಸ್ಥಾಪಿಸುವುದು ರಿಷಿ ಅವರ ಮೊದಲ ಹೊಣೆಗಾರಿಕೆ. ನಿರ್ಗಮಿತ ಪ್ರಧಾನಿ ಟ್ರಸ್ ಅವರ ಆರ್ಥಿಕ ನೀತಿಯು ಬ್ರಿಟನ್‌ನ ಬಾಂಡ್ ಮಾರುಕಟ್ಟೆಯು ನೆಲಕಚ್ಚುವಂತೆ ಮಾಡಿತ್ತು. ತೆರಿಗೆ ಕಡಿತ ಮಾಡುವ ಟ್ರಸ್ ಅವರ ನಿರ್ಧಾರವು ಆರ್ಥಿಕವಾಗಿ ಇನ್ನಷ್ಟು ಸಂಕಷ್ಟಕ್ಕೆ ಕಾರಣವಾಗಿತ್ತು.

ತೆರಿಗೆ ಕಡಿತ ಮಾಡದೆ ರಿಷಿ ಅವರಿಗೂ ಬೇರೆ ದಾರಿ ಇಲ್ಲ. ಹಾಗೆಯೇ ಸರ್ಕಾರದ ವೆಚ್ಚವನ್ನೂ ಕಡಿತ ಮಾಡಬೇಕಿದೆ. ಇವೆಲ್ಲವೂ ಜನಪ್ರಿಯವಲ್ಲದ ನಿರ್ಧಾರಗಳು. ಹೀಗಾಗಿ, ಊಹಿಸಲಾಗದ ರಾಜಕೀಯ ಪರಿಣಾಮಗಳು ಉಂಟಾಗಬಹುದು ಎಂದು ವಿಶ್ಲೇಷಕರು ಹೇಳಿದ್ದಾರೆ.

**ಬ್ರಿಟನ್ ಶ್ರೇಷ್ಠ ದೇಶ. ಆದರೆ, ನಾವು ಈಗ ಭಾರಿ ಆರ್ಥಿಕ ಸವಾಲು ಎದುರಿಸುತ್ತಿದ್ದೇವೆ ಎಂಬುದರಲ್ಲಿಯೂ ಅನುಮಾನವಿಲ್ಲ. ಅರ್ಥ ವ್ಯವಸ್ಥೆಯಲ್ಲಿ ಸ್ಥಿರತೆ ಮತ್ತು ಒಗ್ಗಟ್ಟು ತರುವೆ**

**ರಿಷಿ ಸುನಕ್**
ಕನ್ಸರ್ವೇಟಿವ್ ಪಕ್ಷದ ನಾಯಕ

**ಚಾರಿತ್ರಿಕ ಬಂಧವನ್ನು ಆಧುನಿಕ ಪಾಲುದಾರಿಕೆಯಾಗಿ ಪರಿವರ್ತಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಭಾರತ-ಬ್ರಿಟನ್ ನಡುವಣ 'ಸಜೀವ ಸೇತುವೆ'ಗೆ ವಿಶೇಷ ದೀಪಾವಳಿಯ ಶುಭಾಶಯ**

**ನರೇಂದ್ರ ಮೋದಿ**
ಪ್ರಧಾನಿ

## ಇಂದು ಸಂಜೆ 5.15ಕ್ಕೆ ಪಾರ್ಶ್ವ ಸೂರ್ಯಗ್ರಹಣ

ಬೆಂಗಳೂರು: ಪಾರ್ಶ್ವ ಸೂರ್ಯಗ್ರಹಣವು ಮಂಗಳವಾರ (ಅ. 25) ಸಂಜೆ 5.15ಕ್ಕೆ ಸಣ್ಣ ಪ್ರಮಾಣದಲ್ಲಿ ಕೆಲವು ನಿಮಿಷಗಳ ಕಾಲ ಗೋಚರಿಸಲಿದೆ.

ಸೂರ್ಯಾಸ್ತದ ಸಮಯವಾದ್ದರಿಂದ ದಿಗಂತವು ಶುಭ್ರವಾಗಿ ಗೋಚರಿಸುವಂತಿದ್ದರೆ, ಬೆಂಗಳೂರು ಮಾತ್ರವಲ್ಲದೇ ರಾಜ್ಯದ ಇತರೆ ಭಾಗಗಳಿಂದಲೂ ಗ್ರಹಣವನ್ನು ನೋಡಬಹುದು. ಗ್ರಹಣದ ಸುರಕ್ಷಿತ ವೀಕ್ಷಣೆಗೆ ಸೌರ ಕನ್ನಡಕಗಳು ಅಥವಾ ವೆಲ್ಡರ್ಸ್ ಗ್ಲಾಸ್ ನಂ.14 ಉಪಯೋಗಿಸಬೇಕು. ಸೂರ್ಯ ಅಥವಾ ಗ್ರಹಣವನ್ನು ಬರಿಗಣ್ಣಿನಿಂದ ನೋಡುವುದು ಅಸುರಕ್ಷಿತ ಮತ್ತು ಹಾನಿಕಾರಕವಾಗಿದೆ ಎಂದು ಜವಾಹರಲಾಲ್ ನೆಹರೂ ತಾರಾಲಯ ತಿಳಿಸಿದೆ.

ಬೇರೆ ಬೇರೆ ಪ್ರದೇಶಗಳಲ್ಲಿ ಗೋಚರಿಸುವ ಗ್ರಹಣವನ್ನು ತಾರಾಲಯದ www.taralaya.org ಯೂಟ್ಯೂಬ್ ಚಾನಲ್‌ನಲ್ಲಿ ಮಧ್ಯಾಹ್ನ 2.30ರಿಂದ ನೇರ ಪ್ರಸಾರ ಮಾಡಲಾಗುವುದು. ತಾರಾಲಯದ ವಿಜ್ಞಾನಿಗಳು, ಭಾರತೀಯ ಖಭೌತ ಸಂಸ್ಥೆ ಮತ್ತು ಮೈಸೂರಿನ ಕಾಸ್ಮಾಸ್ ಸಂಸ್ಥೆಯ ಸಹಯೋಗದಲ್ಲಿ ಸಂಜೆ 4ರಿಂದ 6 ಗಂಟೆಯವರೆಗೆ ನಡೆಯುವ ಪ್ರಶ್ನೋತ್ತರ ಕಾರ್ಯಕ್ರಮವನ್ನೂ ಇದೇ ಚಾನಲ್‌ನಲ್ಲಿ ವೀಕ್ಷಿಸಬಹುದು ಎಂದು ತಿಳಿಸಿದೆ.


**ಕುಶಲೋಪರಿ** ಪ್ರಧಾನಿ ನರೇಂದ್ರ ಮೋದಿ ಅವರು ದೀಪಾವಳಿ ಹಬ್ಬದ ನಿಮಿತ್ತ ಕಾರ್ಗಿಲ್‌ಗೆ ಸೋಮವಾರ ಭೇಟಿ ನೀಡಿ ಸೈನಿಕರೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಸುದ್ದಿ 9

ಒಳ ಪುಟಗಳು



ಹಣ್ಣಾದ ಕಾಫಿಬೀಜ ಮಣ್ಣು ಪಾಲು 8
'ಮೀಸಲಾತಿ: ಅಧಿವೇಶನದಲ್ಲಿ ಮಸೂದೆ' 5
ರಷ್ಯಾದಲ್ಲಿ ತುಳುನಾಡ ದೈವ ನರ್ತನ 5

ಆಯ್ಕೆಯಲ್ಲಿ ಅಕ್ರಮ: ರಾಜೀನಾಮೆಗೆ ಸೂಚಿಸಿದ್ದ ಕೇರಳ ರಾಜ್ಯಪಾಲ

# 9 ಕುಲಪತಿಗಳು ಸದ್ಯಕ್ಕೆ ನಿರಾಳ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ರಾಜ್ಯಪಾಲರು ಅಂತಿಮ ನಿರ್ಧಾರ ತೆಗೆದುಕೊಳ್ಳುವ ತನಕ ಕುಲಪತಿಗಳು ಅಧಿಕಾರದಲ್ಲಿ ಮುಂದುವರಿಯಬಹುದು ಎಂದು ಕೇರಳ ಹೈಕೋರ್ಟ್ ಸೋಮವಾರ ತಿಳಿಸಿದೆ. ಇದರಿಂದ ಕೇರಳದ ಒಂಬತ್ತು ವಿಶ್ವವಿದ್ಯಾಲಯಗಳ ಕುಲಪತಿಗಳು ಸ್ವಲ್ಪ ನಿರಾಳರಾದಂತಾಗಿದೆ.

ಕುಲಪತಿಗಳ ಆಯ್ಕೆಯಲ್ಲಿನ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಕೇರಳ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರದ ನಡುವೆ ನಡೆಯುತ್ತಿದ್ದ ಆರೋಪ- ಪ್ರತ್ಯಾರೋಪಗಳು ಸೋಮವಾರ ತಾರಕಕ್ಕೇರಿ, ಪ್ರಕರಣ ಹೈಕೋರ್ಟ್ ಮೆಟ್ಟಿಲು ಹತ್ತಿತ್ತು.

ನೇಮಕಾತಿಯಲ್ಲಿ ಯುಜಿಸಿ ನಿಯಮಾವಳಿ ಉಲ್ಲಂಘನೆಯಾಗಿರುವ ಕಾರಣ ರಾಜ್ಯದ 9 ವಿಶ್ವವಿದ್ಯಾಲಯಗಳ ಕುಲಪತಿಗಳು ಸೋಮವಾರ ಬೆಳಿಗ್ಗೆ 11.30ರೊಳಗೆ ರಾಜೀನಾಮೆ ನೀಡಬೇಕು ಎಂದು ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಭಾನುವಾರ ನಿರ್ದೇಶಿಸಿದ್ದರು. ಆದರೆ ರಾಜೀನಾಮೆ ನೀಡಲು ಕುಲಪತಿಗಳು ನಿರಾಕರಿಸಿದ ಕಾರಣ, ಈ ಎಲ್ಲ ಕುಲಪತಿಗಳಿಗೆ ರಾಜ್ಯಪಾಲರು ಸೋಮವಾರ ಷೋಕಾಸ್ ನೋಟಿಸ್ ಜಾರಿಗೊಳಿಸಿದರು.

ಇತ್ತೀಚೆಗೆ ಸುಪ್ರೀಂ ಕೋರ್ಟ್, ಕೇರಳದ 'ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ' ಕುಲಪತಿ ಎಂ.ಎಸ್.ರಾಜಶ್ರೀ ಅವರ ನೇಮಕಾತಿಯಲ್ಲಿ ಯುಜಿಸಿ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಅವರ ನೇಮಕವನ್ನು ರದ್ದುಪಡಿಸಿತ್ತು. ಇದೇ ಆದೇಶವನ್ನು ಉಲ್ಲೇಖಿಸಿ ರಾಜ್ಯಪಾಲರು, ಈ ರೀತಿ ನೇಮಕವಾಗಿದ್ದ ಕುಲಪತಿಗಳಿಗೆ ರಾಜೀನಾಮೆ ಸಲ್ಲಿಸುವಂತೆ ನಿರ್ದೇಶಿಸಿದ್ದರು.

**ಮುಖ್ಯಮಂತ್ರಿ ವಿರೋಧ:** 'ರಾಜ್ಯಪಾಲರ ನಿರ್ದೇಶನ ಕಾನೂನುಬಾಹಿರವಾಗಿದ್ದು, ಮೂಲಭೂತ ನೈಸರ್ಗಿಕ ನ್ಯಾಯವನ್ನು ನಿರಾಕರಿಸಿದಂತಾಗಿದೆ. ಹೀಗಾಗಿ ಅದನ್ನು ಅನುಸರಿಸುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬೆಳಿಗ್ಗೆ ಸುದ್ದಿಗೋಷ್ಠಿಯಲ್ಲಿ ವಿರೋಧ ವ್ಯಕ್ತಪಡಿಸಿದರು.

'ರಾಜ್ಯಪಾಲರು ಹಿಂದುತ್ವದ ಸಿದ್ಧಾಂತಗಳನ್ನು ಜಾರಿಗೊಳಿಸಲು ಹೀಗೆಲ್ಲ ನಡೆದುಕೊಳ್ಳುತ್ತಿದ್ದಾರೆ. ಅವರ ಈ ರೀತಿಯ ಕ್ರಮಗಳಿಗೆ ರಾಜ್ಯದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತದೆ' ಎಂದು ಅವರು ಹೇಳಿದರು.

ಇದೇ ವೇಳೆ ರಾಜ್ಯಪಾಲರ ನಿರ್ದೇಶನವನ್ನು ಪ್ರಶ್ನಿಸಿ ಕುಲಪತಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಸೋಮವಾರ ಮಧ್ಯಾಹ್ನ ನಡೆಸುವುದಾಗಿ ಹೈಕೋರ್ಟ್ ತಿಳಿಸಿತು.

9ನೇ ಪುಟ ನೋಡಿ

## ಬಸವಲಿಂಗ ಸ್ವಾಮೀಜಿ ನಿಗೂಢ ಸಾವು

ರಾಮನಗರ: ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ (45) ನಿಗೂಢವಾಗಿ ಸಾವನ್ನಪ್ಪಿದ್ದು, ಸೋಮವಾರ ಬೆಳಿಗ್ಗೆ ಮಠದ ಕೊಠಡಿಯ ಕಿಟಕಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಯಿತು. 5

## ಚಿನಕುರಳಿ

ಪ್ರಕಾಶ್ ಶೆಟ್ಟಿ




ನಗರ ಸ್ಥಳೀಯ ಸಂಸ್ಥೆಗಳಿಗೆ 15ನೇ ಹಣಕಾಸು ಆಯೋಗದ ಅನುದಾನ

# ಮಾನದಂಡ ಲೋಪ: ₹1,213 ಕೋಟಿಗೆ ಕುತ್ತು?

• ಮಂಜುನಾಥ ಹೆಬ್ಬಾರ್

**ಮುಖ್ಯಾಂಶಗಳು**

- **ಹಣಕಾಸು ಇಲಾಖೆಗೆ ಸ್ಥಾನಿಕ ಆಯುಕ್ತರಿಂದ ಪತ್ರ**
- **ನಗರಾಭಿವೃದ್ಧಿ ಇಲಾಖೆಯ ಎಸಿಎಸ್ ನೇತೃತ್ವದಲ್ಲಿ ಸಮಿತಿ ರಚನೆಗೆ ಸೂಚನೆ**
- **ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಎಸಿಎಸ್ ಎಚ್ಚರಿಕೆ**

ಪ್ರಜಾವಾಣಿ ವಿಶೇಷ

ನವದೆಹಲಿ: ಕರ್ನಾಟಕದ ನಗರ ಸ್ಥಳೀಯ ಸಂಸ್ಥೆಗಳು ಸಮರ್ಪಕ ಮಾನದಂಡಗಳನ್ನು ಅನುಸರಿಸದ ಕಾರಣ 15ನೇ ಹಣಕಾಸು ಆಯೋಗದ ₹1,213 ಕೋಟಿ ಅನುದಾನ ಕೈತಪ್ಪುವ ಆತಂಕ ಎದುರಾಗಿದೆ.

ಕರ್ನಾಟಕ ಹಣಕಾಸು ಇಲಾಖೆಯ ಕಾರ್ಯದರ್ಶಿ (ಬಜೆಟ್ ಮತ್ತು ಸಂಪನ್ಮೂಲ) ಏಕ್‌ರೂಪ್ ಕೌರ್ ಅವರಿಗೆ ಅಕ್ಟೋಬರ್ 6ರಂದು ಪತ್ರ ಬರೆದಿದ್ದ ಕರ್ನಾಟಕದ ಸ್ಥಾನಿಕ ಆಯುಕ್ತೆ ಎಂ.ಇಮ್‌ಕೊಂಗ್ಲ ಜಮೀರ್, 'ನಗರ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಪಾಲಿನ ಅನುದಾನದ ಮೊದಲ ಕಂತು ಆಗಸ್ಟ್ 22ರಂದು ₹418 ಕೋಟಿ, ಆಗಸ್ಟ್ 31ರಂದು ₹628 ಕೋಟಿ ಬಿಡುಗಡೆಯಾಗಿದೆ. ಮೊದಲನೇ ಕಂತಿನ ಅನುದಾನದ ಬಳಕೆ ಪ್ರಮಾಣಪತ್ರ ಸಲ್ಲಿಸಿದ ಬಳಿಕವಷ್ಟೇ ಎರಡನೇ ಕಂತಿನ ಅನುದಾನ ಬಿಡುಗಡೆ ಪ್ರಕ್ರಿಯೆ ಆರಂಭವಾಗಲಿದೆ' ಎಂದು ತಿಳಿಸಿದ್ದರು.

ಜತೆಗೆ, 'ಮಿಲಿಯನ್ ಪ್ಲಸ್ ನಗರಗಳು (ಮಾಲಿನ್ಯ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಗುರುತಿಸಿರುವ ದೇಶದ 500 ನಗರಗಳನ್ನು ಹೀಗೆ ಕರೆಯಲಾಗುತ್ತದೆ. ಇದರಲ್ಲಿ ಕರ್ನಾಟಕದ ನಾಲ್ಕು ನಗರಗಳು ಸೇರಿವೆ) ಹಾಗೂ ಇತರ ನಗರಗಳಿಗೆ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡಲು ಹಣಕಾಸು ಆಯೋಗದ ವಿಭಾಗವು ಕೆಲವು ಸ್ಪಷ್ಟನೆಗಳನ್ನು ಕೋರಿದೆ. ತ್ಯಾಜ್ಯ ಸಂಸ್ಕರಣೆ ನಿರ್ವಹಣೆಯ ಬಗ್ಗೆಯೂ ವಿವರಗಳನ್ನು ಕೋರಿದೆ. ಅನುದಾನ ಬಿಡುಗಡೆಗೆ ಬಳಕೆ ಪ್ರಮಾಣಪತ್ರ ಹಾಗೂ ಪರಿಷ್ಕೃತ ಬಳಕೆ ಪ್ರಮಾಣಪತ್ರ ಸಲ್ಲಿಸಲು ಸೂಚಿಸಿದೆ' ಎಂದು ಪತ್ರದಲ್ಲಿ ಗಮನ ಸೆಳೆದಿದ್ದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಅಕ್ಟೋಬರ್ 14ರಂದು ಹಣಕಾಸು ಇಲಾಖೆಯ ಅಧಿಕಾರಿಗಳು ಪತ್ರ ಬರೆದು, '15ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ 2022–23ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳ ಅನುದಾನದಡಿ ₹1,213 ಕೋಟಿ ಬಿಡುಗಡೆಯಾಗಬೇಕು. ಆದರೆ, ಈ ಮೊತ್ತವು ಈವರೆಗೆ ಬಿಡುಗಡೆ ಆಗಿಲ್ಲ. ಹೀಗಾಗಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಹಣಕಾಸು ಸಚಿವಾಲಯದ ಮಾರ್ಗಸೂಚಿಯನ್ವಯ ಆಯೋಗದ ಅನುದಾನವನ್ನು ಸಂಪೂರ್ಣವಾಗಿ ಪಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ವರದಿಯ ಪ್ರತಿಯನ್ನು ಇಲಾಖೆಗೆ ಕಳುಹಿಸಬೇಕು' ಎಂದು ಸೂಚಿಸಿದರು.

5ನೇ ಪುಟ ನೋಡಿ




ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಬಸವನಗುಡಿಯ ಉದಯಭಾನು ಕಲಾಸಂಘದ ಆಟದ ಮೈದಾನದಲ್ಲಿ ಸೋಮವಾರ ಪಟಾಕಿ ಖರೀದಿಯಲ್ಲಿ ತೊಡಗಿದ್ದ ಜನ (1) ಗಾಂಧಿನಗರದ ಎಸ್‌ಎಸ್‌ಬಜಾರ್‌ನ ಅಂಗಡಿಯೊಂದರಲ್ಲಿ ಸೋಮವಾರ ಲಕ್ಷ್ಮೀ ಪೂಜೆಯನ್ನು ನೆರವೇರಿಸಲಾಯಿತು. – ಪ್ರಜಾವಾಣಿ ಚಿತ್ರ/ರಂಜು ಪಿ.

### ಬಂಗಾರದ ಅಂಗಡಿ, ಬಟ್ಟೆ ಅಂಗಡಿ, ಎಲೆಕ್ಟ್ರಾನಿಕ್ ಉಪಕರಣಗಳ ಮಳಿಗೆಗಳಲ್ಲಿ ಜನ

# ದೀಪಗಳ ರಂಗು, ಲಕ್ಷ್ಮೀಪೂಜೆ ಮೆರುಗು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೂರು ದಿನಗಳ ಬೆಳಕಿನ ಹಬ್ಬ ನರಕ ಚತುರ್ದಶಿಯೊಂದಿಗೆ ಸೋಮವಾರ ಆರಂಭವಾಯಿತು. ದೀಪಾವಳಿ ನಿಮಿತ್ತ ಮನೆ, ಅಂಗಡಿ ಹಾಗೂ ಕಚೇರಿಗಳು ತಳಿರು–ತೋರಣಗಳಿಂದ ಕಂಗೊಳಿಸುತ್ತಿದ್ದವು.

ಕಳೆದ ಎರಡು ವರ್ಷ ಕೋವಿಡ್ ಕಾರಣದಿಂದ ಎಲ್ಲರೂ ಸರಳವಾದ ದೀಪಾವಳಿ ಆಚರಿಸಿದ್ದರು. ಈ ಬಾರಿ ಸಿಲಿಕಾನ್ ಸಿಟಿಯ ಜನರಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ. ನಗರದ ಅಂಗಡಿಗಳಲ್ಲಿ ಬೆಳಿಗ್ಗೆಯೇ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು. ವರ್ಷವಿಡೀ ವ್ಯಾಪಾರ, ವಹಿವಾಟು ಚೆನ್ನಾಗಿ ನಡೆಯಲಿ ಎಂದು ವ್ಯಾಪಾರಿಗಳು ಲಕ್ಷ್ಮೀದೇವಿಯಲ್ಲಿ ಪ್ರಾರ್ಥಿಸಿದರು. ಸಂಜೆ ಮನೆ–ದೇಗುಲಗಳ ಮುಂದೆ ಬೆಳಗಿದ ಸಾಲು ದೀಪಗಳು ಎಲ್ಲೆಡೆ ಆಧ್ಯಾತ್ಮಿಕ ವಾತಾವರಣ ಸೃಷ್ಟಿಸಿದವು.



ದೀಪಾವಳಿ ಹಬ್ಬವನ್ನು ಸಂಭ್ರಮಿಸುತ್ತಿರುವ ಮಕ್ಕಳು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ

**ಖರೀದಿ ಭರಾಟೆ:** ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ದಿನಸಿ, ತರಕಾರಿ, ಕಬ್ಬು, ಬಾಳೆ ಕಂದು ಹೂವು–ಹಣ್ಣುಗಳ, ಬಟ್ಟೆ ಖರೀದಿಯ ಭರಾಟೆ ಜೋರಾಗಿತ್ತು. ಆಲಂಕಾರಿಕ ವಸ್ತುಗಳು, ಹಣತೆ ಮತ್ತು ಆಕಾಶಬುಟ್ಟಿಗಳ ಖರೀದಿ ಸಾಮಾನ್ಯವಾಗಿತ್ತು. ಜನ ಪಟಾಕಿ ಖರೀದಿಗೆ ಮುಗಿಬಿದ್ದಿದ್ದರು.

ಹಬ್ಬದ ಅಂಗವಾಗಿ ಪ್ರಮುಖ ಅಂಗಡಿಗಳು ಗ್ರಾಹಕರನ್ನು ಸೆಳೆಯಲು ಹಲವು ರಿಯಾಯಿತಿಗಳನ್ನು ಘೋಷಿಸಿದ್ದವು. ಬಂಗಾರದ ಅಂಗಡಿ, ಬಟ್ಟೆ ಅಂಗಡಿ, ಎಲೆಕ್ಟ್ರಾನಿಕ್ ಉಪಕರಣಗಳ ಮಳಿಗೆಗಳು ಹಾಗೂ ಸಿಹಿ ತಿನಿಸುಗಳ ಮಳಿಗೆಗಳು ಗ್ರಾಹಕರಿಂದ ತುಂಬಿದ್ದವು.

ಸಂಜೆ ನಂತರ ಮನೆ, ಮನೆಗಳಲ್ಲಿ ಕಂಗೊಳಿಸಿದ ದೀಪಗಳು ಬೆಳಕಿನ ರಂಗಿನ ಲೋಕವನ್ನು ಸೃಷ್ಟಿಸಿದವು. ಹೊಸ್ತಿಲು, ಕಿಟಕಿ, ಕಾಂಪೌಂಡ್ ಮೇಲೆಯೂ ವಿವಿಧ ವಿನ್ಯಾಸದ ದೀಪಗಳನ್ನು ಹಚ್ಚಿ, ಅವಕ್ಕೆ ಹೂವಿನ ಅಲಂಕಾರ ಮಾಡಿ ಸಂಭ್ರಮಿಸಿದರು.

ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ಸೋಮವಾರ ಸಂಜೆಯ ಬಳಿಕ ಪಟಾಕಿ ಸದ್ದು ಕೂಡ ಅಲ್ಲಲ್ಲಿ ಕೇಳಿಬಂತು.

ಮಂಗಳವಾರ ಮತ್ತು ಬುಧವಾರ ದೀಪಾವಳಿ ಹಬ್ಬ ಇರುವುದರಿಂದ ಕೆಲವರು ಸೋಮವಾರವೇ ಹಬ್ಬಕ್ಕೆ ಬೇಕಾದ ಪಟಾಕಿ, ದೀಪಗಳ ಖರೀದಿಯಲ್ಲಿ ತೊಡಗಿದ್ದರು. ಪರಿಸರಸ್ನೇಹಿ ಮಣ್ಣಿನ ದೀಪಗಳಿಗೆ ಬೇಡಿಕೆ ಇತ್ತು. ಪೂಜಾ ಸಾಮಗ್ರಿಗಳ ಜತೆಗೆ ಬಾಳೆ ಕಂದು, ಬೂದುಗುಂಬಳ, ಹೂವು, ನಿಂಬೆಹಣ್ಣುಗಳ ಮಾರಾಟವೂ ಜೋರಾಗಿತ್ತು.

### ತಾತ್ಕಾಲಿಕ ಮಾರುಕಟ್ಟೆಗಳು ಸೃಷ್ಟಿ

ಮಲ್ಲೇಶ್ವರ, ಬಸವನಗುಡಿ, ಹೆಬ್ಬಾಳ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಗಾಯತ್ರಿನಗರ, ಗಾಂಧಿ ಬಜಾರ್, ವೈಟ್‌ಫೀಲ್ಡ್, ಇಂದಿರಾನಗರದಂತಹ ಪ್ರಮುಖ ರಸ್ತೆಯ ಪಾದಚಾರಿ ಮಾರ್ಗ, ಮೆಟ್ರೊ ಸೇತುವೆಯ ಕೆಳಭಾಗ, ಮೇಲ್ಸೇತುವೆಗಳ ಕೆಳಗಡೆ ತಾತ್ಕಾಲಿಕ ಮಾರುಕಟ್ಟೆಗಳು ಸೃಷ್ಟಿಯಾಗಿವೆ. ಗ್ರಾಮೀಣ ಭಾಗದ ರೈತರು, ವ್ಯಾಪಾರಿಗಳು ಬಂದು ಬೂದುಗುಂಬಳ, ಮಾವಿನ ಎಲೆ, ತರಕಾರಿ, ಹೂವು–ಹಣ್ಣು ಹಣತೆಗಳು, ಆಕಾಶಬುಟ್ಟಿ ಮತ್ತು ಆಲಂಕಾರಿಕ ವಸ್ತುಗಳ ಮಾರಾಟ ಮಾಡುತ್ತಿರುವುದು ಕಂಡುಬಂದಿತು.

## ಸುದ್ದಿ 2 ನಿಮಿಷ

### ಪಟಾಕಿ ಅವಘಡ: 13 ಮಂದಿಗೆ ಗಾಯ

**ಬೆಂಗಳೂರು:** 'ಬೆಳಕಿನ ಹಬ್ಬ' ದೀಪಾವಳಿ ವೇಳೆ ರಾಜಧಾನಿಯಲ್ಲಿ ಪಟಾಕಿ ಸಿಡಿತದಿಂದ ಅವಘಡಗಳು ಸಂಭವಿಸುತ್ತಿವೆ.

ಪಟಾಕಿ ಸ್ಫೋಟದಿಂದ ಗಾಯಗೊಂಡ 7 ಮಂದಿ ರಾಜಾಜಿನಗರದ ನಾರಾಯಣ ನೇತ್ರಾಲಯದಲ್ಲಿ ಹಾಗೂ ಐವರು ಮಿಂಟೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನೇತ್ರಾಲಯದಲ್ಲಿ ಏಳು ಮಂದಿ ಚಿಕಿತ್ಸೆಗೆ ಬಂದಿದ್ದರು. ಮೂವರನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಇಬ್ಬರಿಗೆ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ. ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಕಣ್ಣಿಗೆ ಗಾಯವಾಗಿರುವ ಶ್ರೀನಗರದ ಮದನ್ (18) ಅವರಿಗೆ ಮಿಂಟೋ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಫ್ರೇಜರ್ ಟೌನ್‌ನ ಆದಿತ್ಯ (7) ಹಾಗೂ ಥಣಿಸಂದ್ರದ ಸ್ಯಾಮ್ಯುವಲ್ (7) ಅವರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

### ಸೋಮಣ್ಣ ರಾಜೀನಾಮೆ– ಆಗ್ರಹ




**ಬೆಂಗಳೂರು:** ಚಾಮರಾಜನಗರ ಜಿಲ್ಲೆಯಲ್ಲಿ ಹಕ್ಕುಪತ್ರ ವಿತರಣೆ ವೇಳೆ ಮನವಿ ಸಲ್ಲಿಸಲು ಬಂದಿದ್ದ ಮಹಿಳೆಗೆ ಕಪಾಳಮೋಕ್ಷ ಮಾಡಿರುವ ವಸತಿ ಸಚಿವ ವಿ.ಸೋಮಣ್ಣ ಅವರು ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಸೋಮಣ್ಣ ಹಿರಿಯ ಸಚಿವರು. ರಾಜಕಾರಣದಲ್ಲಿ ಅವರಿಗೆ ಸಾಕಷ್ಟು ಅನುಭವವಿದೆ. ಬಿಜೆಪಿಯ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದನ್ನು ಗಮನಿಸಿದರೆ ಮಹಿಳಾ ವಿರೋಧಿ ಪಕ್ಷ ಎಂಬುದು ಸಾಬೀತಾಗಿದೆ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ದೂರಿದರು. ಸೋಮಣ್ಣರ ಪ್ರತಿಕೃತಿ ದಹಿಸಿ ರಾಜೀನಾಮೆಗೆ ಆಗ್ರಹಿಸಲಾಯಿತು.

ಕಾಂಗ್ರೆಸ್ ಪ್ರಚಾರ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಬೆಂಗಳೂರು ಪ್ರಚಾರ ಸಮಿತಿ ಅಧ್ಯಕ್ಷರಾದ ಜಿ.ಜನಾರ್ದನ್, ಎ.ಆನಂದ್, ಪದಾಧಿಕಾರಿಗಳಾದ ರವಿಶೇಖರ್, ಬಿ.ಮಂಜುನಾಥ್, ಚಂದ್ರಶೇಖರ್. ಪುಟ್ಟರಾಜು, ಸುರೇಶ್, ಜಯಶ್ರೀಗೌಡ, ಆಶಾ, ಗೀತಾ ಹಾಜರಿದ್ದರು.

# ತುಂಬಿ ತುಳುಕುತಿದೆ ಹೆಸರಘಟ್ಟ ಕೆರೆ ಒಡಲು

### 35 ವರ್ಷದ ನಂತರ ಕೋಡಿ; ಮತ್ತೆ ನಗರಕ್ಕೆ ನೀರು ಪೂರೈಕೆ • 3 ದಶಕದ ನಂತರ ತುಂಬಿರುವ ಕೆರೆ ನೋಡಲು ಜನರ ಆಗಮನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿಗೆ ಮೊದಲು ಹೊರಭಾಗದಿಂದ ಕುಡಿಯುವ ನೀರು ಸರಬರಾಜು ಮಾಡಿದ್ದ ಹೆಸರಘಟ್ಟ ಜಲಾಶಯ 35 ವರ್ಷಗಳ ನಂತರ ತುಂಬಿ ತುಳುಕುತ್ತಿದೆ. ಯಾವುದೇ ಸಂದರ್ಭದಲ್ಲಿ ಕೋಡಿ ಬೀಳುವ ಸಂಭವವಿದೆ.

ಹೆಸರಘಟ್ಟ ಕೆರೆಗೆ ಕಾಕೋಳು ಹಾಗೂ ಬ್ಯಾತಾ ಕೆರೆಗಳಿಂದ ನೀರು ಸತತವಾವಾಗಿ ಹರಿದು ಬರುತ್ತಿದ್ದು, ಗರಿಷ್ಠ ಮಟ್ಟ 71 ಅಡಿಯನ್ನು ಕೆಲವು ದಿನಗಳಲ್ಲಿ ಮುಟ್ಟುವ ಸಾಧ್ಯತೆ ಇದೆ. 70 ಅಡಿ ನೀರು ತುಂಬಿದ ಮೇಲೆ ಕೆರೆ ಸ್ವಯಂಚಾಲಿತ 'ಸೈಫೋನ್' ವ್ಯವಸ್ಥೆಯಿಂದ ಕೋಡಿ ಹರಿಯುತ್ತದೆ. ಸೋಮವಾರ ಕೆರೆಯಲ್ಲಿ ನೀರಿನ ಮಟ್ಟ 69.5 ಅಡಿಯಾಗಿತ್ತು. 197 ಕೆರೆಗಳಿಂದ ನೀರಿನ ಹರಿವು ಬರುವುದರಿಂದ ಹೆಸರಘಟ್ಟದ ನೀರಿನ ಸಂಗ್ರಹ ಸಾಮರ್ಥ್ಯ ಒಂದು ಟಿಎಂಸಿ ಅಡಿಯಾಗಿದೆ. 3 ದಶಕದ ನಂತರ ತುಂಬಿರುವ ಕೆರೆಯನ್ನು ನೋಡಲು ನಾಗರಿಕರು ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ.



ಹೆಸರಘಟ್ಟ ಜಲಾಶಯದ 'ಸೈಫೋನ್' ಬಳಿ ಸೋಮವಾರ ಕಂಡುಬಂದ ದೃಶ್ಯ

ನಂದಿ ಬೆಟ್ಟದಲ್ಲಿ ಉಗಮವಾಗುವ ಅರ್ಕಾವತಿ ನದಿಯ ಹರಿವು ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ವ್ಯಾಪ್ತಿಯಿಂದ ಹೆಸರಘಟ್ಟ ತಲುಪುತ್ತದೆ. ಕಳೆದವಾರ ನೀರು ಅತಿ ಹೆಚ್ಚಾಗಿ ಹರಿದುಬಂದಿತ್ತು. ಎರಡು ದಿನಗಳಿಂದ ಮಳೆ ಕಡಿಮೆಯಾಗಿರುವುದರಿಂದ ನೀರಿನ ಹರಿವು ಕಡಿಮೆಯಾಗಿದೆ. ಮಧುರೈ ಕೆರೆಯಲ್ಲಿ ನೀರು ಕೋಡಿಯಾಗುವ ಸಂಭವವಿದ್ದು, ಯಾವ ಸಂದರ್ಭದಲ್ಲಾದರೂ ನೀರು ಜಲಾಶಯಕ್ಕೆ ಬರುವ ಸಾಧ್ಯತೆ ಇದೆ. ಆ ನೀರು ಬಂದರೆ ಹೆಚ್ಚು ನೀರು ಕೋಡಿಯಾಗುತ್ತದೆ. ಈ ಹಿಂದೆ 1987ರಲ್ಲಿ ಜಲಾಶಯ ಕೋಡಿಯಾಗಿತ್ತು ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

ಜಲಾಶಯ ತುಂಬಿದಾಗ ಕೋಡಿ ಹರಿಯುವ ವ್ಯವಸ್ಥೆಯನ್ನು (ಸೈಫೋನ್) ಸರ್ ಎಂ. ವಿಶ್ವೇಶ್ವರಯ್ಯ ಅವರು ಇಲ್ಲಿ ಒದಗಿಸಿದ್ದಾರೆ. ಕೋಡಿ ಹರಿಯುವಾಗ ನೀರು ಹಳ್ಳದಲ್ಲಿ ಹರಿದು ಮೇಲೆ ಬರುವಂತಿದೆ. ಇದರಿಂದ ಜೋರಾದ ಶಬ್ದ ಬಂದು ಅಕ್ಕಪಕ್ಕದವರನ್ನು ಎಚ್ಚರಿಸುವ ವ್ಯವಸ್ಥೆ ಇದು. ಇದಕ್ಕೆ ವಿದ್ಯುತ್ ಅಥವಾ ಯಾವುದೇ ಚಾಲನೆ ಮಾಡುವುದು ಬೇಡ.

**ಡಿಪಿಆರ್ ಸಿದ್ಧ:** ಹೆಸರಘಟ್ಟ ಜಲಾಶಯದಿಂದ ನಗರಕ್ಕೆ ಮತ್ತೆ ನೀರು ಪೂರೈಸುವ ಯೋಜನೆಗೆ ಚಾಲನೆ ನೀಡಲಾಗಿದ್ದು, ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸರ್ಕಾರಕ್ಕೆ ಸಲ್ಲಿಸಲಾಗಿದೆ. ನಿತ್ಯವೂ 35 ದಶಲಕ್ಷ ಲೀಟರ್ (ಎಂಎಲ್‌ಡಿ) ನೀರು ಪೂರೈಸುವ ಈ ಯೋಜನೆಗೆ ₹180 ಕೋಟಿ ವೆಚ್ಚವಾಗಲಿದೆ. ಸೋಲದೇವನಹಳ್ಳಿಯಲ್ಲಿ ಹಿಂದಿದ್ದ ಪಂಪಿಂಗ್ ಸ್ಟೇಷನ್‌ನಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಲಾಗುತ್ತದೆ. ಹೊಸದಾಗಿ ಕೊಳವೆ ಮಾರ್ಗಗಳನ್ನು ಹಾಕಿ, ನಗರಕ್ಕೆ ನೀರು ಪೂರೈಸುವ ಯೋಜನೆ ಇದಾಗಿದೆ.

ತುಮಕೂರಿನ ಕೊರಟಗೆರೆ ಬಳಿಯ ಬೈರಗೊಂಡಲು ಜಲಾಶಯದಲ್ಲಿ ಸಂಗ್ರಹವಾಗುವ ಎತ್ತಿನಹೊಳೆ ನೀರಿನಲ್ಲಿ ಹೆಸರಘಟ್ಟಕ್ಕೆ 0.8 ಟಿಎಂಸಿ ನೀರು ಹರಿಸುವ ಯೋಜನೆಯೂ ಇದೆ. ಈ ಮೂಲಕ ನಗರಕ್ಕೆ ಕುಡಿಯುವ ನೀರು ಪೂರೈಸಲು ಯೋಜಿಸಲಾಗಿದೆ. ಆದರೆ, ಎತ್ತಿನಹೊಳೆ ನೀರು ಬರುವುದಕ್ಕೆ ಮುನ್ನವೇ ಸೆ.5ರಂದು ತಿಪ್ಪಗೊಂಡನಹಳ್ಳಿ ಜಲಾಶಯವೂ ತುಂಬಿಕೊಂಡಿದ್ದು, ಇದೀಗ ಹೆಸರಘಟ್ಟವೂ ತುಂಬಿದೆ. ಹೀಗಾಗಿ, ಎತ್ತಿನಹೊಳೆ ನೀರಿಗೆ ಕಾಯುವಂತೆಯೂ ಇಲ್ಲ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಏಪ್ರಿಲ್ ವೇಳೆಗೆ ನೀರು ಪೂರೈಕೆಯಾಗಿದೆ. ಆದರೆ, ಹೆಸರಘಟ್ಟದಿಂದ ಸದ್ಯಕ್ಕೆ ನಗರಕ್ಕೆ ನೀರು ಬರುವುದಿಲ್ಲ. ಸರ್ಕಾರದ ಮಟ್ಟದಲ್ಲಿರುವ ಯೋಜನೆಗೆ ಅನುಮತಿ ದೊರೆತು, ಅದಾದ ನಂತರ ಕಾಮಗಾರಿ ಆರಂಭವಾಗಬೇಕಿದೆ. ಇದಾದರೆ 40 ವರ್ಷಗಳ ನಂತರ ಹೆಸರಘಟ್ಟದಿಂದ ನಗರಕ್ಕೆ ಕುಡಿಯುವ ನೀರು ಪೂರೈಕೆ ಸಾಧ್ಯವಾಗುತ್ತದೆ.

### 1894ರಿಂದ ನೀರು ಪೂರೈಕೆ

ಬೆಂಗಳೂರಿನ ಜನಸಂಖ್ಯೆ 1891ರಲ್ಲಿ 1.8 ಲಕ್ಷ. ಈ ಸಂದರ್ಭದಲ್ಲಿ ನಗರಕ್ಕೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಅರ್ಕಾವತಿ ನದಿಗೆ ಅಡ್ಡಲಾಗಿ 1894ರಲ್ಲಿ ಹೆಸರಘಟ್ಟ ಕೆರೆ ಜಲಾಶಯವನ್ನು ಅಂದಿನ ಮೈಸೂರು ಸಂಸ್ಥಾನದ ದೀವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್ ಅವರು ನಿರ್ಮಿಸಿದರು. ಪ್ರತಿ ದಶಕಕ್ಕೆ ಶೇ 16ರಷ್ಟು ಜನಸಂಖ್ಯೆ ಹೆಚ್ಚಾಗಬಹುದು ಎಂದು ಅಂದಾಜಿಸಿ, ಚಾಮರಾಜೇಂದ್ರ ವಾಟರ್ ವರ್ಕ್ಸ್‌ನಿಂದ ಪೈಪ್‌ಮಾರ್ಗದಲ್ಲಿ ಸೋಲದೇವನಹಳ್ಳಿಯಿಂದ ಮಲ್ಲೇಶ್ವರಕ್ಕೆ ನೀರು ಪಂಪ್ ಮಾಡಲಾಗಿತ್ತು. ಅಲ್ಲಿ ನೀರು ಸಂಸ್ಕರಿಸಿ, ಪ್ರತಿನಿತ್ಯ 36 ದಶಲಕ್ಷ ಲೀಟರ್ ಪೂರೈಸಲಾಗುತ್ತಿತ್ತು. 1918ಕ್ಕೇ ಬೆಂಗಳೂರು ಜನಸಂಖ್ಯೆ 2.5 ಲಕ್ಷವಾಯಿತು. ಹೆಸರಘಟ್ಟದ ನೀರು ನಗರಕ್ಕೆ ಕಡಿಮೆಯಾಯಿತು. ನಂತರದ ದಿನಗಳಲ್ಲಿ ತಿಪ್ಪಗೊಂಡನಹಳ್ಳಿ, ಕಾವೇರಿಯಿಂದ ನೀರು ಪೂರೈಕೆ ಆರಂಭವಾಯಿತು. 1983ರಲ್ಲಿ ಹೆಸರಘಟ್ಟದಿಂದ ನಗರಕ್ಕೆ ನೀರು ಪಂಪ್ ಮಾಡುವ ಕಾರ್ಯ ನಿಂತುಹೋಯಿತು. ಹೆಸರಘಟ್ಟ ಜಲಾಶಯದ ಸೌಂದರ್ಯಕ್ಕೆ ಮಾರುಹೋಗಿದ್ದ ಯುರೋಪಿಯನ್ನರು ಈಜು, ಪೆಡ್ಲಿಂಗ್, ರೋವಿಂಗ್ ಕ್ರೀಡೆಗಳ ರಾಷ್ಟ್ರೀಯ ಕ್ರೀಡಾಕೂಟವನ್ನೂ ನಡೆಸಿದ್ದರು. ರೋವಿಂಗ್ ಕ್ಲಬ್ ಅನ್ನೂ ಇಲ್ಲಿ ಸ್ಥಾಪಿಸಿದ್ದರು.

### ಹೆಸರಘಟ್ಟ ಜಲಾಶಯ

**71** ಅಡಿ
ಜಲಾಶಯದ ಎತ್ತರ

**1,620** ಹೆಕ್ಟೇರ್
ವಿಸ್ತೀರ್ಣ

**1** ಟಿಎಂಸಿ ಅಡಿ
ಸಂಗ್ರಹ ಸಾಮರ್ಥ್ಯ

### ನಗರದಲ್ಲಿ ಇಂದು

**ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳ ಸಮಾರೋಪ ಸಮಾರಂಭ:** ಅಧ್ಯಕ್ಷತೆ: ಪ್ರಸನ್ನಕುಮಾರ್ ಸ್ಯಾಮ್ಯುಯಲ್, ಅತಿಥಿಗಳು: ಧನ್ಯಾ ರಾಜೇಂದ್ರನ್, ಲಾವಣ್ಯ ಮಿತ್ರನ್, ಆಯೋಜನೆ: ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜ್, ಮಿಷನ್ ರಸ್ತೆ ಸಿಎಸ್‌ಐ ಕಾಂಪೌಂಡ್, ಬೆಳಿಗ್ಗೆ 11

**ಸರ್ ಇಸ್ಮಾಯಿಲ್ ಜನ್ಮದಿನಾಚರಣೆ: ಅಧ್ಯಕ್ಷತೆ**: ಮಹೇಶ ಜೋಶಿ, ಉಪನ್ಯಾಸ: ಚಂದ್ರಶೇಖರ ಉಷಾಲ, ಅತಿಥಿಗಳು: ಅಬ್ದುಲ್ ಬಷೀರ್, ಉಪಸ್ಥಿತಿ: ನೇ.ಭ ರಾಮಲಿಂಗ ಶೆಟ್ಟಿ, ಕೆ ಮಹಾಲಿಂಗಯ್ಯ, ಬಿ.ಎಂ ಪಟೇಲ್ ಪಾಂಡು, ಆಯೋಜನೆ ಮತ್ತು ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 4.30

### ರಾಜ್ಯದಾದ್ಯಂತ ರಸ್ತೆ ತಡೆ 27ರಂದು

**ಮೈಸೂರು:** 'ಟನ್ ಕಬ್ಬಿಗೆ ₹ 3,500 ಎಫ್‌ಆರ್‌ಪಿ (ನ್ಯಾಯಸಮ್ಮತ ಹಾಗೂ ಮೌಲ್ಯಾಧಾರಿತ ಬೆಲೆ) ನಿಗದಿಪಡಿಸುವಂತೆ ಆಗ್ರಹಿಸಿ ಅ.27ರಂದು ರಾಜ್ಯದಾದ್ಯಂತ ರಸ್ತೆ ತಡೆ ಚಳವಳಿ ನಡೆಸಲಾಗುವುದು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು. 'ಪ್ರಸಕ್ತ ಸಾಲಿನಲ್ಲಿ ಕೇವಲ ₹150 ಏರಿಸಿ, ₹3,050 ಎಫ್‌ಆರ್‌ಪಿ ನಿಗದಿ ಪಡಿಸಿದೆ. ಇದು ಅನ್ಯಾಯವಾಗಿದೆ' ಎಂದರು.



### ಒಆರ್‌ಆರ್ ಮೆಟ್ರೊ ನಿಲ್ದಾಣದಲ್ಲಿ ವಾಕ್ ವೇಗೆ ಅವಕಾಶ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಹೊರ ವಲಯ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಮೆಟ್ರೊ ನಿಲ್ದಾಣಗಳಿಂದ ನೇರವಾಗಿ ಕಚೇರಿ ಬಾಗಿಲುಗಳಿಗೆ ಉದ್ಯೋಗಿಗಳು ತೆರಳಲು ಪಾದಚಾರಿ ಮಾರ್ಗ(ವಾಕ್‌ವೇ) ನಿರ್ಮಿಸಿಕೊಳ್ಳಲು ಐ.ಟಿ ಕಂಪನಿಗಳಿಗೆ ಬಿಎಂಆರ್‌ಸಿಎಲ್(ಬೆಂಗಳೂರು ಮೆಟ್ರೊ ರೈಲು ನಿಗಮ) ಅವಕಾಶ ಕಲ್ಪಿಸಿದೆ.

ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತನಕ ಮೆಟ್ರೊ ರೈಲು ಮಾರ್ಗ ನಿರ್ಮಾಣವಾಗುತ್ತಿದೆ. ಇದರಲ್ಲಿ ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳ ತನಕ ನಿರ್ಮಾಣವಾಗುವ ನಿಲ್ದಾಣಗಳಿಂದ ಪ್ರತ್ಯೇಕ ಪಾದಚಾರಿ ಮಾರ್ಗಗಳನ್ನು ನಿರ್ಮಿಸಿಕೊಳ್ಳಲು ಕಂಪನಿಗಳು ಆಸಕ್ತಿ ವಹಿಸಿದರೆ ಅನುಮತಿ ನೀಡಲು ಬಿಎಂಆರ್‌ಸಿಎಲ್ ಸಮ್ಮತಿಸಿದೆ.

ಹೊರ ವರ್ತುಲ ರಸ್ತೆಯಲ್ಲಿನ ಕಂಪನಿಗಳ ಸಂಘದೊಂದಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಇತ್ತೀಚೆಗೆ ಸಭೆ ನಡೆಸಿದ್ದರು. ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿದೆ.

'ಪಾದಚಾರಿ ಮಾರ್ಗಗಳ ನಿರ್ಮಾಣದ ಬಗ್ಗೆ ಕಂಪನಿಗಳೇ ಯೋಜನೆ ಸಿದ್ಧಪಡಿಸಿ ಸಲ್ಲಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಆಯಾ ಕಂಪನಿಗಳೇ ಭರಿಸಿಕೊಳ್ಳಬೇಕು. ಸಾಧಕ–ಬಾಧಕ ಪರಿಶೀಲಿಸಿ ಅನುಮತಿ ನೀಡಲಾಗುವುದು' ಎಂದು ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳದ ತನಕ ಒಟ್ಟು 23 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಈ ನಿಲ್ದಾಣಗಳಿಂದ ಪ್ರತ್ಯೇಕ ಪಾದಚಾರಿಗಳ ಮಾರ್ಗಗಳನ್ನು ನಿರ್ಮಿಸಿಕೊಳ್ಳಬಹುದು ಎಂದು ಅಧಿಕಾರಿಗಳು ವಿವರಿಸಿದರು.

'ಮೆಟ್ರೊ ಪಿಲ್ಲರ್‌ಗಳಿಗೆ ಬಣ್ಣ ಬಳಿಯುವ ಮತ್ತು ರಸ್ತೆ ವಿಭಜಗಳ ಮಧ್ಯದಲ್ಲಿ ಕಿರು ಉದ್ಯಾನಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಇದೆ. ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆ ಮಾಡಬಹುದು. ಐ.ಟಿ ಕಂಪನಿಗಳು ಮುಂದೆ ಬಂದರೆ ಇದಕ್ಕೂ ಅವಕಾಶ ಕಲ್ಪಿಸುವ ಬಗ್ಗೆ ಬಿಎಂಆರ್‌ಸಿಎಲ್ ಚರ್ಚೆ ನಡೆಸಿದೆ' ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘದ ಪ್ರಧಾನ ವ್ಯವಸ್ಥಾಪಕ ಕೃಷ್ಣಕುಮಾರ್ ತಿಳಿಸಿದರು.

### ಬೆಂಗಳೂರಿನಲ್ಲಿ ಚಳಿ ಶುರು

**ಬೆಂಗಳೂರು:** ಈಶಾನ್ಯ ಗಾಳಿ ಆರಂಭ ಆಗಿರುವುದನ್ನು ಹವಾಮಾನ ಇಲಾಖೆ ಅಧಿಕೃತಗೊಳಿಸದಿದ್ದರೂ, ನಗರದಲ್ಲಿ ಚಳಿ ವಾತಾವರಣ ಶುರುವಾಗಿದೆ. ರಾಜ್ಯದ ಬೇರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲೇ ಅತಿ ಕಡಿಮೆ ಉಷ್ಣಾಂಶ ದಾಖಲಾಗಿದೆ.

ದೇಶದ ಪ್ರಮುಖ ನಗರಗಳ ಪೈಕಿ ಕೋಲ್ಕತ್ತದಲ್ಲಿ ಅತಿ ಕಡಿಮೆ ಉಷ್ಣಾಂಶ(22.8 ಡಿಗ್ರಿ ಸೆಲ್ಸಿಯಸ್) ದಾಖಲಾದರೆ, ಬೆಂಗಳೂರಿನಲ್ಲಿ 24.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಸೋಮವಾರ ದಾಖಲಾಗಿದೆ. ಬೆಂಗಳೂರಿನಲ್ಲಿ ಇನ್ನೂ ಮೂರು ದಿನ ಹೆಚ್ಚಿನ ಚಳಿ ಇರಲಿದೆ. ಕನಿಷ್ಠ ಉಷ್ಣಾಂಶ 17 ಡಿಗ್ರಿ ಸೆಲ್ಸಿಯಸ್ ಮತ್ತು ಗರಿಷ್ಠ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್ ಇರಲಿದೆ. ಅ.28ರ ಬಳಿಕ ಉಷ್ಣಾಂಶ ಕೊಂಚ ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನೈರುತ್ಯ ಮಾರುತಗಳು ಬೀಸುವುದು ನಿಂತಿರುವುದನ್ನು ಹವಾಮಾನ ಇಲಾಖೆ ಘೋಷಿಸಿದೆ. ಸಾಮಾನ್ಯವಾಗಿ ನೈರುತ್ಯ ಮಾರುತಗಳು ಕೊನೆಯಾಗುವ ಸಂದರ್ಭದಲ್ಲೇ ಈಶಾನ್ಯ ಮಾರುತಗಳು ಆರಂಭವಾಗುತ್ತಿವೆ. ಈ ಬಾರಿ ಚಂಡಮಾರುತ ಇರುವುದರಿಂದ ಈಶಾನ್ಯ ಮಾರುತಗಳು ಆರಂಭವಾಗಿರುವ ಬಗ್ಗೆ ಹವಾಮಾನ ಇಲಾಖೆ ಇನ್ನೂ ಅಧಿಕೃತಗೊಳಿಸಿಲ್ಲ ಎಂದು ಹವಾಮಾನ ತಜ್ಞರು ಹೇಳುತ್ತಾರೆ.

'ಗಾಳಿ ಬೀಸುವ ದಿಕ್ಕು ಬದಲಾಗಿ, ಚಳಿ ಆರಂಭವಾಗಿರುವುದು ಎಲ್ಲರ ಅನುಭವಕ್ಕೆ ಬರುತ್ತಿದೆ. ಚಂಡಮಾರುತ ಕಡಿಮೆಯಾದ ಬಳಿಕವೂ ಇದೇ ವಾತಾವರಣ ಮುಂದುವರಿಯುವ ಸಾಧ್ಯತೆ ಇದೆ' ಎಂದರು.

### ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ



**ಯಲಹಂಕ:** ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿ.ಆರ್.ಪಿ.ಎಫ್) ಕೇಂದ್ರದ ಸಂಯುಕ್ತ ವೈದ್ಯಕೀಯ ಆಸ್ಪತ್ರೆ ಹಾಗೂ ಐ.ಎಂ.ಎ ಆಯುರ್ವೇದ ಆಸ್ಪತ್ರೆಯ ಸಹಯೋಗದಲ್ಲಿ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಶಿಬಿರದ ಉದ್ಘಾಟನೆ ನೆರವೇರಿಸಿದ ವೈದ್ಯಕೀಯ ವಿಭಾಗದ ಡಿಐಜಿ ಡಾ.ಸಂತೋಷ್ ಕೆ.ಮಿಶ್ರ ಮಾತನಾಡಿ, 'ಶಿಬಿರದಲ್ಲಿ ಚರ್ಮರೋಗ, ಸ್ತ್ರೀರೋಗ ಮತ್ತು ಜೀರ್ಣಕ್ರಿಯೆ ಕಾಯಿಲೆಗಳಿಗೆ ಸಂಬಂಧಿಸಿದಂತೆ ತಜ್ಞವೈದ್ಯರು ತಪಾಸಣೆ ನಡೆಸಿ ಚಿಕಿತ್ಸೆ ನೀಡಲಿದ್ದಾರೆ. ಉಚಿತವಾಗಿ ಔಷಧಿ ವಿತರಿಸಲಾಗುವುದು' ಎಂದರು. ಪಿಎಸ್‌ಐ ಎಚ್.ಎಂ.ಹರೀಶ್ ಉಪಸ್ಥಿತರಿದ್ದರು.

### ಯಶವಂತಪುರ, ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಪುನರ್ ಅಭಿವೃದ್ಧಿಗೆ ಯೋಜನೆ, ಶುರುವಾಗಿದೆ ಟೆಂಡರ್ ಪ್ರಕ್ರಿಯೆ

# ರೈಲು ನಿಲ್ದಾಣಗಳಿನ್ನು ಹೈಟೆಕ್ 'ನಲ್ದಾಣ'

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳು ವಿಮಾನ ನಿಲ್ದಾಣಗಳ ಮಾದರಿಯಲ್ಲಿ ಹೈಟೆಕ್ ಆಗಲಿವೆ. ಪುನರ್ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಮೂರೇ ವರ್ಷಗಳಲ್ಲಿ ಈ ನಿಲ್ದಾಣಗಳ ಚಿತ್ರಣವೇ ಬದಲಾಗಲಿದೆ. ಪ್ರಯಾಣಿಕರ ಪಾಲಿಗೆ ಇವುಗಳು ನಿಲ್ದಾಣಗಳ ಜತೆಗೆ 'ನಲ್ದಾಣ'ಗಳಾಗಿ ಕಂಗೊಳಿಸಲಿವೆ.

ಬೆಂಗಳೂರಿನ ನಾಲ್ಕು ಪ್ರಮುಖ ರೈಲು ನಿಲ್ದಾಣಗಳಲ್ಲಿ ಬೈಯಪ್ಪನಹಳ್ಳಿಯ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಈಗಾಗಲೇ ಹೈಟೆಕ್ ಆಗಿದೆ. ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದರೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಅಭಿವೃದ್ಧಿಗೆ ಮಹಾಯೋಜನೆ ಸಿದ್ಧವಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 20ರಂದು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಅಭಿವೃದ್ಧಿಗೆ ಅಡಿಗಲ್ಲು ಹಾಕಿದ್ದಾರೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾಮಗಾರಿ ಆರಂಭವಾದರೆ 30 ತಿಂಗಳಲ್ಲಿ ನಿಲ್ದಾಣಗಳು ಹೈಟೆಕ್ ರೂಪ ಪಡೆಯಲಿವೆ. ವಿಮಾನ ನಿಲ್ದಾಣಗಳಲ್ಲಿನ ಮಾದರಿಯಲ್ಲೇ ಹವಾನಿಯಂತ್ರಿತ ಮತ್ತು ಪ್ರಯಾಣಿಕರ ಸೌಲಭ್ಯಗಳು ದೊರೆಯಲಿವೆ.

'ರೈಲಿನಲ್ಲಿ ಪ್ರಯಾಣಿಸಲು ಟಿಕೆಟ್ ಸಿಕ್ಕರೆ ಸಾಕು, ನಿಲ್ದಾಣಗಳಲ್ಲಿ ಕೂರಲು ಬೆಂಚ್‌ಗಳಿದ್ದರೆ ಸಾಕು ಎಂಬ ಕಾಲ ಈಗಿಲ್ಲ. ಹೈಟೆಕ್ ಸೌಕರ್ಯಗಳನ್ನು ಜನ ಬಯಸುತ್ತಿದ್ದಾರೆ. ಮುಂದಿನ 60 ವರ್ಷಗಳ ಮುಂದಾಲೋಚನೆಯೊಂದಿಗೆ ನಿಲ್ದಾಣಗಳು ಅಭಿವೃದ್ಧಿಗೊಳ್ಳಲಿವೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

**₹480** ಕೋಟಿ
ಕಂಟೋನ್ಮೆಂಟ್ ರೈಲು ನಿಲ್ದಾಣ ಅಭಿವೃದ್ಧಿಗೆ ಯೋಜನಾ ಮೊತ್ತ

**₹400** ಕೋಟಿ
ಯಶವಂತಪು ರೈಲು ನಿಲ್ದಾಣ ಅಭಿವೃದ್ಧಿಗೆ ಯೋಜನಾ ಮೊತ್ತ


ಕಂಟೋನ್ಮೆಂಟ್ ರೈಲು ನಿಲ್ದಾಣದ ವಿನ್ಯಾಸ

### ಕೆಎಸ್‌ಆರ್ ನಿಲ್ದಾಣಕ್ಕೂ ಹೊಸ ಲುಕ್

ದೇಶದ 199 ರೈಲು ನಿಲ್ದಾಣಗಳ ಅಭಿವೃದ್ಧಿಯಾಗುತ್ತಿದ್ದು, ಅವುಗಳ ಪೈಕಿ 47 ನಿಲ್ದಾಣಗಳ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ.

ಉಳಿದ ನಿಲ್ದಾಣಗಳ ಅಭಿವೃದ್ಧಿಗೆ ಮಹಾಯೋಜನೆ ಸಿದ್ಧಪಡಿಸಲಾಗುತ್ತಿದೆ. ಈ ಪಟ್ಟಿಯಲ್ಲಿ ಕೆಎಸ್‌ಆರ್ ರೈಲು ನಿಲ್ದಾಣವೂ ಸೇರಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

### ಪಾರಂಪರಿಕ ಶೈಲಿ ಉಳಿಸಿಕೊಂಡೇ ಅಭಿವೃದ್ಧಿ

ಕಂಟೋನ್ಮೆಂಟ್ ರೈಲು ನಿಲ್ದಾಣದ ಪಾರಂಪರಿಕ ಶೈಲಿಯನ್ನು ಉಳಿಸಿಕೊಂಡೇ ಹೊಸ ವಿನ್ಯಾಸವನ್ನು ನೈರುತ್ಯ ರೈಲ್ವೆ ಸಿದ್ಧಪಡಿಸುತ್ತಿದೆ.

ಈಗಿರುವಂತೆಯೇ ವಸಂತನಗರ ಭಾಗಕ್ಕೆ ಮುಖ್ಯ ಪ್ರವೇಶ ದ್ವಾರ, ಮಿಲ್ಲರ್ಸ್ ರಸ್ತೆ ಕಡೆಗೆ ಎರಡನೇ ಪ್ರವೇಶ ದ್ವಾರ ನಿರ್ಮಿಸಲು ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ಪ್ರವೇಶ ದ್ವಾರಗಳಲ್ಲಿ ಪ್ರಯಾಣಿಕರ ಸಂಚಾರಕ್ಕೆ ತೊಂದರೆ ಆಗದಂತೆ ಎರಡೂ ಕಡೆ ಪ್ರತ್ಯೇಕ ಟಿಕೆಟ್ ವಿತರಿಸುವ ಕೌಂಟರ್‌ಗಳನ್ನು ತೆರೆಯಲು ಉದ್ದೇಶಿಸಿದೆ. ಎರಡೂ ಪ್ರವೇಶ ದ್ವಾರದ ಕಡೆಯೂ ಎರಡು ಮಹಡಿಗಳಲ್ಲಿ ವಾಹನಗಳ ನಿಲುಗಡೆ ತಾಣ ನಿರ್ಮಿಸುವುದನ್ನು ಯೋಜನೆ ಒಳಗೊಂಡಿದೆ.

ಪಾರಂಪರಿಕ ಶೈಲಿಯೇ ಈ ನಿಲ್ದಾಣದ ವಿಶೇಷ. ಅದನ್ನು ಉಳಿಸಿಕೊಂಡು ವಿಶ್ವ ದರ್ಜೆಯ ಸೌಕರ್ಯಗಳನ್ನು ಯಾವ ರೀತಿ ಕಲ್ಪಿಸಬಹುದು ಎಂಬುದಕ್ಕೆ ತಾಂತ್ರಿಕ ತಜ್ಞರ ಸಲಹೆಯನ್ನು ನೈರುತ್ಯ ರೈಲ್ವೆ ಪಡೆಯುತ್ತಿದೆ.

### ಎರಡೂ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸೌಕರ್ಯ

- ರೈಲು ನಿಲ್ದಾಣ ಪ್ರವೇಶಿಸಿದ ಕೂಡಲೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರವೇಶಿಸಿದ ಅನುಭವ ದೊರಕಿದಂತೆ ಆಗಲಿದೆ.
- ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆ, ಉಪಾಹಾರ ಮಂದಿರ, ಅಂಗಡಿ ಮುಂಗಟ್ಟುಗಳೆಲ್ಲವೂ ಹೈಟೆಕ್ ಸ್ವರೂಪ.
- ಹೈಟೆಕ್ ಶೌಚಾಲಯ, ವಿಶಾಲವಾದ ವಿಶ್ರಾಂತಿ ಗೃಹಗಳ ನಿರ್ಮಾಣ.
- ಸುಸಜ್ಜಿತ ವಾಹನ ನಿಲುಗಡೆ ತಾಣಗಳ ಅಭಿವೃದ್ಧಿ. ಬಸ್, ಆಟೊರಿಕ್ಷಾ ಮತ್ತು ಟ್ಯಾಕ್ಸಿಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ.
- ಪ್ರಯಾಣಿಕರ ಆಗಮನ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ಜಾಗ.
- ಎರಡೂ ನಿಲ್ದಾಣಗಳು ಸಂಪೂರ್ಣ ಸೌರ ಚಾವಣಿ, ಶೌಚ ನೀರು ಸಂಸ್ಕರಣಾ ಘಟಕ, ಮಳೆ ನೀರು ಸಂಗ್ರಹ ವ್ಯವಸ್ಥೆ.
- ಅಂಗವಿಕಲರು, ವೃದ್ಧರ ಅನುಕೂಲಕ್ಕಾಗಿ ಎಸ್ಕಲೇಟರ್, ಲಿಫ್ಟ್, ರ್‍ಯಾಂಪ್‌ಗಳ ನಿರ್ಮಾಣ.


ಯಶವಂತಪುರ ರೈಲು ನಿಲ್ದಾಣದ ವಿನ್ಯಾಸ

### ಯಶವಂತಪುರ: ಹೊಸ ವಿನ್ಯಾಸ ಉಳಿಸಿಕೊಳ್ಳಲು ಅಧ್ಯಯನ

ಯಶವಂತಪುರ ರೈಲು ನಿಲ್ದಾಣದ ಹೊರ ಭಾಗವನ್ನು ಇತ್ತೀಚೆಗೆ ಮರು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಈ ವಿನ್ಯಾಸವನ್ನು ಉಳಿಸಿಕೊಂಡು ಅಭಿವೃದ್ಧಿಪಡಿಸುವ ಬಗ್ಗೆಯೂ ಅಧ್ಯಯನ ನಡೆಸಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

ಹೊರ ಭಾಗದಲ್ಲಿ ವಿಮಾನ ನಿಲ್ದಾಣ ಮಾದರಿಯ ವಿನ್ಯಾಸ, ಕಾರಂಜಿ ಸಹಿತ ಉದ್ಯಾನ, ವಾಹನಗಳ ನಿಲುಗಡೆ ತಾಣದ ಅಭಿವೃದ್ಧಿ ಕಾಮಗಾರಿಗಳನ್ನು ಈಗಾಗಲೇ ನಿರ್ವಹಿಸಲಾಗಿದೆ. ನಿಲ್ದಾಣದ ಒಳಭಾಗದಲ್ಲಿ ಹೈಟೆಕ್ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶ ಹೊಸ ಯೋಜನೆಯಲ್ಲಿ ಇದೆ ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಪ್ರತಿ ನಿಲ್ದಾಣವು ವಿಶಾಲವಾದ ಚಾವಣಿ ಪ್ಲಾಜಾವನ್ನು ಹೊಂದಿರಲಿದೆ. ಚಿಲ್ಲರೆ ವ್ಯಾಪಾರ, ಕೆಫೆಟೇರಿಯಾಗಳು, ಮನರಂಜನಾ ಸೌಲಭ್ಯ ಸೇರಿ ಒಂದೇ ಸ್ಥಳದಲ್ಲಿ ಎಲ್ಲ ಪ್ರಯಾಣಿಕ ಸೌಕರ್ಯಗಳನ್ನು ಹೊಂದಿರುತ್ತದೆ ಎಂದು ಅವರು ಹೇಳುತ್ತಾರೆ.

### ಮಂಜಣ್ಣನ ಪರಿಸರ ಕಾಳಜಿಗೆ ಸ್ಥಳೀಯರು ಫಿದಾ • ರಸ್ತೆಯ ಇಕ್ಕೆಲಗಳಲ್ಲಿ ತುಂಬಿರುತ್ತಿದ್ದ ಕಸ

# 'ಪರಿಸರ ಸೇನೆ'ಯ ಮಾದರಿ ಬಡಾವಣೆ

• ಖಲೀಲಅಹ್ಮದ ಶೇಖ

**ಬೆಂಗಳೂರು:** ಬೆಳಿಗ್ಗೆ ಎಲ್ಲರೂ ವಾಯುವಿಹಾರಕ್ಕೆ ತೆರಳಿದರೆ ಉಲ್ಲಾಳ ಉಪನಗರದ ವಿಶ್ವೇಶ್ವರಯ್ಯ ಬಡಾವಣೆಯ 60 ಅಡಿ ರಸ್ತೆಯಲ್ಲಿ ಸಂಚರಿಸುವವರಿಗೆ ಪೊರಕೆ, ಗುದ್ದಲಿ, ಸಲಿಕೆ ಹಿಡಿದುಕೊಂಡು ರಸ್ತೆಯ ಬದಿಯ ಪಾದಚಾರಿ ಮಾರ್ಗ ಸ್ವಚ್ಛಗೊಳಿಸುವ ಪೊರಕೆ ಮಂಜಣ್ಣ ಮತ್ತು ಪರಿಸರ ಸೇನೆ ತಂಡ ಕಣ್ಣಿಗೆ ಬೀಳುತ್ತದೆ. ನಿತ್ಯ ಈ ರಸ್ತೆ ಸ್ವಚ್ಛಗೊಳಿಸಿ ಪರಿಸರಸ್ನೇಹಿ ಬಡಾವಣೆಯನ್ನಾಗಿ ನಿರ್ಮಿಸಲು ಈ ಪರಿಸರ ಪ್ರೇಮಿಗಳು ಪಣ ತೊಟ್ಟಿದ್ದಾರೆ.

ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದ ಬಿ.ಎಸ್. ಮಂಜುನಾಥ 2019ರಲ್ಲಿ ನಿವೃತ್ತರಾಗಿದ್ದಾರೆ. ಸದ್ಯ ವಿಶ್ವೇಶ್ವರಯ್ಯ ಬಡಾವಣೆಯ 3ನೇ ಹಂತದಲ್ಲಿ ವಾಸವಾಗಿದ್ದಾರೆ.


'4 ವರ್ಷದ ಹಿಂದೆ ಬಡಾವಣೆಯ ವಿದ್ಯಾ ನಿಕೇತನ ಪಬ್ಲಿಕ್ ಶಾಲೆಯಿಂದ ಸರ್.ಎಂ ವಿಶ್ವೇಶ್ವರಯ್ಯ 4ನೇ ಬ್ಲಾಕ್‌ನ ಬಡಾವಣೆಗೆ ಸಂಪರ್ಕ ಕಲ್ಪಿಸುವ 1.5 ಕಿ.ಮೀ ರಸ್ತೆಯ ಎರಡು ಬದಿಯ ಪಾದಚಾರಿ ಮಾರ್ಗ ಗಿಡ–ಗಂಟಿಗಳಿಂದ ಕೊಡಿತ್ತು. ರಸ್ತೆಯ ಬದಿಯಲ್ಲಿ ಅಲಲ್ಲಿ ಕಸದ ರಾಶಿಯನ್ನು ಹಾಕಲಾಗಿತ್ತು. ಇದನ್ನು ಸ್ವಚ್ಛಗೊಳಿಸಬೇಕೆಂಬ ಉದ್ದೇಶದಿಂದ ನಿತ್ಯ ಬೆಳಿಗ್ಗೆ 7ರಿಂದ 8ಗಂಟೆ ವರೆಗೂ ಸ್ವಚ್ಛಗೊಳಿಸುವ ಕಾಯಕ ಪ್ರಾರಂಭಿಸಿದ್ದೇನೆ' ಎಂದು ಬಿ.ಎಸ್. ಮಂಜುನಾಥ್ ವಿವರಿಸಿದರು.

'ನಮ್ಮ ಬಡಾವಣೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಇಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡುತ್ತಿರಲಿಲ್ಲ. ರಸ್ತೆಗಳ ಇಕ್ಕೆಲಗಳಲ್ಲಿ ಕಸದ ರಾಶಿಯೇ ಬಿದ್ದಿರುತ್ತಿತ್ತು. ಇಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆರಂಭದಲ್ಲಿ ನಾನೊಬ್ಬನೇ ಈ ಕೆಲಸಕ್ಕೆ ಅಣಿಯಾದೆ. ನಂತರ 10–15 ಜನ ನನ್ನ ಜೊತೆ ಕೈ ಜೋಡಿಸಿದರು. ಈಗ ಎಲ್ಲರೂ ಬೆಳಿಗ್ಗೆ ಒಂದು ಗಂಟೆ ಈ ಸೇವೆಯಲ್ಲಿ ಪಾಲ್ಗೊಳ್ಳುತ್ತಾರೆ' ಎನ್ನುತ್ತಾರೆ ಮಂಜುನಾಥ್.

'ಈಗಾಗಲೇ ಈ ರಸ್ತೆಯನ್ನು ಪ್ಲಾಸ್ಟಿಕ್ ಮುಕ್ತ ಮಾಡಲಾಗಿದೆ. ಸ್ಥಳೀಯರು ಮತ್ತು ಬಿಬಿಎಂಪಿಯ ಪೌರ ಕಾರ್ಮಿಕರು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ. ಇದನ್ನು ಮಾದರಿ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವುದು ನಮ್ಮ ಉದ್ದೇಶ' ಎಂದರು.

'ಸ್ವಂತ ಖರ್ಚಿನಲ್ಲಿ ಬಡಾವಣೆಯ 7–8 ಕಡೆ ಪರಿಸರ ಜಾಗೃತಿ ಫಲಕಗಳನ್ನು ಅಳವಡಿಸಿದ್ದೇನೆ. ರಸ್ತೆ ಇಕ್ಕೆಲಗಳಲ್ಲಿ ಹಲವು ಹಣ್ಣಿನ ಗಿಡಗಳನ್ನು ನೆಟ್ಟಿದ್ದು, ಈಗ ಫಲ ಕೊಡುವಷ್ಟು ದೊಡ್ಡದಾಗಿ ಬೆಳೆದಿವೆ. ಯುವಜನರಲ್ಲಿ ಪರಿಸರದ ಕುರಿತು ಜಾಗೃತಿ ಮೂಡಿಸುವುದೇ ನಮ್ಮ ತಂಡದ ಮುಖ್ಯ ಉದ್ದೇಶ. ಪರಿಸರ ರಕ್ಷಣೆಗೆ ಪ್ರತಿಯೊಬ್ಬರು ನಮ್ಮ ಜೊತೆ ಕೈ ಜೋಡಿಸಬೇಕು' ಎಂದರು.


ಉಲ್ಲಾಳ ಉಪನಗರದ ವಿಶ್ವೇಶ್ವರಯ್ಯ ಬಡಾವಣೆಯ ರಸ್ತೆಯ ಪಾದಚಾರಿ ಮಾರ್ಗವನ್ನು ಸ್ವಚ್ಛಗೊಳಿಸುತ್ತಿರುವ ಬಿ.ಎಸ್ ಮಂಜುನಾಥ್ ಮತ್ತು ಪರಿಸರ ಸೇನೆಯ ತಂಡ. – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.



**ಪ್ರಕೃತಿ ದೇವರು ಕೊಟ್ಟ ವರ. ಅದನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಪ್ರತಿ ತಿಂಗಳು ನನಗೆ ಬರುವ ಪಿಂಚಣಿಯಲ್ಲಿ ಪರಿಸರ ಸಂರಕ್ಷಣೆಗೂ ಹಣವನ್ನು ಮೀಸಲಿಡುತ್ತೇನೆ.**
**ಬಿ.ಎಸ್. ಮಂಜುನಾಥ್**

### ಪೊರಕೆ ಮಂಜಣ್ಣ ಸ್ಫೂರ್ತಿ

'ಮಂಜಣ್ಣ ಕಳೆದ ಎರಡು ಮೂರು ವರ್ಷಗಳಿಂದ ಬಡಾವಣೆಯ ರಸ್ತೆ ಮತ್ತು ಪಾದಚಾರಿ ಮಾರ್ಗ, ಉದ್ಯಾನ ಕಟ್ಟಿಕೊಂಡಿರುವ ಮೋರಿಗಳ ಸ್ವಚ್ಛತೆ ಮಾಡುತ್ತಿದ್ದಾರೆ. ಅವರ ಸ್ವಚ್ಛತಾ ಕಾರ್ಯ ಮತ್ತು ಪರಿಸರ ಕಾಳಜಿಯಿಂದ ಸ್ಫೂರ್ತಿ ಪಡೆದು ನಾವು ಅವರೊಂದಿಗೆ ಕೈಜೋಡಿಸಿದ್ದೇವೆ. ಸ್ಥಳೀಯರೆಲ್ಲರೂ ಅವರನ್ನು ಪೊರಕೆ ಮಂಜಣ್ಣ ಎಂದೇ ಕರೆಯುತ್ತೇವೆ' ಎಂದು ತಂಡದ ಸದಸ್ಯರಾದ ಶ್ರೀನಿವಾಸ್, ಕಲ್ಲೇಶ್ ಮತ್ತು ಕೃಷ್ಣಮೂರ್ತಿ ತಿಳಿಸಿದರು.

ಪ್ರಜಾವಾಣಿ ವಿಶೇಷ

# ರಸ್ತೆ ಗುಂಡಿಗಳಲ್ಲಿ ದೀಪ ಹಚ್ಚಿ ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ರಸ್ತೆಯ ಗುಂಡಿಗಳಲ್ಲಿ ದೀಪ ಹಚ್ಚುವ ಮೂಲಕ ಜೆಡಿಎಸ್ ಕಾರ್ಯಕರ್ತರು ನರಕ ಚತುರ್ದಶಿಯ ದಿನವಾದ ಸೋಮವಾರ ವಿನೂತನ ಪ್ರತಿಭಟನೆ ನಡೆಸಿದರು.

ಮೆಜೆಸ್ಟಿಕ್ ಬಳಿಯ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, 'ಗುಂಡಿಗಳಿಂದಾಗಿ ನಾಲ್ಕು ವರ್ಷಗಳಲ್ಲಿ ಬೆಂಗಳೂರಿನ ಹಲವರು ಮೃತಪಟ್ಟಿದ್ದಾರೆ. ಇಡೀ ದೇಶ ಬೆಳಕಿನ ಹಬ್ಬದ ಆಚರಣೆಯಲ್ಲಿ ಮುಳುಗಿದ್ದರೆ, ಕರ್ನಾಟಕದ ಜನರ ಬದುಕಿನಲ್ಲಿ ಕತ್ತಲೆ ಆವರಿಸಿದೆ' ಎಂದು ದೂರಿದರು.

ರಸ್ತೆಗುಂಡಿಗಳಿಗೆ ಬಿದ್ದು ಅಪಘಾತಗಳು, ಜೀವಹಾನಿ ಸಂಭವಿಸುತ್ತಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಹಲವು ಜನರು ಕೈಕಾಲು ಮುರಿದುಕೊಂಡು ಅಂಗವಿಕಲರಾಗಿದ್ದಾರೆ. ಬೆಂಗಳೂರು ನಗರದಲ್ಲಿ ಗುಂಡಿಗಳಿಲ್ಲದ ರಸ್ತೆ ಹುಡುಕಬೇಕಿದೆ. ರಾಜ್ಯದ ತೆರಿಗೆಯಲ್ಲಿ ಶೇ 65ರಷ್ಟು ಬೆಂಗಳೂರಿಗರೇ ಭರಿಸುತ್ತಾರೆ. ಆದರೆ, ಬಿಜೆಪಿ ಸರ್ಕಾರ ಬೆಂಗಳೂರನ್ನು ನಿರ್ಲಕ್ಷ್ಯ ಮಾಡುತ್ತಿದೆ. ಜನರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು. ರಸ್ತೆ ಅಪಘಾತದಲ್ಲಿ ಮೃತಪಟ್ಟವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಬೆಂಗಳೂರು ನಗರ ಅಧ್ಯಕ್ಷ ಆರ್. ಪ್ರಕಾಶ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


ಬೆಂಗಳೂರಿನಲ್ಲಿ ಸೋಮವಾರ ಜೆಡಿಎಸ್ ಕಾರ್ಯಕರ್ತರು ರಸ್ತೆ ಗುಂಡಿಗಳ ಮುಂದೆ ದೀಪ ಹಚ್ಚುವ ಮೂಲಕ ಪ್ರತಿಭಟನೆ ನಡೆಸಿದರು.

## ರಸ್ತೆ ಗುಂಡಿ ತಪ್ಪಿಸಲು ಹೋಗಿ ಸವಾರ ಸಾವು

**ಪೀಣ್ಯ ದಾಸರಹಳ್ಳಿ:** ಮಾದಾವರ ಬಳಿಯ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಗುಂಡಿ ತಪ್ಪಿಸಲು ಹೋಗಿ ಕೆಳಗೆ ಬಿದ್ದ ಬೈಕ್ ಸವಾರನ ಮೇಲೆ ಕಂಟೈನರ್‌ನ ಚಕ್ರ ಹರಿಯಿತು. ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದರು.

ತುಮಕೂರು ಜಿಲ್ಲೆ ಪಾವಗಡದ ತಿಪ್ಪೇಸ್ವಾಮಿ (45) ಮೃತಪಟ್ಟವರು.

ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ಅವರು ಮಾದಾವರದಲ್ಲಿ ನೆಲೆಸಿದ್ದರು. ದೀಪಾವಳಿ ಹಬ್ಬಕ್ಕೆ ಊರಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಈ ಅವಘಡ ನಡೆದಿದೆ.

'ಸೇವಾ ರಸ್ತೆಯಲ್ಲಿದ್ದ ಗುಂಡಿ ತಪ್ಪಿಸಲು ಹೋಗಿ ತಿಪ್ಪೇಸ್ವಾಮಿ ಕೆಳಗೆ ಬಿದ್ದರು. ಅದೇ ಸಮಯದಲ್ಲಿ ಹಿಂಬದಿಯಿಂದ ವೇಗವಾಗಿ ಬರುತ್ತಿದ್ದ ಕಂಟೈನರ್ ಲಾರಿ ತಲೆಯ ಮೇಲೆ ಹರಿಯಿತು. ಹೆಲ್ಮೆಟ್ ಧರಿಸಿದ್ದರೂ ಅದು ಪುಡಿಯಾಗಿದೆ. ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಂಟೈನರ್ ಚಾಲಕನನ್ನು ಬಂಧಿಸಲಾಗಿದೆ. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇತ್ತೀಚೆಗೆ ರಾಜಾಜಿನಗರದ ಲುಲು ಮಾಲ್ ಬಳಿ ಬೈಕ್‌ನಲ್ಲಿ ಬರುತ್ತಿದ್ದ ಉಮಾದೇವಿ ಎಂಬುವವರು ಗುಂಡಿ ತಪ್ಪಿಸಲು ಹೋಗಿ ಕೆಳಗೆ ಬಿದ್ದಿದ್ದರು. ಅವರ ಮೇಲೆ ಕೆಎಸ್‌ಆರ್‌ಟಿಸಿ ಬಸ್ ಹರಿದು ಮೃತಪಟ್ಟಿದ್ದರು. ಈ ಘಟನೆ ನಡೆದು ಕೆಲವೇ ದಿನಗಳ ಅಂತರದಲ್ಲಿ ಮತ್ತೊಬ್ಬ ಬೈಕ್ ಸವಾರ ರಸ್ತೆಯ ಗುಂಡಿಯಿಂದಾಗಿ ಮೃತಪಟ್ಟಿದ್ದಾರೆ.

**ಅಪರಾಧ ಸುದ್ದಿ**

### ಫ್ಲೈಓವರ್ ಮೇಲಿಂದ ಬಿದ್ದು ಬೈಕ್ ಸವಾರ ಸಾವು

**ಬೆಂಗಳೂರು:** ಬೈಕ್‌ನಲ್ಲಿ ವೇಗವಾಗಿ ಬರುವಾಗ ಸವಾರನೊಬ್ಬ ಫ್ಲೈಓವರ್ ಮೇಲಿನಿಂದ ಬಿದ್ದು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ನಡೆದಿದೆ.

ಕೋರೆ ನಾಗಾರ್ಜುನ್ (33) ಮೃತಪಟ್ಟ ಬೈಕ್ ಸವಾರ. ಆಂಧ್ರಪ್ರದೇಶದ ನಾಗಾರ್ಜುನ್ ನಗರದ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು.

'ಬೆಳಿಗ್ಗೆ 11.30ರ ವೇಳೆಗೆ ಪಲ್ಸರ್ ಬೈಕ್‌ನಲ್ಲಿ ಬರುತ್ತಿದ್ದರು. ಎಲಿವೇಟೆಡ್ ಫ್ಲೈಓವರ್ ರಸ್ತೆಯಲ್ಲಿ ಸಿಲ್ಕ್ ಬೋರ್ಡ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ವೇಗವಾಗಿ ಬರುವಾಗ ಬೈಕ್ ನಿಯಂತ್ರಣ ಕಳೆದುಕೊಂಡು ತಡೆಗೋಡೆಗೆ ಡಿಕ್ಕಿಯಾಗಿದೆ. ಬೈಕ್ ಸವಾರ ಎಲಿವೇಟೆಡ್ ಫ್ಲೈಓವರ್ ಮೇಲಿಂದ ಕೆಳಗಡೆ ಹೊಸೂರು ಮುಖ್ಯರಸ್ತೆಯ ಸ್ಕೈವಾಕ್ ಹತ್ತಿರ ಬಿದ್ದಿದ್ದರು. ತಲೆಗೆ ಹಾಗೂ ದೇಹದ ಇತರೆ ಭಾಗಗಳಿಗೆ ತೀವ್ರ ಸ್ವರೂಪದ ಪೆಟ್ಟಾಗಿದ್ದರಿಂದ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ₹ 18 ಲಕ್ಷದ 30 ಬೈಕ್ ಜಪ್ತಿ

**ಬೆಂಗಳೂರು:** ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ₹ 18 ಲಕ್ಷ ಮೌಲ್ಯದ ವಿವಿಧ ಕಂಪನಿಯ 30 ಬೈಕ್ ಜಪ್ತಿ ಮಾಡಿದ್ದಾರೆ.

ರಾಮಚಂದ್ರಪುರದ 2ನೇ ಮುಖ್ಯರಸ್ತೆ, 5ನೇ ಕ್ರಾಸ್‌ನ ಕೃತಿಕ್ ಹಾಗೂ ನಗರದ ಮಾಗಡಿ ಮುಖ್ಯರಸ್ತೆಯ ವಿಜಯ್ ಬಂಧಿತ ಆರೋಪಿಗಳು.

'ಬ್ಯಾಟರಾಯನಪುರ, ಚಂದ್ರಾಲೇಔಟ್, ವಿವೇಕನಗರ, ಕಾಟನ್‌ಪೇಟೆ, ಕೆಂಗೇರಿ, ಯಲಹಂಕ, ಕಾಮಾಕ್ಷಿಪಾಳ್ಯ, ಚಾಮರಾಜಪೇಟೆ, ಮಾಗಡಿ ರಸ್ತೆ, ಕೆ.ಜಿ.ನಗರ ವ್ಯಾಪ್ತಿಯಲ್ಲಿ ಇಬ್ಬರು 30 ಬೈಕ್ ಕಳವು ಮಾಡಿ ಮಾರಾಟ ನಡೆಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ₹ 7 ಲಕ್ಷ ಮೌಲ್ಯದ 40 ಮೊಬೈಲ್ ವಶ

**ಬೆಂಗಳೂರು:** ರಸ್ತೆಯಲ್ಲಿ ಒಂಟಿಯಾಗಿ ಓಡಾಟ ನಡೆಸುತ್ತಿದ್ದವರನ್ನೇ ಗುರಿಯಾಗಿಸಿ ಮೊಬೈಲ್ ದೋಚುತ್ತಿದ್ದ ಇಬ್ಬರು ಆರೋಪಿಗಳನ್ನು ಕೋರಮಂಗಲ ಪೊಲೀಸರು ಬಂಧಿಸಿದ್ದಾರೆ.

'ಜಪ್ತಿ ಮಾಡಿದ ವಿವಿಧ ಕಂಪನಿಯ ಮೊಬೈಲ್‌ಗಳ ಮೌಲ್ಯ ₹ 7 ಲಕ್ಷ. ಆರೋಪಿಗಳು ಟಿವಿಎಸ್ ಅಪಾಚೆ ಬೈಕ್‌ನಲ್ಲಿ ಬಂದು ಬೆದರಿಸಿ ಮೊಬೈಲ್ ಕಸಿದು ಪರಾರಿ ಆಗುತ್ತಿದ್ದರು. ಬಸವೇಶ್ವರ ನಗರದಲ್ಲಿ ಮೊಬೈಲ್ ರಿಪೇರಿ ಅಂಗಡಿಗೆ ಮಾರಾಟ ಮಾಡುತ್ತಿದ್ದರು. ಇದರಿಂದ ಬರುತ್ತಿದ್ದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು. ಈ ಆರೋಪಿಗಳ ವಿರುದ್ಧ ಪುಟ್ಟೇನಹಳ್ಳಿ ಹಾಗೂ ಮಡಿವಾಳ ಪೊಲೀಸ್ ಠಾಣೆಯಲ್ಲೂ ಮೊಬೈಲ್ ಕಳವು ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ವೆಬ್‌ಸೈಟ್ ವಿಳಾಸ ಬದಲಾವಣೆ

**ಬೆಂಗಳೂರು:** ನಗರ ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ನ ವಿಳಾಸ ಮಾರ್ಪಾಡು ಮಾಡಲಾಗಿದೆ.

ಇಲಾಖೆಯ ಖಾತೆಗಳನ್ನು ಹ್ಯಾಕ್ ಮಾಡುತ್ತಿದ್ದರು. ಆದ್ದರಿಂದ ವಿಳಾಸದಲ್ಲಿ ಮಾರ್ಪಾಡು ಮಾಡಲಾಗಿದೆ. ಈಗ www.bcp.karnataka.gov.in ಎಂದು ಬದಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

**ನಿಧನ ವಾರ್ತೆ**

### ಮಂಗಳಾ ರಾಮಚಂದ್ರ



**ಬೆಂಗಳೂರು:** ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ (ಎಂಎಲ್‌ಎ) ಅಧ್ಯಕ್ಷರಾಗಿದ್ದ ಮಂಗಳಾ ರಾಮಚಂದ್ರ (91) ಅವರು ಮಲ್ಲೇಶ್ವರದ 11ನೇ ಅಡ್ಡರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಸೋಮವಾರ ನಿಧನರಾದರು. ಅವರಿಗೆ ಮೂವರು ಮಕ್ಕಳಿದ್ದಾರೆ. ಮಂಗಳಾ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು.

ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಮಂಗಳಾ ಅವರ ನಿಧನಕ್ಕೆ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಸಂತಾಪ ವ್ಯಕ್ತಪಡಿಸಿದ್ದಾರೆ. ಅವರು ಮೃತರ ಅಂತಿಮ ದರ್ಶನ ಪಡೆದರು.

'ಮಂಗಳಾ ಅವರು ಸಾಮಾಜಿಕ ಬದ್ಧತೆ ಮತ್ತು ಸಕಾರಾತ್ಮಕ ಪರಿವರ್ತನೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅವರಿಗೆ ಅಪಾರ ಕಳಕಳಿಯಿತ್ತು. ಮಲ್ಲೇಶ್ವರಂನಲ್ಲಿ ಎಂಎಲ್‌ಎ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಮೂಲಕ ಅವರು ಬಡಾವಣೆಯಲ್ಲಿ ತಿಲಕಪ್ರಾಯ ಸಾಧನೆ ಮಾಡಿದ್ದರು. ಅವರ ನಿಧನದಿಂದ ಸಮಾಜಮುಖಿ ವ್ಯಕ್ತಿ ಒಬ್ಬರನ್ನು ಕಳೆದುಕೊಂಡಂತಾಗಿದೆ' ಎಂದು ಸಚಿವರು ಹೇಳಿದ್ದಾರೆ.

ಮಲ್ಲೇಶ್ವರದ ಸಾಯಿ ಮಂಡಲಿ ಅಧ್ಯಕ್ಷರಾಗಿಯೂ ಮಂಗಳಾ ಕಾರ್ಯ ನಿರ್ವಹಿಸಿದ್ದರು.

### ಡಾ.ಸುನಿಲ್ ಕುಮಾರ್ ಮಾನ್ವಿ



**ಬೆಂಗಳೂರು:** ಕ್ಯಾನ್ಸರ್‌ನಿಂದ ಬಳಲುತ್ತಿದ್ದ ರೇವಾ ವಿಶ್ವವಿದ್ಯಾಲದ ಕಂಪ್ಯೂಟರ್ ಸೈನ್ಸ್ ಹಾಗೂ ಎಂಜಿನಿಯರಿಂಗ್ ವಿಭಾಗದ ಡೀನ್ ಡಾ. ಸುನಿಲ್ ಕುಮಾರ್ ಮಾನ್ವಿ (56) ಅವರು ಭಾನುವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ವಿವಿಯ ವಸತಿನಿಲಯದಲ್ಲಿ ಅವರು ನೆಲೆಸಿದ್ದರು. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಸೋಮವಾರ ಅಂತಿಮ ದರ್ಶನ ಪಡೆದರು.

ಮೃತದೇಹವನ್ನು ದಯಾನಂದ ಸಾಗರ್ ವೈದ್ಯಕೀಯ ಕಾಲೇಜಿಗೆ ನೀಡಲಾಯಿತು ಎಂದು ಕಾಲೇಜಿನ ಮೂಲಗಳು ತಿಳಿಸಿವೆ.

### ಜುಮನಾಳ-ಮುಳವಾಡ ಮಾರ್ಗದಲ್ಲಿ ಘಟನೆ • ದೂರದ ರೈಲುಗಳಿಗೆ ಆಗದ ಧಕ್ಕೆ

# ಹಳಿ ತಪ್ಪಿದ ಗೂಡ್ಸ್ ವ್ಯಾಗನ್; ಸಂಚಾರಕ್ಕೆ ಅಡಚಣೆ

ಪ್ರಜಾವಾಣಿ ವಾರ್ತೆ

**ವಿಜಯಪುರ:** ಗದಗ-ಹೊಟಗಿ ಮಾರ್ಗದ ಜುಮನಾಳ - ಮುಳವಾಡ ವಿಭಾಗದಲ್ಲಿ ಕಲ್ಲಿದ್ದಲು ತುಂಬಿದ ಗೂಡ್ಸ್ ರೈಲಿನ 7 ವ್ಯಾಗನ್‌ಗಳು ಸೋಮವಾರ ಬೆಳಿಗ್ಗೆ 7ಕ್ಕೆ ಹಳಿತಪ್ಪಿದ್ದು, ಯಾವುದೇ ಅನಾಹುತವಾಗಿಲ್ಲ.

ಗೂಡ್ಸ್ ಹಳಿ ತಪ್ಪಿದ ಕಾರಣ ಈ ಮಾರ್ಗದಲ್ಲಿ ಸಂಚರಿಸುವ ಆರು ಪ್ಯಾಸೆಂಜರ್ ರೈಲುಗಳ ಸಂಚಾರವನ್ನು ತಾತ್ಕಾಲಿವಾಗಿ ರದ್ದು ಪಡಿಸಲಾಯಿತು.

ಹುಬ್ಬಳ್ಳಿ -ವಿಜಯಪುರ -ಹುಬ್ಬಳ್ಳಿ(06919/20), ಹುಬ್ಬಳ್ಳಿ -ಸೋಲಾಪುರ ಪ್ಯಾಸೆಂಜರ್(07332), ಸೋಲಾಪುರ - ಧಾರವಾಡ ಪ್ಯಾಸೆಂಜರ್ (07321), ಸೋಲಾಪುರ - ಗದಗ ಎಕ್ಸ್‌ಪ್ರೆಸ್(11305), ಗದಗ -ಸೋಲಾಪುರ ಎಕ್ಸ್‌ಪ್ರೆಸ್(11306), ವಿಜಯಪುರ -ಎಸ್‌ಎಸ್‌ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್(07330) ರೈಲುಗಳ ಸಂಚಾರವನ್ನು ಸೋಮವಾರ ರದ್ದುಪಡಿಸಲಾಯಿತು.

ವಿಜಯಪುರ - ಮಂಗಳೂರು ಎಕ್ಸ್‌ಪ್ರೆಸ್(07377) ರೈಲನ್ನು ವಿಜಯಪುರ-ಹುಬ್ಬಳ್ಳಿ ನಡುವೆ ಭಾಗಶಃ ರದ್ದುಗೊಳಿಸಲಾಗಿದೆ.

ಹುಬ್ಬಳ್ಳಿ ಮತ್ತು ಸೋಲಾಪುರದಿಂದ ಕ್ರೇನ್‌ಗಳನ್ನು ತರಿಸಿ, ಹಳಿತಪ್ಪಿದ ವ್ಯಾಗನ್‌ಗಳನ್ನು ಮರು ಹಳಿಗೆ ಜೋಡಿಸುವ ಕಾರ್ಯ ದಿನಪೂರ್ತಿ ನಡೆಯಿತು. ಮಂಗಳವಾರದಿಂದ ಯಥಾ ರೀತಿ ಈ ಮಾರ್ಗದಲ್ಲಿ ಸಂಚಾರ ಪುನರಾರಂಭವಾಗಿಲಿದೆ ಎಂದು ಹುಬ್ಬಳ್ಳಿ ನೈರುತ್ಯ ರೈಲ್ವೆಯ ಸಾರ್ವಜನಿಕ ಸಂಪರ್ಕಾಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಮಾರ್ಗದಲ್ಲಿ ಡಬಲ್ ಲೈನ್ ಇರುವುದರಿಂದ ದೂರದ ನಗರ, ಪಟ್ಟಣಗಳಿಗೆ ತೆರಳುವ ಪ್ರಯಾಣಿಕರಿಗೆ ತೊಂದರೆಯಾಗದಂತೆ ಸೋಲಾಪುರ ಕಡೆಗೆ ತಾತ್ಕಾಲಿಕ ಏಕ ಮಾರ್ಗದಲ್ಲಿ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು.


ವಿಜಯಪುರ ಜಿಲ್ಲೆಯ ಜುಮನಾಳ–ಮುಳವಾಡ ಮಾರ್ಗದಲ್ಲಿ ಸೋಮವಾರ ಹಳಿತಪ್ಪಿರುವ ಗೂಡ್ಸ್ ರೈಲಿನ ವ್ಯಾಗನ್‌ಗಳು



# ಜಗಳದಲ್ಲಿ ಮೌನದ ಮಾತು

ಜಗಳದಲ್ಲಿ ಮೌನವಾಗಿರುವುದೆಂದರೆ ಅದು ಮೌನವಾಗಿದ್ದುಕೊಂಡು ಎದುರಿನವರನ್ನು ನಿರ್ಲಕ್ಷಿಸುವುದರ ಮೂಲಕ ಅವರಿಗೆ 'ಪಾಠ ಕಲಿಸುವ' ಕ್ರಮವಲ್ಲ. ಜಗಳದಲ್ಲಿ ಕಪಟತನವಿಲ್ಲದ ಮೌನವನ್ನು ಹೊಂದುವುದೆಂದರೆ ಅದು ಎದುರಿನವರಿಗೆ ಗೌರವವನ್ನೂ ಸಹಾನುಭೂತಿಯನ್ನೂ ತೋರಿಸಿದಂತೆ.

**ರಮ್ಯಾ ಶ್ರೀಹರಿ**


ನಮ್ಮೆಲ್ಲಾ ಜಗಳಗಳು, ಮನಸ್ತಾಪ, ವಾದ-ವಿವಾದಗಳು ಹೇಗೆ ಹುಟ್ಟುತ್ತವೆ, ಹೇಗೆ ಬೆಳೆಯುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಜಗಳಗಳನ್ನು ಕೊನೆಗಾಣಿಸುವ ಬಗೆಯೂ ಸುಲಭವಾಗಿ ಗೋಚರಿಸುತ್ತದೆ. ಜಗಳ ಎಂಬುದು ಕೇವಲ ಮಾತಿನ ಚಕಮಕಿ ಅಷ್ಟೇನಾ? ಜಗಳ ಎನ್ನುವುದು ಬರೀ ಮಾತಿನಿಂದಲೇ ಹುಟ್ಟಿ, ಮಾತಿನಿಂದಲೇ ಬೆಳೆಯುವುದೇ? ಮಾತಿನ ಮೂಲಕವೇ ಎಲ್ಲ ಜಗಳಗಳನ್ನು ಬಗೆಹರಿಸಬಹುದೇ? ಮಾತು ಬಲ್ಲವನಿಗೆ ಜಗಳವಿಲ್ಲ ಎನ್ನುತ್ತಾರೆ. ಎಂದರೆ ಯಾವಾಗಲೂ ಉಪಾಯವಾಗಿ ಜಗಳಗಳನ್ನು ನಿವಾರಿಸುವುದು ಸಾಧ್ಯವಿದೆಯೇ? ಹಾಗೆ 'ಮಾತು ಬಲ್ಲವರು' ಎಂದೂ ಜಗಳವನ್ನೇ ಆಡುವುದಿಲ್ಲವೇ?

ನಾವೆಷ್ಟೇ ಒಳ್ಳೆಯ ಮಾತುಗಳನ್ನಾಡಿದರೂ ಕ್ರಿಯೆಯ ಮೂಲಕ ಅದನ್ನು ಅಭಿವ್ಯಕ್ತಿಸುವುದರಲ್ಲಿ ಸೋತಾಗ ಮಾತು ಅರ್ಥಹೀನವಾಗುತ್ತದೆ. ಹಾಗೆಯೇ ನಮಗೆ ಯಾರಲ್ಲಿ ನಂಬಿಕೆ, ಪ್ರೀತಿ ಇಲ್ಲವೋ ಅವರ ಎಲ್ಲಾ ಮಾತುಗಳಲ್ಲೂ ನಮಗೇನೋ ಕೊಂಕು ಕಾಣಿಸುತ್ತದೆ. ಯಾರ ಅಂತರಂಗವನ್ನು ನಾವು ಬಲ್ಲೆವೋ, ಎಲ್ಲಿ ವಿಶ್ವಾಸವಿದೆಯೋ ಅಂತಹವರು ಆಡುವ ಕಹಿಯಾದ ಮಾತೂ ನಮ್ಮನ್ನೇನೂ ಅಷ್ಟು ಬಾಧಿಸುವುದಿಲ್ಲ. ಒಟ್ಟಿನಲ್ಲಿ ಜಗಳ ಎನ್ನುವುದು ಮಾತಿನ ಮೂಲಕ ತೋರ್ಪಡಿಸಿಕೊಳ್ಳುತ್ತದೆಯಾದರೂ, ಅದಕ್ಕೆ ಮನಸ್ಸು ಮತ್ತು ಕ್ರಿಯೆಗಳ ಜೊತೆ ನೆಂಟಸ್ತಿಕೆಯಿದೆ. ಹಾಗಾಗಿಯೇ ಜಗಳಗಳನ್ನು ಉಪಶಮನಗೊಳಿಸುವಲ್ಲಿ ಮಾತಿಗಿಂತ ಪ್ರಭಾವಶಾಲಿಯಾದ್ದು ಇನ್ನೇನೋ ಇದೆ ಎಂಬುದು ಅರಿವಾದಾಗ ನಾವು ಮೌನಕ್ಕೆ ಶರಣಾಗುತ್ತೇವೆ. ಜಾಣತನದಿಂದ ಮಾತನ್ನು ಪೋಣಿಸುವುದು ಬಿಟ್ಟು ನಿಷ್ಕಲ್ಮಶ ಭಾವನೆಗಳನ್ನು ಹೊಂದುವುದರ ಕಡೆಗೆ, ಎಲ್ಲರಿಗೂ ಹಿತವಾದಂತಹ ಕ್ರಿಯೆಗಳ ಕಡೆಗೆ ಗಮನ ಹರಿಸುತ್ತೇವೆ. ಆಗಷ್ಟೇ ಜಗಳಗಳು ನಿಜವಾಗಿಯೂ ಮುಗಿದು ಶಾಂತಿ ನೆಲೆಸುತ್ತದೆ. ಅದಲ್ಲದೆ ಕೇವಲ ಮಾತಿನ ಜಾಣ್ಮೆಯಿಂದ ಇನ್ನೊಬ್ಬರ ಬಾಯಿ ಮುಚ್ಚಿಸಬಹುದು ಹೊರತು, ಅದರಿಂದ ಯಾರ ಹೃದಯವನ್ನೂ ಅರಳಿಸಲಾಗುವುದಿಲ್ಲ.

ಜಗಳದಲ್ಲಿ ಆಡುವ ಮಾತಿಗಿಂತ ಮುಖಚರ್ಯೆ, ಧ್ವನಿಯ ಏರಿಳಿತಗಳು, ಕಣ್ಣ ಸನ್ನೆಯೇ ಹೆಚ್ಚು ಹೇಳುತ್ತವೆ.

ಜಗಳದಲ್ಲಿ ಮೌನವಾಗಿರುವುದೆಂದರೆ ಅದು ಮೌನವಾಗಿದ್ದುಕೊಂಡು ಎದುರಿನವರನ್ನು ನಿರ್ಲಕ್ಷಿಸುವುದರ ಮೂಲಕ ಅವರಿಗೆ 'ಪಾಠ ಕಲಿಸುವ' ಕ್ರಮವಲ್ಲ. ಆ ಬಗೆಯ ಮೌನ ಅಥವಾ silent treatment ಸಂವಹನವನ್ನೇ ತಿರಸ್ಕರಿಸುವುದರ ಮೂಲಕ ಜಗಳಕ್ಕಲ್ಲ, ಬಾಂಧವ್ಯಕ್ಕೇ ಅಂತ್ಯ ಹಾಡುತ್ತದೆ. ಅಲ್ಲಿ ಸಿಟ್ಟು, ಪ್ರತಿರೋಧ, ಸೇಡು ಇರುತ್ತದೆ. ನಾವೀಗ ಅಂತಹ ಮೌನದ ಬಗ್ಗೆಯಲ್ಲ ಮಾತನಾಡುತ್ತಿರುವುದು.

ಜಗಳದಲ್ಲಿ ಕಪಟತನವಿಲ್ಲದ ಮೌನವನ್ನು ಹೊಂದುವುದೆಂದರೆ ಅದು ಎದುರಿನವರಿಗೆ ಗೌರವವನ್ನೂ ಸಹಾನುಭೂತಿಯನ್ನೂ ತೋರಿಸಿದಂತೆ. ಅದು ನಮಗೆ



ನಾವೇ ತೋರಿಸಿಕೊಳ್ಳುವ ಕಾಳಜಿಯೂ ಹೌದು. ಜಗಳದಲ್ಲಿ ಮಾತಿಗೆ ಮಾತು ಸೇರಿಸಿ ಆಯಾಸಗೊಂಡಿರುವ ಎರಡು ಮನಸ್ಸುಗಳಿಗೆ, ದೇಹಗಳಿಗೆ ವಿಶ್ರಾಂತಿಯನ್ನು ನೀಡುವ ಬಗೆಯೂ ಹೌದು. ಇಂತಹ ಮೌನವು ಕರುಣೆಯ ಅಭಿವ್ಯಕ್ತಿಯಾಗಿರುತ್ತದೆ. ಅದು ನಮ್ಮನ್ನೂ ಇತರರನ್ನೂ ಅರಿತುಕೊಳ್ಳಲು ಬೇಕಾದ ಸಮಯವನ್ನೂ ಅವಕಾಶವನ್ನೂ ನೀಡುತ್ತದೆ. ಎರಡೂ ಕಡೆಯವರ ಆತ್ಮಾವಲೋಕನಕ್ಕೆ ದಾರಿ ಮಾಡಿಕೊಡುತ್ತದೆ. ಪರಸ್ಪರರ ನಂಬುಗೆಗಳಿಗೆ, ದೃಷ್ಟಿಕೋನಗಳಿಗೆ, ಅವಶ್ಯಕತೆಗಳಿಗೆ ಮತ್ತೊಬ್ಬರು ಸ್ಪಂದಿಸುವಂತಹ ಸ್ನೇಹಮಯ ವಾತಾವರಣವನ್ನು ನಿರ್ಮಿಸುತ್ತದೆ.

ಜಗಳದಲ್ಲಿ ಎದುರಿನವರು ಆಡಿದ ಮಾತಿಗೆ ಪ್ರತಿಕ್ರಿಯೆ ನೀಡದಿರುವುದು ನಿಜವಾಗಲೂ ತುಂಬಾ ಕಷ್ಟದ ಕೆಲಸ. ಅದಕ್ಕೆ ಸಂಯಮವೂ ಅಭ್ಯಾಸವೂ ಬೇಕು. ಆಡಿದ ಮಾತಿಗೆ ಪ್ರತಿಕ್ರಿಯೆ ನೀಡುವುದರ ಹಿಂದೆ 'ನಿನಗೆ ಹೇಗೆ ಉತ್ತರಿಸಬೇಕೆಂಬುದು ನನಗೆ ಗೊತ್ತು' ಎನ್ನುವ ಧೋರಣೆಯಿರುತ್ತದೆ. ಆದರೆ ನಾವು ಈ ಸಮಯದಲ್ಲಿ ಒಂದು ವಿಷಯವನ್ನು ಮರೆಯುತ್ತೇವೆ. ಎಲ್ಲರಿಗೂ ಅವರವರ ಪ್ರಪಂಚದಿಂದ ಹೊರಬಂದು ಬೇರೆಯವರು ಏನು ಹೇಳುತ್ತಿದ್ದಾರೆ, ಏನು ಕೇಳುತ್ತಿದ್ದಾರೆ ಎಂದು ತಿಳಿಯಲು ಸಾಕಷ್ಟು ಸಮಯ, ತಾಳ್ಮೆ ಮತ್ತು ಆತ್ಮಾವಲೋಕನವೂ ಬೇಕು. ಜಗಳದಲ್ಲಿ ಯಾರೂ ಯಾರ ಉತ್ತರವನ್ನೂ ಸಾವಧಾನದಿಂದ ಕೇಳಿಸಿಕೊಂಡು ಅವರ ಬುದ್ಧಿವಂತಿಕೆಯನ್ನು ಮೆಚ್ಚಿಕೊಳ್ಳುವುದಿಲ್ಲ. ಏಕೆಂದರೆ ಜಗಳವೆಂದರೆ ಅದು 'ವಸ್ತುನಿಷ್ಠ ವಿಷಯ ಪ್ರಸ್ತುತಿ'ಯಲ್ಲ. ಜಗಳದಲ್ಲಿ ತರ್ಕಬದ್ಧವಾಗಿ ಮಾತನಾಡುವ ಇಬ್ಬರು ವ್ಯಕ್ತಿಗಳಿರುವುದಿಲ್ಲ; ಬದಲಾಗಿ ಪೆಟ್ಟು ತಿಂದು ಘಾಸಿಗೊಂಡು, ಸ್ವಲ್ಪ ಸಹಾನುಭೂತಿಗಾಗಿ, ಮಾನಸಿಕ ಬೆಂಬಲಕ್ಕಾಗಿ ಹಪಹಪಿಸುವ, ಭಯದಿಂದ, ಅಭದ್ರತೆಯಿಂದ ಕಂಪಿಸುವ ಎರಡು ಜೀವಿಗಳಿರುತ್ತವೆ. ಇಲ್ಲಿ ಆಡುವ ಮಾತಿಗಿಂತ ಮುಖಚರ್ಯೆ, ದೇಹಭಾಷೆ, ಧ್ವನಿಯ ಏರಿಳಿತಗಳು, ಕಣ್ಣ ಸನ್ನೆಯೇ ಹೆಚ್ಚು ಹೇಳುತ್ತವೆ. ಪರಿಸ್ಥಿತಿ ಹೀಗಿರುವಾಗ ಮಾತಿನಿಂದ ಪ್ರಯೋಜನವೇನು? ಇಲ್ಲಿ ಮೌನವೇ ಬಲಶಾಲಿ, ಮೌನವೇ ಔಷಧಿ.

ಮೌನಕ್ಕೆ ಶರಣಾಗುವುದೆಂದರೆ ಸಂವಹನದ ಪ್ರಾಮುಖ್ಯವನ್ನು ಶಂಕಿಸುವುದಲ್ಲ. ಬದಲಾಗಿ ಸಂವಹನಕ್ಕೂ ಮೌನದ ಶಾಂತಿಯನ್ನು ತಂದುಕೊಡುವುದು ಎಂದರ್ಥ. ಯಾವುದನ್ನು ಹೇಗೆ ಹೇಳಬೇಕೋ ಹಾಗೆ ಹೇಳಲು ಬೇಕಾದ ಮಾನಸಿಕ ಸಿದ್ಧತೆ ನಮಗೆ ಮೌನದಿಂದ ದೊರೆಯುತ್ತದೆ. ಜಗಳವಾಡುವ ಮನಃಸ್ಥಿತಿಯಲ್ಲಿದ್ದಾಗ ನಮ್ಮ ಮನಸ್ಸಿನ ಮಾತುಗಳನ್ನು ಸ್ಪಷ್ಟವಾಗಿ, ಸಮಂಜಸವಾಗಿ ಪ್ರಸ್ತುತಪಡಿಸುವುದು ಸಾಧ್ಯವಾಗುವುದಿಲ್ಲ. ಏನೋ ಹೇಳಲು ಹೋಗಿ ಇನ್ನೇನೋ ಅರ್ಥ ಬರುವಂತೆ ಮಾತನಾಡುವುದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಅದರ ಬದಲು ನಾವು ಸಮಾಧಾನದಿಂದ ಇರುವಾಗ 'ನಾನು ನಿಜವಾಗಿಯೂ ಹೇಳಬೇಕೆಂದಿರುವುದೇನು', 'ನನ್ನ ಮಾತುಗಳು ನನ್ನ ಅನುಭವಕ್ಕೆ ನಿಷ್ಠವಾಗಿ ನನ್ನ ಭಾವನೆಗಳನ್ನು ಸರಿಯಾಗಿ ಅಭಿವ್ಯಕ್ತಿಸುತ್ತಿದೆಯೇ' ಎಂದು ಆಲೋಚಿಸಿ ನಾವು ಹೇಳಬೇಕಾಗಿರುವುದನ್ನು ಮೆಲುದನಿಯಲ್ಲಿ ಧೈರ್ಯವಾಗಿ ಹೇಳಬಹುದು. ಜಗಳದ ಸಮಯದಲ್ಲಿ ರೋಷಾವೇಶದ ಅಬ್ಬರದಲ್ಲಿ ಸರಿಯಾದ ಮಾತುಗಳನ್ನಾಡುವುದೂ, ಕೇಳಿಸಿಕೊಂಡು ಅಪಾರ್ಥಮಾಡಿಕೊಳ್ಳದೆ ಸರಿಯಾಗಿ ಗ್ರಹಿಸುವುದೂ ಸಾಧ್ಯವಿಲ್ಲ. ಹಾಗಾಗಿ ಜಗಳದಲ್ಲಿ ಸುಮ್ಮನಿದ್ದು ನಂತರ ಎಲ್ಲ ತಿಳಿಯಾದ ಮೇಲೆ ನಮ್ಮ ನಿಲುವನ್ನು ದಿಟ್ಟತನದಿಂದ ತಿಳಿಸಿಕೊಡಬಹುದು.

ಕೆಲವೊಮ್ಮೆ ಯಾವುದೋ ಮಾತು ಗುರಿ ತಪ್ಪಿ ಯಾರನ್ನೋ ಘಾಸಿಗೊಳಿಸಿರುತ್ತದೆ. ಅಂತಹ ಸಮಯದಲ್ಲಿ ನ್ಯಾಯತೀರ್ಮಾನ ಮಾಡುತ್ತಾ ಕಾಲಹರಣ ಮಾಡಿ ಪ್ರಯೋಜನವಿಲ್ಲ. ಕೆಲವು ಮಾತುಗಳು ವಿನಾ ಕಾರಣ ಪ್ರಚೋದಿಸುವಂತಿರುತ್ತದೆ. ಮನೆಯಲ್ಲಾಗಲಿ, ಕಚೇರಿಯಲ್ಲಾಗಲಿ, ಸ್ನೇಹಿತರ, ಸಂಬಂಧಿಕರ ವಲಯದಲ್ಲಿ ಆಗಲಿ ಇಂತಹ ಅನೇಕ ಮಾತುಗಳು ಬಂದು ಹೋಗುತ್ತಲಿರುತ್ತವೆ. ಅವುಗಳನ್ನೆಲ್ಲಾ ವೈಯಕ್ತಿಕವಾಗಿ ತೆಗೆದುಕೊಂಡು ಪ್ರತಿಕ್ರಿಯಿಸಿ ನಮಗೂ ನೋವು ಕೊಟ್ಟುಕೊಂಡು, ಇತರರಿಗೂ ನೋವು ಕೊಡುವುದರ ಅವಶ್ಯಕತೆಯಿಲ್ಲ. ನಮ್ಮನ್ನು ಎಲ್ಲರೂ ಒಪ್ಪಬೇಕು, ಮೆಚ್ಚಬೇಕು ಎನ್ನುವ ಹಠ ಬಿಟ್ಟುಬಿಟ್ಟರೆ ಎಲ್ಲಿ ಉತ್ತರ ಕೊಡಬೇಕು, ಎಲ್ಲಿ ಮೌನವಾಗಿರಬೇಕು ಎಂದು ಗೊತ್ತಾಗುತ್ತದೆ. ನಮ್ಮ ನೆಮ್ಮದಿಗಾಗಿ ಕೆಲವು ಅರ್ಥಹೀನ ಮಾತುಗಳನ್ನು ನಿರ್ಲಕ್ಷಿಸುವುದನ್ನು ಕಲಿಯಬೇಕು.

ಎಲ್ಲ ಭಿನ್ನಾಭಿಪ್ರಾಯಗಳೂ ಜಗಳದಲ್ಲೇ ಪರ್ಯವಸಾನಗೊಳ್ಳಬೇಕೆಂಬುದಿಲ್ಲ. ಮುಕ್ತವಾಗಿ ಮಾತಾಡಿ ನಾವೆಲ್ಲಿ ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದೇವೆ ಎಂಬುದನ್ನು ರಾಗ-ದ್ವೇಷಗಳಿಲ್ಲದೆ ಒಪ್ಪಿಕೊಳ್ಳುವಷ್ಟು ಪ್ರೌಢತೆ ಇದ್ದರೆ ಮಾತಿನಷ್ಟು ಜನರನ್ನು ಬೆಸೆಯುವ ಮತ್ತೊಂದು ಸಾಧನವಿಲ್ಲ. ಅಷ್ಟು ಪ್ರೌಢತೆಯನ್ನು ಸಾಧಿಸುವ ದಾರಿಯಲ್ಲಿ ಆಗಾಗ ಜಗಳದಲ್ಲಿ ಮೌನಯೋಗವನ್ನು ಅಭ್ಯಾಸ ಮಾಡುತ್ತಲಿರೋಣ. ❖



# ಆಯುರ್ವೇದದ ಅರಿವು

**ಡಾ. ಸತ್ಯನಾರಾಯಣ ಭಟ್ ಪಿ.**

**ಕೊರೊನಾಯುಗದಂತಹ** ಕಠಿಣ ಕಾಲ ಹಿಂದೆಯೂ ಬಂದಿತ್ತು. 'ವಿಘ್ನ ಭೂತಾಃ ಯದಾ ರೋಗಾಃ ಪ್ರಾದುರ್ಭೂತಾ ಶರೀರಿಣಾಂ' - ಎಂದರೆ ದಿನದಿನದ ಕಾಯಕ ನಡೆಸಲು ಜನರ ಪರದಾಟದ ಪರಿಸ್ಥಿತಿ. ಅದನ್ನು ಹೋಗಲಾಡಿಸಲು ಹಿಮವತ್ ಪರ್ವತದ ತಪ್ಪಲಿನಲ್ಲಿ ಋಷಿಗಣ ಸಭೆ ಸೇರಿತ್ತಂತೆ. ಕೊನೆಗೆ ಆತ್ರೇಯ ಭರದ್ವಾಜ ಋಷಿಗಳು ನೇತೃತ್ವ ವಹಿಸಿದರಂತೆ. ಐವತ್ತನಾಲ್ಕು ಮಂದಿ ಸೇರಿದ್ದ ಮುನಿಗಣದ ತಂಡ ಇಂದ್ರನನ್ನು ಸಂಧಿಸಿತ್ತಂತೆ. ಬ್ರಹ್ಮದೇವರು ಆಯುರ್ವೇದವನ್ನು ಸ್ಮರಿಸಿದರಂತೆ. ಅವರು ಅದನ್ನು ಪ್ರಜಾಪತಿಗೆ ಬೋಧಿಸಿದರಂತೆ. ಅವರಿಂದ ಈ ವಿದ್ಯೆಯು ವೇದಯುಗದ ಅವಳಿ ವೈದ್ಯರೆನಿಸಿದ್ದ ಅಶ್ವಿನೀ ದೇವತೆಗಳಿಗೆ ಲಭಿಸಿದ್ದಂತೆ. ಅನಂತರ ಸಹಸ್ರಾಕ್ಷನೆನಿಸಿದ ಇಂದ್ರನಿಗೆ ದಕ್ಕಿತು. ಇಂದ್ರನಿಂದ ಆತ್ರೇಯ ಭರದ್ವಾಜರಿಗೆ ವೈದ್ಯವಿದ್ಯೆ ಲಭಿಸಿದ ಕಥೆ ಚರಕಸಂಹಿತೆಯ ಮೊದಲ ಅಧ್ಯಾಯದಲ್ಲಿದೆ. ಹೀಗೆ ಕನಿಷ್ಠ ಐದು ಸಾವಿರ ವರ್ಷದ ಮೌಖಿಕ ಜ್ಞಾನಪರಂಪರೆ ಸ್ಮೃತಿ ಮತ್ತು ಶ್ರುತಿಯ ರೂಪವಾಗಿತ್ತು. ಅದು ಸಂಹಿತೆಯಾದುದು ಚರಕಮಹರ್ಷಿಯ ಕಾಲದಲ್ಲಿ. ಗುಪ್ತಯುಗದ ಸಂಕಲಿತ ಕೃತಿ 'ಚರಕ ಸಂಹಿತೆ' ಎಂಬ ಇತಿಹಾಸಕಾರರ ಅಭಿಪ್ರಾಯವಿದೆ.



ಮೊನ್ನೆಯಷ್ಟೆ ನಾವು ಆಯುರ್ವೇದ ದಿನವನ್ನು ಆಚರಿಸಿದ್ದೇವೆ. ನಮ್ಮ ಸಂಸ್ಕೃತಿಯ ಭಾಗವೇ ಆಗಿರುವ ಆಯುರ್ವೇದ ಚಿಕಿತ್ಸಾ ಪದ್ಧತಿ ಇಂದು ಪ್ರಪಂಚದ ಹಲವು ಕಡೆ ಹರಡುತ್ತಿದೆ

## ಅಷ್ಟಾಂಗಗಳು

ಇಂದು ಸೂಪರ್ ಸ್ಪೆಷಾಲಿಟಿ ಯುಗ. ಅಂತಹುದೇ ಸ್ಪೆಷಾಲಿಟಿ ಆಯುರ್ವೇದದಲ್ಲಿ ಹಿಂದೆ ಇತ್ತು. ಕಾಯಚಿಕಿತ್ಸೆ ಎಂಬುದು ಇಂಟರ್ನಲ್ ಮೆಡಿಸಿನ್. ಚರಕಸಂಹಿತೆಯೇ ಈ ವಿಭಾಗದ ಆಧಾರ ಗ್ರಂಥ. ಬಾಲತಂತ್ರ ಎಂಬುದು ಹಿಂದಿನ ಪೀಡಿಯಾಟ್ರಿಕ್ಸ್. ಕಾಶ್ಯಪ ಎಂಬ ಮುನಿ ಬರೆದ ಸಂಹಿತೆಯಿಂದ ಐದು ಸಾವಿರ ವರ್ಷ ಪೂರ್ವದ ಶಿಶು ಪೋಷಣೆ, ಶೈಶವದ ಕಾಯಿಲೆಗಳು ಮತ್ತು ಚಿಕಿತ್ಸೆ ವಿಧಾನ ನಮಗೆ ಅರಿವಿಗೆ ಬರುತ್ತದೆ. ಗ್ರಹಚಿಕಿತ್ಸೆ ಎಂಬುದು ಮಾನಸ ರೋಗವಿಜ್ಞಾನ ಅಥವಾ ಅಂದಿನ ಸೈಕಿಯಾಟ್ರಿ. ಊರ್ಧ್ವಾಂಗ ಚಿಕಿತ್ಸೆ ಎಂಬುದು ಇಂದಿನ ಇ.ಎನ್.ಟಿ. ಅಥವಾ ಕಿವಿ, ಮೂಗು, ಗಂಟಲ ಕಾಯಿಲೆಗಳ ಅರಿವಿನ ವಿಶೇಷ ವಿಭಾಗ. ನೇತ್ರಚಿಕಿತ್ಸೆಯ ಪರಿಣತಿ ಅಗಾಧ ರೂಪದ್ದು. ಅದು ಸಹ ಇದೇ ವಿಭಾಗದಡಿ ವರ್ಣಿತ. ಶಲ್ಯಚಿಕಿತ್ಸೆಯು ಅಂದಿನ ಸರ್ಜಿಕಲ್ ಪರಿಣತಿ. ಸುಶ್ರುತ ಎಂಬ ಶಸ್ತ್ರವೈದ್ಯ ಆ ಯುಗದ ಖ್ಯಾತ ಸರ್ಜನ್. ಇದನ್ನು ಧನ್ವಂತರಿ ಸಂಪ್ರದಾಯ ಎಂದೂ ಕರೆಯುವರು.


ಕಾಶಿಯ ರಾಜ ದಿವೋದಾಸ ಧನ್ವಂತರಿಯೇ ಈ ಶಾಖೆಯ ಮೂಲಪ್ರವರ್ತಕ. ವಿಷ ಮತ್ತು ವಿಷ ಜಂತುಗಳ ಕಡಿತದ ವಿಭಾಗವು ಅಂದಿನ ಟಾಕ್ಸಿಕಾಲಜಿ. ಕೊನೆಯ ಎರಡು ವಿಭಾಗಗಳು ಅಂದು ಮತ್ತು ಇಂದೂ ಸಹ ಹೆಚ್ಚು ಪ್ರಸ್ತುತ.

ಜರಾ ಎಂದರೆ ಮುದಿತನ. ಜೆರಂಟಾಲಜಿ ಎಂದರೆ ಹಿರಿಹರೆಯದ ತೊಂದರೆ ಮತ್ತು ಮುಪ್ಪು ಮುಂದೂಡುವ ವಿಜ್ಞಾನ; ಜರಾ ಚಿಕಿತ್ಸೆ – ಇದನ್ನು ಅಷ್ಟಾಂಗದ ಪ್ರಮುಖ ಅಂಗ ಎಂದು ಭಾವಿಸಲಾಗಿದೆ. ಕೊನೆಯದು ವೃಷಚಿಕಿತ್ಸೆ. ಸ್ತ್ರೀ ಪುರುಷರ ಫಲವತ್ತತೆ ಅಂದಿಗಿಂತ ಇಂದು ಬಲು ದೊಡ್ಡ ಸವಾಲು. ನಿರೋಗಿಯಾದ ಶಿಶುವನ್ನು ಪಡೆಯುವ, ಸುದೀರ್ಘ ಕಾಲ ಲೈಂಗಿಕತೆ ಕಾಪಾಡುವ ವಿಭಾಗವು ಆಯುರ್ವೇದದ ಕೊನೆಯ ಸ್ಪೆಷಾಲಿಟಿ.

ಆಯುರ್ವೇದದ ಮೂಲ ಗುರಿ ಕೇವಲ ಆರೋಗ್ಯ ಸಾಧನೆ ಮಾತ್ರ ಅಲ್ಲ. ಚರಮಗುರಿ ಚತುರ್ವಿಧ ಪುರುಷಾರ್ಥ ಸಾಧನೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಸಾಧನೆಯೇ ಮೂಲ ಉದ್ದೇಶ. ಆಯುಸ್ಸಿನ ವೇದವೇ ಆಯುರ್ವೇದ. ನಮ್ಮ ಸುದೀರ್ಘ ಬದುಕಿನ ಮಜಲುಗಳು ಬಾಲ್ಯ, ಯೌವನ, ಹಿರಿಹರೆಯ ಮತ್ತು ವೃದ್ಧಾಪ್ಯದ್ದು. ಇದು ದೀರ್ಘವಾಗಿದ್ದರೆ ಸಾಲದು. ಸುಖಾಯು ರೂಪದ್ದಾಗಿರಲಿ. ಹಿತಾಯುವಾಗಲಿ ಎಂಬ ಚಿಂತನೆಯೇ ಆಯುರ್ವೇದದ ಚರಮ ಗುರಿ. ಆಗ ಮಾತ್ರ ನಮ್ಮ ಜೀವನದ ಶ್ರೇಯಸ್ಸು ಲಭಿಸೀತು. ನಿಶ್ರೇಯಸ್ಸು, ಎಂದರೆ ಮೋಕ್ಷ ಮಾರ್ಗದ ಹಾದಿ ಸುಗಮ ಎನ್ನುತ್ತದೆ ಚರಕಾದಿ ಮುನಿಗಳ ಕ್ಷೇಮಚಿಂತನೆಯ ಧಾಟಿ. ಪ್ರಪಂಚದ ಯಾವ ವೈದ್ಯಕೀಯ ಶಾಸ್ತ್ರವೂ ಇಂತಹ ಮೇಲ್ಪಂಕ್ತಿ ಹೊಂದಿಲ್ಲ ಎಂಬ ಹೆಮ್ಮೆ ನಮ್ಮದು! ❖

ಚರಕ ಸಂಹಿತೆಯ ಒಂದು ಶ್ಲೋಕದ ಭಾವಾರ್ಥ ಹೀಗಿದೆ: 'ಚಿರಾಯುಗಳಾಗುವ ವಿಧಾನ ಅರಿಯಿರಿ. ನಿತ್ಯವೂ ಹಿತಮಿತದ ಆಹಾರ ಪದ್ಧತಿ ಮತ್ತು ದಿನಚರಿ ನಮ್ಮದಾಗಲಿ. ಹಿತ ಅಹಿತದ ವಿಚಕ್ಷಣೆ ನಮ್ಮ ಜೀವನಶೈಲಿಯಾಗಲಿ. ವಿಷಯಸುಖಗಳತ್ತ ಬೇಡ ನಮ್ಮ ಆಕರ್ಷಣೆ. ದಾನಶೀಲತೆಯೇ ನಮ್ಮ ಬದುಕಾಗಲಿ. ಸತ್ಯಪರತೆಯ ಬದುಕನ್ನು ಬಾಳೋಣ. ಕ್ಷಮಾಗುಣ ಮೈಗೂಡಿಸಿಕೊಳ್ಳೋಣ. ಆಪ್ತೋಪಸೇವೀ ಎಂದರೆ ನಮಗೆ ಹಿತ ಬಯಸುವ ಗುರು, ಹಿರಿಯರನ್ನು ನಾವು ಗೌರವಿಸಿ ಅವರನ್ನು ಉಪಚರಿಸೋಣ. ಇಂತಹ ಜೀವನದಿಂದ ನಿರೋಗತ್ವ ಸಾಧಿಸಲಾದೀತು'.





ಕಣ್ಣಿಗೆ ವಿಪರೀತ ಶ್ರಮವಾಗಿರುವಾಗ, ಅದರೊಂದಿಗೆ ಅಲ್ಪಕಾಲೀನ ನಿದ್ರೆ, ನಿದ್ರಾಹೀನತೆಗಳು ಸೇರಿಬಿಟ್ಟರೆ ಆಗ ಅವು ಮತ್ತಷ್ಟು ಬಳಲಿಕೆಗೆ ಒಳಗಾಗುತ್ತವೆ.

# ನಯನಗಳ ನಾಜೂಕು

**ಎಸ್. ಎನ್. ಓಂಕಾರ್**

**ಆಧುನಿಕ** ಜಗತ್ತಿನಲ್ಲಿ ಕಣ್ಣುಗಳು ಸಾಕಷ್ಟು ಒತ್ತಡಗಳನ್ನು ತಡೆದುಕೊಳ್ಳಬೇಕಾಗಿದೆ. ನಯನಗಳನ್ನು ನಾಜೂಕಾಗಿ ನೋಡಿಕೊಳ್ಳುವುದು ಇಂದಿನ ಅನಿವಾರ್ಯ.

ಅತಿಯಾದ ಇಂಟರ್ನೆಟ್‌ನ ಬಳಕೆ, ಕಂಪ್ಯೂಟರ್/ಲ್ಯಾಪ್‌ಟಾಪ್‌ಗಳ ಉಪಯೋಗ, ಹೆಚ್ಚಾಗಿ ಟೆಲಿವಿಷನನ್ನು ವೀಕ್ಷಿಸುವುದು, ಮೊಬೈಲ್ ಫೋನ್‌ಗಳ ಕಿರುಪರದೆಯನ್ನು ದೃಷ್ಟಿಸುವುದು, ವಿಡಿಯೊ ಗೇಮ್ಸ್‌ಗಳ ಪರಿಣಾಮವಾಗಿ ಕಣ್ಣುಗಳು ನಿತ್ರಾಣವಾಗುತ್ತಿರುವುದು ಅನೇಕರು ದೃಷ್ಟಿದೋಷಗಳಿಗೆ ತುತ್ತಾಗುತ್ತಿರುವುದು ದುರ್ದೈವವೇ ಸರಿ. ಇದರೊಂದಿಗೆ ಅಲ್ಪಕಾಲೀನ ನಿದ್ರೆ, ನಿನಿದ್ರತೆಗಳೂ ಸೇರಿಬಿಟ್ಟರೆ ಕಣ್ಣುಗಳು ಮತ್ತಷ್ಟು ಬಳಲಿಕೆಗೆ ಒಳಗಾಗುತ್ತವೆ. ಕಣ್ಣುಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಳವಡಿಸಿಕೊಳ್ಳಬಹುದಾದ ಕೆಲವು ವಿಧಾನಗಳನ್ನು ಈ ಲೇಖನದಲ್ಲಿ ಕೊಡಲಾಗಿದೆ. ಕಣ್ಣಿಗೆ ಕೆಲವು ಸುಲಭ ಸಾಧ್ಯವಾದ ವ್ಯಾಯಾಮ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಣ್ಣುಗಳಿಗೆ ಸಾಕಷ್ಟು ತ್ರಾಣವನ್ನು ನೀಡಬಹುದು.

ಈ ವ್ಯಾಯಾಮಗಳನ್ನು ಮಾಡುವಾಗ ಗಮನಿಸಬೇಕಾದ ಅಂಶಗಳು:

1. ಕಣ್ಣಿನ ಸ್ನಾಯುಗಳ ಮೇಲೆ ತೀವ್ರ ಒತ್ತಡ ಬರದಂತೆ ಎಚ್ಚರ ವಹಿಸಿ.
2. ತಲೆನೋವು, ತಲೆ ತಿರುಗುವಿಕೆ ಇತ್ಯಾದಿ ಸಮಸ್ಯೆಗಳು ತಲೆದೋರಿದರೆ ಅಭ್ಯಾಸವನ್ನು ನಿಲ್ಲಿಸಿ.
3. ಈ ಚಲನೆಗಳನ್ನು ಉಸಿರಾಟದೊಂದಿಗೆ ಸಮೀಕರಿಸಿ ಮಾಡಬಹುದು.

ಎಚ್ಚರಿಕೆ: ಕಣ್ಣಿನ ತೀವ್ರ ತರವಾದ ಸಮಸ್ಯೆಯಿರುವವರು ವೈದ್ಯರ ಸಲಹೆಯನ್ನು ಪಡೆದು ನುರಿತ ಶಿಕ್ಷಕರ ಬಳಿ ಅಭ್ಯಾಸ ಮಾಡಬೇಕು

## ಕ್ರಮ 1 : ಮುಂದು-ಹಿಂದು ಚಲನೆ

1. ಕುರ್ಚಿಯ ಮೇಲೆ ನೇರವಾಗಿ ಕುಳಿತುಕೊಳ್ಳಿ. ನಿಮ್ಮ ಅಸ್ಥಿ-ಸ್ನಾಯುಗಳ ವ್ಯವಸ್ಥೆಯ ಸಮಗ್ರ ಅರಿವಿರಲಿ.
2. ಬಲಹೆಬ್ಬೆಟ್ಟನ್ನು ನೇರ ಮಾಡಿ; ಮಿಕ್ಕ ನಾಲ್ಕು ಬೆರಳುಗಳನ್ನು ಮಡಿಚಿ; ಬಲಗೈಯನ್ನು ಮುಂದಕ್ಕೆ ಚಾಚಿ. ಹೆಬ್ಬೆಟ್ಟಿನ ತುದಿ ಕಣ್ಣಿನ ನೇರಕ್ಕೆ ಹಿಡಿಯಿರಿ.
3. ಬಲಹೆಬ್ಬೆಟ್ಟನ್ನು ತದೇಕ ಚಿತ್ತದಿಂದ ರೆಪ್ಪೆಗಳನ್ನು ಅಲುಗಾಡಿಸದೇ ದೃಷ್ಟಿಸಿ ನೋಡಿ.
4. ಉಸಿರನ್ನು ತೆಗೆದುಕೊಳ್ಳುತ್ತಾ, ಮೊಣಕೈಯನ್ನು ನಿಧಾನವಾಗಿ ಮಡಿಚಿ ಬಲಹಸ್ತವನ್ನು ಕಣ್ಣಿನ ಹತ್ತಿರಕ್ಕೆ (ಕಣ್ಣಿನಿಂದ ಸುಮಾರು 6 ಇಂಚುಗಳಷ್ಟು ದೂರಕ್ಕೆ) ತನ್ನಿ.
5. ಉಸಿರನ್ನು ಬಿಡುತ್ತಾ, ಮೊಣಕೈಯನ್ನು ನಿಧಾನವಾಗಿ ಚಾಚಿ ಬಲಹಸ್ತವನ್ನು ಕಣ್ಣಿನಿಂದ ದೂರಕ್ಕೆ ಸರಿಸಿ. ಹೆಬ್ಬೆಟ್ಟು ಒಂದೇ ಎತ್ತರದಲ್ಲಿರುವಂತೆ ಚಲಿಸಿ.
6. ಈ ಕ್ರಮವನ್ನು ಸುಮಾರು 10-15 ಬಾರಿ ಪುನರಾವರ್ತಿಸಿ.
7. ಕಣ್ಣುಗಳನ್ನು ಮುಚ್ಚಿ, ಕೈಗಳನ್ನು ವಿರಮಿಸಿ.

## ಕ್ರಮ 2 : ಪಾರ್ಶ್ವಚಲನೆ

1. ಮುಂದಕ್ಕೆ ಹಾಗೂ ಹಿಂದಕ್ಕೆ ಚಲಿಸಿ ವಿರಮಿಸಿದ ನಂತರ ಮೇಲೆ ಹೇಳಿದ ರೀತಿ ಹೆಬ್ಬೆಟ್ಟನ್ನು ಹಿಡಿದು ಪಾರ್ಶ್ವಚಲನೆಗಳನ್ನು ಮಾಡಿ.
2. ಸ್ವಾಭಾವಿಕವಾಗಿ ಅಕ್ಕ-ಪಕ್ಕ ನೋಡಬೇಕಾದರೆ ಕುತ್ತಿಗೆಯು ತಿರುಗುತ್ತದೆ. ಆದರೆ ಈ ಚಲನೆಗಳನ್ನು ಮಾಡುವಾಗ ಕಣ್ಣುಗಳಷ್ಟೇ ಚಲಿಸಬೇಕು. ಕುತ್ತಿಗೆಯ ತಿರುಗುವಿಕೆಯನ್ನು ತಡೆಯಬೇಕು. ಇದಕ್ಕಾಗಿ ಎಡಹಸ್ತದಿಂದ ಗಂಟಲ ಭಾಗವನ್ನು ಮೃದುವಾಗಿ ಹಿಡಿಯಿರಿ. ಸ್ಪರ್ಶ ಸಂವೇದನಾ ಗ್ರಹಿಕೆಯಿಂದ ಕುತ್ತಿಗೆಯು ತಿರುಗದಂತೆ ಗಮನಿಸಿ.
3. ಉಸಿರನ್ನು ಬಿಡುತ್ತಾ ಬಲ ಹಸ್ತವನ್ನು (ಅದೇ ಎತ್ತರದಲ್ಲಿ) ನಿಧಾನವಾಗಿ ಬಲ ಪಾರ್ಶ್ವಕ್ಕೆ ಚಾಚಿ.
4. ಈ ಕ್ರಮವನ್ನು ಸುಮಾರು 10-15 ಬಾರಿ ಪುನರಾವರ್ತಿಸಿ.
5. ನಂತರ ಮತ್ತೊಂದು ಪಾರ್ಶ್ವದಲ್ಲೂ ಪುನರಾವರ್ತಿಸಿ
6. ಕಣ್ಣುಗಳನ್ನು ಮುಚ್ಚಿ, ಕೈಗಳನ್ನು ವಿರಮಿಸಿ.

## ಕ್ರಮ 3: ಕೆಳ-ಮೇಲು ಚಲನೆ

1. ಬಲಹಸ್ತವನ್ನು ಕೆಳಮುಖವಾಗಿ ಇರಿಸಿ ಬೆರಳುಗಳನ್ನು ಒಳಮುಖವಾಗಿ ಮಡಿಚಿ; ಬಲಹೆಬ್ಬೆಟ್ಟನ್ನು ಚಾಚಿ.
2. ಬಲಹೆಬ್ಬೆಟ್ಟನ್ನು ತದೇಕಚಿತ್ತದಿಂದ ರೆಪ್ಪೆಗಳನ್ನು ಅಲುಗಾಡಿಸದೇ ದೃಷ್ಟಿಸಿ.
3. ಎಡಹಸ್ತದಿಂದ ಗಂಟಲ ಭಾಗವನ್ನು ಮೃದುವಾಗಿ ಹಿಡಿಯಿರಿ. ಸ್ಪರ್ಶ ಸಂವೇದನಾ ಗ್ರಹಿಕೆಯಿಂದ ಕುತ್ತಿಗೆಯು ಚಲಿಸದಂತೆ ಗಮನಿಸಿ.
4. ಹೆಬ್ಬೆಟ್ಟಿನ ತುದಿ ಕಾಣುವವರೆಗೂ ಬಲಗೈಯನ್ನು ಮೇಲಕ್ಕೆ ಚಲಿಸಿ.
5. ಉಸಿರನ್ನು ಬಿಡುತ್ತಾ ಬಲಹಸ್ತವನ್ನು ನಿಧಾನವಾಗಿ ಕೆಳಕ್ಕೆ ಇಳಿಸಿ.
6. ಈ ಕ್ರಮವನ್ನು ಸುಮಾರು 10-15 ಬಾರಿ ಪುನರಾವರ್ತಿಸಿ.
7. ಕಣ್ಣುಗಳನ್ನು ಮುಚ್ಚಿ, ಕೈಗಳನ್ನು ವಿರಮಿಸಿ. ❖

ಯು ಟ್ಯೂಬ್ ಚಾನಲ್‌ನಲ್ಲಿ ಎಂಟು ಕಂತುಗಳ ಸಾಕ್ಷ್ಯಚಿತ್ರ

# ರಷ್ಯಾದಲ್ಲಿ ತುಳುನಾಡ ದೈವ ನರ್ತನ

● ವಿಕ್ರಂ ಕಾಂತಿಕೆರೆ

ಮಂಗಳೂರು: ಕರಾವಳಿಯ ಉದ್ದಗಲಕ್ಕೆ ಸಂಚರಿಸುತ್ತ ಭೂತಾರಾಧನೆಯ ಬಗ್ಗೆ ಮಾಹಿತಿ ದಾಖಲಿಸುತ್ತಿರುವ ಸ್ವೆಟ್ಲಾನ ರೈಜಕೋವ ಅವರು ತುಳುನಾಡಿನ ದೈವಗಳನ್ನು ಮತ್ತು ದೈವನರ್ತಕರನ್ನು ರಷ್ಯಾದಲ್ಲಿ ಪ್ರಚುರಪಡಿಸುತ್ತಿದ್ದಾರೆ. ದೈವಾರಾಧನೆಯ ಬಗ್ಗೆ ಪ್ರಬಂಧಗಳನ್ನು ರಚಿಸಿರುವ ಅವರ ಯು ಟ್ಯೂಬ್ ಚಾನಲ್‌ನಲ್ಲಿ ಈಗಾಗಲೇ ಎಂಟು ಕಂತುಗಳು ದಾಖಲಾಗಿವೆ.

ಮಾಸ್ಕೊದಲ್ಲಿರುವ ರಷ್ಯನ್ ಅಕಾಡೆಮಿ ಆಫ್ ಸೈನ್ಸ್‌ನ ಇನ್‌ಸ್ಟಿಟ್ಯೂಟ್ ಆಫ್ ಎತ್ನಾಲಜಿ ಪ್ರತಿನಿಧಿಯಾಗಿ ಒಂಬತ್ತು ವರ್ಷದ ಹಿಂದೆ ಕರಾವಳಿಗೆ ಕಾಲಿಟ್ಟ ಸ್ವೆಟ್ಲಾನ ಉಡುಪಿಯಿಂದ ಕಾಸರಗೋಡು ವರೆಗೆ ವಿವಿಧ ಪ್ರದೇಶಗಳಲ್ಲಿ ಸಂಚರಿಸಿದ್ದಾರೆ.

ತುಳುನಾಡಿನ ದೈವಗಳು, ದೈವನರ್ತಕರು, ಕೋಲ, ನೇಮ ಮುಂತಾದ ಆಚರಣೆಗಳಿಗೆ ಸಾಕ್ಷಿಯಾಗಿ ಹಗಲು–ರಾತ್ರಿ ಚಿತ್ರೀಕರಣ ಮಾಡಿದ್ದಾರೆ. ರಷ್ಯನ್ ಭಾಷೆಯಲ್ಲಿ ಇವುಗಳನ್ನು ನಿರೂಪಿಸಿ ಸಾಕ್ಷ್ಯಚಿತ್ರಗಳನ್ನು ಸಿದ್ಧಪಡಿಸಿದ್ದಾರೆ.

ಭೂತಾರಾಧನೆ ಸಂದರ್ಭದಲ್ಲಿ ಬಳಸುವ ವಾದ್ಯಗಳ ಸಂಗೀತವನ್ನು ಹಿನ್ನೆಲೆಯಲ್ಲಿ ಬಳಸಿಕೊಂಡು 'ಅಂತರಿಕ್ಷಮ್ ಪ್ರೊಡಕ್ಷನ್' ಸಹಯೋಗದಲ್ಲಿ ಸಿದ್ಧಪಡಿಸಿರುವ ಈ ಸಾಕ್ಷ್ಯಚಿತ್ರಗಳ ಜೀವಾಳ ತುಳುನಾಡಿನ ಆರಾಧನಾ ಪದ್ಧತಿ. ದೈವಗಳ ಪರಿಚಯ, ಕಲಾವಿದರ ಸಾಮಾಜಿಕ ಹಿನ್ನೆಲೆ, ಜಾತಿಯ ಮಾಹಿತಿ, ಗುಡಿಗಳ ಪರಿಚಯ, ತುಳು ಮತ್ತು ಕನ್ನಡದಲ್ಲಿ ಸ್ಥಳನಾಮ ಮತ್ತು ದೈವಗಳ ಹೆಸರು ಹೀಗೆ ನಾನಾ ಆಯಾಮಗಳಲ್ಲಿ ಸಾಕ್ಷ್ಯಚಿತ್ರಗಳು ಕುತೂಹಲ ಕೆರಳಿಸುತ್ತವೆ. ಆಟಿಕಳಂಜ, ಕಳಿಯಾಟ್ಟಂ ಮತ್ತು ಕೇರಳದ 'ತೆಯ್ಯಂ'ಗಳ ಬಗ್ಗೆಯೂ ಪೂರಕ ಮಾಹಿತಿ ಇದೆ.

ಈಚೆಗೆ ಕೆಲವು ದಿನ ಕರಾವಳಿಯಲ್ಲಿ ಓಡಾಡಿ, ಮಂಗಳೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿರುವ ಅವರು ಸದ್ಯ ಕೋಲ್ಕತ್ತದಲ್ಲಿದ್ದಾರೆ. ದೂರವಾಣಿ ಮೂಲಕ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, ದೈವಾರಾಧನೆಯ ಬಗ್ಗೆ ಆಕಸ್ಮಿಕವಾಗಿ ತಿಳಿದು ಬಂತು. ಕ್ರಮೇಣ ಅದರ ಬಗ್ಗೆ ಕುತೂಹಲ ಹೆಚ್ಚಾಗಿದ್ದು, ಸಂಶೋಧನೆಯಲ್ಲಿ ತೊಡಗಿದೆ ಎಂದರು.

'2013ರಲ್ಲಿ ಬೆಂಗಳೂರಿನಲ್ಲಿದ್ದಾಗ ಯಕ್ಷಗಾನದ ಬಗ್ಗೆ ತಿಳಿದಿದ್ದೆ. ಶಿವಾನಂದ ಹೆಗಡೆ ಅವರು ಉತ್ತರ ಕನ್ನಡದ ಕೆರೆಮನೆಗೆ ಆಹ್ವಾನಿಸಿದರು. ಅಲ್ಲಿಂದ ಉಡುಪಿಗೆ ತೆರಳಿದ್ದಾಗ ಕರಾವಳಿಯ ವಿಶಿಷ್ಟ ಆರಾಧನೆಯ ಬಗ್ಗೆ ತಿಳಿಯಿತು. ಹಾಗೆ ಭೂತಾರಾಧನೆಯ ಹಿಂದೆ ಬಿದ್ದೆ. ಈಗ ತುಳುನಾಡು ನನ್ನ ಕಾರ್ಯಕ್ಷೇತ್ರ ಆಗಿದೆ. ಇಲ್ಲಿನ ವಿಶಿಷ್ಟ ಸಂಸ್ಕೃತಿಯನ್ನು ತಾಯ್ನಾಡಿನ ಜನತೆಗೆ ತಲುಪಿಸುತ್ತಿದ್ದೇನೆ' ಎಂದು ಅವರು ತಿಳಿಸಿದರು.



ಸ್ವೆಟ್ಲಾನ ರೈಜಕೋವ ಅವರ ಸಾಕ್ಷ್ಯಚಿತ್ರದ ಒಂದು ಭಾಗ

**2014ರಿಂದ ಸಾಕ್ಷ್ಯಚಿತ್ರಗಳಿಗೆ ಬೇಕಾದ ಮಾಹಿತಿ ಸಂಗ್ರಹಿಸಿದ್ದೇನೆ. ಭೂತಾರಾಧನೆಯಲ್ಲಿ ತೊಡಗಿಸಿಕೊಂಡಿರುವವರ ಸ್ಥಿತಿಗತಿ ಬಗ್ಗೆ ಕುತೂಹಲ ಮೂಡಿದೆ.**

**ಸ್ವೆಟ್ಲಾನ ರೈಜಕೋವ,** ರಷ್ಯಾದ ಸಂಶೋಧಕಿ

**ತುಳು ವಿದ್ವಾಂಸರು, ಭೂತಾರಾಧನೆ ಬಗ್ಗೆ ನಿರರ್ಗಳವಾಗಿ ಮಾತನಾಡುವ ಸ್ವೆಟ್ಲಾನ ಕಥಕ್ ನೃತ್ಯಗಾರ್ತಿ ಕೂಡ. ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ದೈವಾರಾಧನೆಯ ದಾಖಲೀಕರಣ ಆಸಕ್ತಿದಾಯಕವಾಗಿದೆ.**

**ಧನಂಜಯ ಕುಂಬ್ಳೆ,** ಮಂಗಳೂರು ವಿವಿ ಸಹಾಯಕ ಪ್ರಾಧ್ಯಾಪಕ

## 'ತುಳು ಕಲಿಯಬೇಕು; ಕಾಂತಾರ ನೋಡಬೇಕು'



ಸ್ವೆಟ್ಲಾನ ರೈಜಕೋವ

ಸ್ವೆಟ್ಲಾನ ಅವರು ತುಳುನಾಡಿನಲ್ಲಿ ಓಡಾಡಲು ಆರಂಭಿಸಿ ದಶಕ ಆಗುತ್ತ ಬಂದಿದೆ. ಈಗ ತುಳು ಭಾಷೆ ಕಲಿಯುವ ಆಸೆ ಚಿಗುರಿದೆ. ಆನ್‌ಲೈನ್‌ನಲ್ಲಿ ತುಳು ಭಾಷೆ ಕಲಿಸಲು ವಿದ್ವಾಂಸರೊಬ್ಬರಿಗೆ ಕೋರಿಕೆ ಮಂಡಿಸಿರುವುದಾಗಿ ತಿಳಿಸಿದರು.

ಈಗ, ದೈವಾರಾಧನೆ ಹಿನ್ನೆಲೆಯ 'ಕಾಂತಾರ' ಚಿತ್ರ ತುಂಬ ಸದ್ದು ಮಾಡುತ್ತಿದ್ದು ಥ್ರಿಲ್ಲರ್ ಎಂದು ಕೇಳಿರುವ ಆ ಚಿತ್ರವನ್ನು ನೋಡುವ ಕುತೂಹಲ ಕೆರಳಿದೆ ಎಂದು ಹೇಳುತ್ತಾರೆ.

ರಷ್ಯನ್ನರು ತಮಿಳು ಭಾಷೆ ಕಲಿಯಲು ಹೆಚ್ಚು ಆಸಕ್ತಿ ಹೊಂದಿದ್ದಾರೆ. ಕನ್ನಡ, ತೆಲುಗು, ಮಲಯಾಳಂ ಕಲಿತವರು ಇದ್ದಾರೆ. ನನಗೆ ತುಳು ಭಾಷೆ ಕಲಿಯುವ ಆಸಕ್ತಿ ಮೂಡಿದೆ. ಕನ್ನಡವನ್ನು ಕಲಿಯಬೇಕು ಎಂದು ವಿವರಿಸಿದರು.

## ಕಾರು ಜಖಂ: ಹರ್ಷನ ಸಹೋದರಿ ವಿರುದ್ಧ ಎಫ್‌ಐಆರ್

ಶಿವಮೊಗ್ಗ: ಹತ್ಯೆಯಾಗಿದ್ದ, ಇಲ್ಲಿನ ಬಜರಂಗ ದಳದ ಕಾರ್ಯಕರ್ತ ಹರ್ಷ ಅವರ ಸಹೋದರಿ ಅಶ್ವಿನಿ ಸೇರಿದಂತೆ 10-15 ಜನರ ವಿರುದ್ಧ ಇಲ್ಲಿನ ಆಜಾದ್ ನಗರದ ಮನೆಯೊಂದರ ಎದುರು ನಿಲ್ಲಿಸಿದ್ದ ಕಾರ್ ಜಖಂಗೊಳಿಸಿದ್ದಾಗಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

ಸೀಗೆಹಟ್ಟಿ ನಿವಾಸಿ ಅಶ್ವಿನಿ ಹಾಗೂ ಇತರ 10ರಿಂದ 15 ಜನರ ಗುಂಪು ಕಲ್ಲಪ್ಪನ ಕೇರಿಯಿಂದ ಬೈಕ್‌ನಲ್ಲಿ ಬಂದು ಸಯ್ಯದ್ ಪರ್ವಿಜ್ ಮನೆಯ ಮುಂದೆ ನಿಲ್ಲಿಸಿದ್ದ ಇನ್ನೊವಾ ಕಾರನ್ನು ಜಖಂಗೊಳಿಸಿದ್ದಾರೆ. 'ಜೈ ಶ್ರೀರಾಮ್' ಎಂಬ ಘೋಷಣೆ ಕೂಗುತ್ತ ಬಂದ ಗುಂಪು ಕೇಸರಿ ಬಾವುಟ ಹಿಡಿದುಕೊಂಡು ಕಾರನ್ನು ಹಾನಿಗೊಳಿಸಿದೆ ಎಂದು ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಪರ್ವಿಜ್ ದೂರು ದಾಖಲಿಸಿದ್ದಾರೆ.



**ದೇವಿರಮ್ಮ ದೇವಿ ಜಾತ್ರೆ**

ಚಿಕ್ಕಮಗಳೂರು ತಾಲ್ಲೂಕಿನ ಚಂದ್ರದ್ರೋಣ ಪರ್ವತ ಶ್ರೇಣಿಯ ದೇವೀರಮ್ಮ ಬೆಟ್ಟಕ್ಕೆ ದೇವಿ ದರ್ಶನಕ್ಕಾಗಿ ನಾಡಿನ ವಿವಿಧೆಡೆಗಳಿಂದ ಸೋಮವಾರ ಬಂದಿದ್ದ ಭಕ್ತರ ದಂಡು. ವರ್ಷಕ್ಕೊಮ್ಮೆ ನರಕಚತುರ್ದಶಿ ದಿನ ಬೆಟ್ಟದಲ್ಲಿ ದೇವಿಗೆ ಪೂಜೆ ಜರುಗುವುದು ವಿಶೇಷ –ಪಿಟಿಐ ಚಿತ್ರ

# ಬಸವಲಿಂಗ ಸ್ವಾಮೀಜಿ ನಿಗೂಢ ಸಾವು

ಕಂಚುಗಲ್ ಬಂಡೆ ಮಠದ ಸ್ವಾಮೀಜಿ ● ಡೆತ್‌ನೋಟ್ ಪತ್ತೆ, ಬೆದರಿಕೆ ಕಾರಣ?

ಪ್ರಜಾವಾಣಿ ವಾರ್ತೆ

ರಾಮನಗರ: ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ (45) ನಿಗೂಢವಾಗಿ ಸಾವನ್ನಪ್ಪಿದ್ದು, ಸೋಮವಾರ ಬೆಳಿಗ್ಗೆ ಮಠದ ಕೊಠಡಿಯ ಕಿಟಕಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಯಿತು.



ಬಸವಲಿಂಗ ಸ್ವಾಮೀಜಿ

ಶ್ರೀಗಳು ಬೆಳಿಗ್ಗೆ ಎಂದಿನಂತೆ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳದೆ ಇದ್ದುದ್ದರಿಂದ ಅನುಮಾನಗೊಂಡ ಅವರ ಸಹಾಯಕರು ಕೊಠಡಿಯ ಬಳಿ ತೆರಳಿ ನೋಡಿದಾಗ ಶ್ರೀಗಳ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಇರುವುದು ಕಂಡುಬಂದಿತು.

ವಿಷಯ ತಿಳಿಯುತ್ತಿದ್ದಂತೆ ಸಾವಿರಾರು ಭಕ್ತರು ಮಠದ ಬಳಿ ಸೇರಿದರು. ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಮಠದ ಆವರಣದಲ್ಲಿ ಲಿಂಗಾಯತ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲಾಯಿತು.

ಸುತ್ತೂರು, ಸಿದ್ಧಗಂಗೆ ಮಠದ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು.

**ಡೆತ್‌ನೋಟ್ ಪತ್ತೆ:** ಶ್ರೀಗಳು ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ 3 ಪುಟಗಳ ಡೆತ್‌ನೋಟ್ ಸಹ ದೊರೆತಿದೆ ಎನ್ನಲಾಗಿದೆ. ಆದರೆ, ಪೊಲೀಸರು ಇದರ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿಲ್ಲ.

'ಕೆಲವರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ನನಗೆ ಯಾರೂ ಸಹಾಯ ಮಾಡಲಿಲ್ಲ. ಬೆದರಿಕೆ ಕರೆಗಳೂ ಬಂದಿವೆ' ಎಂದು ಸ್ವಾಮೀಜಿ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ. ಶ್ರೀಗಳ ಖಾಸಗಿ ವಿಚಾರಗಳನ್ನು ಮುಂದಿಟ್ಟುಕೊಂಡು ಅವರನ್ನು ಬ್ಲಾಕ್‌ಮೇಲ್ ಮಾಡುವ ತಂತ್ರ ನಡೆದಿತ್ತು ಎಂದೂ ಆರೋಪಿಸಲಾಗಿದೆ. ಮಠದ ಉತ್ತರಾಧಿಕಾರಿ ನೇಮಕದಲ್ಲೂ ಗೊಂದಲ ತಲೆದೋರಿತ್ತು ಎನ್ನಲಾಗಿದೆ. ಆದರೆ, ಪೊಲೀಸರು ಯಾವುದನ್ನೂ ದೃಢಪಡಿಸಿಲ್ಲ.

ಬಸವಲಿಂಗ ಸ್ವಾಮೀಜಿ ಅವರು ಬಂಡೆ ಮಠದಲ್ಲೇ ಪ್ರಾಥಮಿಕ ಶಿಕ್ಷಣ ಪೂರೈಸಿದ್ದು, ಬಳಿಕ ಸಿದ್ಧಗಂಗಾ ಮಠದಲ್ಲಿ ವಿದ್ಯಾಭ್ಯಾಸ ಮಾಡಿದ್ದರು. 1997ರಲ್ಲಿ ಮಠದ ಕಿರಿಯ ಸ್ವಾಮೀಜಿಯಾಗಿ ಪೀಠ ಅಲಂಕರಿಸಿದ್ದು, ಕಳೆದ ವರ್ಷ ಬೆಳ್ಳಿ ಹಬ್ಬ ಆಚರಿಸಿಕೊಂಡಿದ್ದರು. ಮಾಗಡಿಯ ಪ್ರಭಾವಿ ಶ್ರೀಗಳಲ್ಲಿ ಒಬ್ಬರಾಗಿದ್ದರು. ದಶಕದ ಹಿಂದೆ ಗೊರೂರಿನಲ್ಲಿ ತ್ಯಾಜ್ಯ ವಿಲೇವಾರಿ ಘಟಕದ ವಿರುದ್ಧ ನಡೆದ ಹೋರಾಟದ ನೇತೃತ್ವ ವಹಿಸಿದ್ದರು.

**26ರಂದು ಕಾರ್ಯಕ್ರಮ ನಿಗದಿ:** ಬಂಡೆಗಲ್ ಮಠವು ಮಾಗಡಿ ತಾಲ್ಲೂಕಿನಲ್ಲಿಯೇ ಅತಿದೊಡ್ಡ ಮಠವಾಗಿದ್ದು, ಶ್ರೀಗಳು ಮತ್ತು ಮಠದ ಹೆಸರಿನಲ್ಲಿ 100ಕ್ಕೂ ಹೆಚ್ಚು ಎಕರೆ ಜಮೀನು, ಶಿಕ್ಷಣ ಸಂಸ್ಥೆಗಳಿವೆ.

ಸ್ವಾಮೀಜಿ ಹಲವು ರಾಜಕಾರಣಿಗಳಿಗೆ ಆಪ್ತರಾಗಿದ್ದರು. 26ರಂದು ಮಠದಲ್ಲಿ ನೂತನ ಕಟ್ಟಡದ ಭೂಮಿಪೂಜೆ ನಡೆಯಬೇಕಿತ್ತು. ಇದರಲ್ಲಿ ಹಲವು ರಾಜಕಾರಣಿಗಳು ಪಾಲ್ಗೊಳ್ಳಬೇಕಿತ್ತು. ಅದಕ್ಕೆ ಎರಡು ದಿನ ಮುನ್ನವೇ ಶ್ರೀಗಳು ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

### ವರ್ಷದಲ್ಲೇ ಇಬ್ಬರು ಸ್ವಾಮೀಜಿ ಆತ್ಮಹತ್ಯೆ

ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಾಗಡಿಯ ಚಿಲುಮೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅದಾಗಿ ವರ್ಷದೊಳಗೇ ಮತ್ತೊಬ್ಬರು ಶ್ರೀಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇಬ್ಬರ ಸಾವಿನಲ್ಲೂ ಸಾಮ್ಯತೆ ಇದೆ. ಕಿಟಕಿಗೆ ನೇಣುಬಿಗಿದ ಸ್ಥಿತಿಯಲ್ಲೇ ಶವಗಳು ಪತ್ತೆ ಆಗಿದ್ದವು. ಚಿಲುಮೆ ಮಠದ ಶ್ರೀಗಳ ಆತ್ಮಹತ್ಯೆಗೆ ಇನ್ನೂ ಕಾರಣ ಗೊತ್ತಾಗಿಲ್ಲ. ಬಂಡೆಮಠದ ಶ್ರೀಗಳ ಸಾವಿನ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## 'ಆರ್ಮುಗಸ್ವಾಮಿ ವರದಿ ರಾಜಕೀಯ ಪ್ರೇರಿತ'

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ ಸಾವಿನ ಕುರಿತು ನಿವೃತ್ತ ನ್ಯಾಯಮೂರ್ತಿ ಎ.ಆರ್ಮುಗಸ್ವಾಮಿ ನೇತೃತ್ವದ ಆಯೋಗ ನೀಡಿರುವ ವರದಿ 'ರಾಜಕೀಯ ಪ್ರೇರಿತ' ಮತ್ತು 'ಏಕಪಕ್ಷೀಯ'ವಾಗಿದೆ ಎಂದು ರಾಜ್ಯದ ಮಾಜಿ ಆರೋಗ್ಯ ಸಚಿವ ಸಿ. ವಿಜಯಬಾಸ್ಕರ್ ಟೀಕಿಸಿದ್ದಾರೆ.

ವಿಜಯಭಾಸ್ಕರ್, ಜಯಲಲಿತಾ ಅವರ ಆಪ್ತ ಸಹಾಯಕಿ ವಿ.ಕೆ. ಶಶಿಕಲಾ, ವೈದ್ಯ ಕೆ.ಎಸ್. ಶಿವಕುಮಾರ್, ಆರೋಗ್ಯ ಕಾರ್ಯದರ್ಶಿ ಜೆ.ರಾಧಾಕೃಷ್ಣನ್ ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ವರದಿಯಲ್ಲಿ ಹೇಳಲಾಗಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 124.80 | 14,655 | 14,655 |
| ಹಾರಂಗಿ | 2,859 | 2,856.28 | 1,202 | 740 |
| ಕಬಿನಿ | 2284.00 | 2,283.40 | 1,290 | 1,500 |
| ಹೇಮಾವತಿ | 2,922 | 2,921.50 | 2,447 | 2,382 |
| ಲಿಂಗನಮಕ್ಕಿ | 1,819 | 1,813 | 1,807 | 5,125 |
| ಸೂಪಾ (ಮೀ) | 564 | 553.89 | 1,448 | 602 |
| ಮಾಣಿ | 594 | 589 | 192 | 755 |
| ತುಂಗಭದ್ರಾ | 1,633 | 1632.99 | 12983 | 13681 |
| ಮಲಪ್ರಭಾ | 2079.5 | 2,079.50 | 2,394 | 2,394 |
| ಘಟಪ್ರಭಾ | 2175 | 2,175 | 984 | 984 |
| ಭದ್ರಾ | 186 | 185 | 2,456 | 2,456 |
| ಆಲಮಟ್ಟಿ (ಮೀ) | 519.6 | 519.45 | 94,210 | 1,12,034 |
| ನಾರಾಯಣಪುರ (ಮೀ) | 492.25 | 491.94 | 85,000 | 93,780 |

* ನೆಲಮಟ್ಟದಿಂದ

## ಮಾನದಂಡ ಲೋಪ: ₹1,213 ಕೋಟಿಗೆ ಕುತ್ತು?

ಒಂದನೇ ಪುಟದಿಂದ

ಅದರ ಬೆನ್ನಲ್ಲೇ, ರಾಕೇಶ್ ಸಿಂಗ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಮಂಜುಶ್ರೀ ಅವರಿಗೆ ಪತ್ರ ಬರೆದು ಅನುದಾನ ಕೈತಪ್ಪದಂತೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

'ಕರ್ನಾಟಕ ಸರ್ಕಾರಕ್ಕೆ ಬಿಡುಗಡೆಯಾಗಬೇಕಿರುವ ಅನುದಾನವನ್ನು ಪೂರ್ಣವಾಗಿ ಪಡೆಯಲು ನಗರ ಸ್ಥಳೀಯ ಸಂಸ್ಥೆಗಳು ಸಮರ್ಪಕ ಮಾನದಂಡಗಳನ್ನು ಸಲ್ಲಿಸದೇ ಇರುವುದು ಕಂಡು ಬಂದಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಹಾಗೂ ಹಣಕಾಸು ಇಲಾಖೆ ಪತ್ರ ಬರೆದಿವೆ. ಈ ವಿಷಯದ ಬಗ್ಗೆ ವೈಯಕ್ತಿಕವಾಗಿ ಗಮನ ಹರಿಸಿ ಯಾವುದೇ ಅನುದಾನ ಕೈತಪ್ಪದಂತೆ ಮಾನದಂಡಗಳನ್ನು ಅನುಸರಿಸಬೇಕು. ಅನುದಾನವನ್ನು ಪೂರ್ಣವಾಗಿ ಪಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಒಂದು ವೇಳೆ, ಅನುದಾನ ಪಡೆಯಲು ವಿಳಂಬವಾದರೆ, ಅನುದಾನ ಕೈ ತಪ್ಪಿದರೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ' ಎಂದು ಅವರು ಎಚ್ಚರಿಸಿದ್ದಾರೆ.

# 'ಮೀಸಲಾತಿ: ಅಧಿವೇಶನದಲ್ಲಿ ಮಸೂದೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ, ವಿಧಾನಮಂಡಲದ ಮುಂಬರುವ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಿ ಒಪ್ಪಿಗೆ ಪಡೆಯಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಕಾನೂನಿನ ಚೌಕಟ್ಟನಡಿ, ಮೀಸಲಾತಿ ಸೌಲಭ್ಯಕ್ಕೆ ಎಲ್ಲಾ ರೀತಿಯ ರಕ್ಷಣೆ ಒದಗಿಸಲಾಗುವುದು. ಪಂಚಮಸಾಲಿ ಸೇರಿದಂತೆ ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆ ಕುರಿತು ಬೇರೆ ಬೇರೆ ಆಯೋಗದಲ್ಲಿ ಚರ್ಚಾ ಹಂತದಲ್ಲಿವೆ' ಎಂದು ಅವರು ತಿಳಿಸಿದರು.

'ಮುಸ್ಲಿಂ ಸೇರಿದಂತೆ ಇತರ ಜಾತಿಗಳ ಮೀಸಲಾತಿ ಹಿಂಪಡೆಯುವ ಕುರಿತು, ಯಾರದೋ ವೈಯಕ್ತಿಕ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ. ಇದು, ಸೂಕ್ಷ್ಮ ವಿಚಾರ. ಸಂವಿಧಾನ, ಕಾನೂನಿಗೆ ಅನುಗುಣವಾಗಿ ಆ ಕುರಿತು ಚರ್ಚೆ ನಡೆಯಬೇಕು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

## ಮುಸ್ಲಿಂ ಮೀಸಲಾತಿ ತೆಗೆಯುವುದು ಅಸಾಧ್ಯ: ಸಿ.ಎಂ. ಇಬ್ರಾಹಿಂ

ವಿಜಯಪುರ: 'ರಾಜ್ಯದಲ್ಲಿ ಬಿಜೆಪಿ ಸರ್ಕಾರದಿಂದ ಮುಸ್ಲಿಂ ಮೀಸಲಾತಿ ತೆಗೆಯುವುದು ಅಸಾಧ್ಯ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅಭಿಪ್ರಾಯಪಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಅವರು, ಹಿಂದೆ 'ಕೇಶವ ಕೃಪಾ'ದಿಂದ ಬಂದಂತ ಬಿ.ಎಸ್.ಯಡಿಯೂರಪ್ಪ ಅವರು ಸಿ.ಎಂ ಆಗಿದ್ದಾಗಲೇ ಮುಸ್ಲಿಮರ ಮೀಸಲಾತಿ ತೆಗೆಯಲು ಸಾಧ್ಯವಾಗಿಲ್ಲ. ಇನ್ನು 'ಬಸವ ಕೃಪ'ದಿಂದ ಬಂದಿರುವ ಮುಖ್ಯಮಂತ್ರಿ ಅವರಿಂದ ಸಾಧ್ಯವೇ?' ಎಂದು ಪ್ರಶ್ನಿಸಿದರು.

'ಬಿಜೆಪಿ ಸರ್ಕಾರಕ್ಕೆ ಮೀಸಲಾತಿ ಬಗ್ಗೆ ಸ್ಪಷ್ಟತೆ ಇಲ್ಲ. ಮೀಸಲಾತಿ ವಿಷಯವಾಗಿ ರಾಜ್ಯದಲ್ಲಿ ಅಶಾಂತಿ ಮೂಡದಂತೆ ಸರ್ಕಾರ ನೋಡಿಕೊಳ್ಳಬೇಕು. ಮೀಸಲಾತಿ ಬಗ್ಗೆ ಅನೇಕ ಜಾತಿ, ಸಮುದಾಯದವರ ಬೇಡಿಕೆ ಬಗ್ಗೆ ಸಮಗ್ರ ಚರ್ಚೆಯಾಗಲಿ' ಎಂದರು.

# ಪ್ರಜಾವಾಣಿ@75 ಅಮೃತ ಮಹೋತ್ಸವ ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು PVAT75@PRAJAVANI.CO.IN ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು PRAJAVANI.NET ನಲ್ಲಿ ನೋಡಬಹುದು


## 'ಅತ್ಯಂತ ಆತ್ಮೀಯ ಪತ್ರಿಕೆ'



ವಿದೇಶದಲ್ಲಿ ಇದ್ದ ದಿನಗಳನ್ನು ಹೊರತುಪಡಿಸಿ, ದೇಶದಲ್ಲಿ ಇದ್ದಾಗ ಒಂದು ದಿನವೂ ಬಿಡದೆ 'ಪ್ರಜಾವಾಣಿ'ಯನ್ನು ಓದುತ್ತಿದ್ದೇನೆ. ನನ್ನ ಅತ್ಯುತ್ತಮ ಬರಹಗಳೆಲ್ಲ ಇಲ್ಲಿ ಪ್ರಕಟಗೊಂಡಿವೆ. 40 ವರ್ಷಕ್ಕಿಂತ ಹಳೆಯದಾದ ಒಡನಾಟ ಈ ಪತ್ರಿಕೆಯ ಜತೆಗೆ ಇದೆ. ಹಲವು ಲೇಖನ, ಕಥೆಗಳನ್ನು ಇಲ್ಲಿ ಬರೆದಿದ್ದೇನೆ. ವಿಶೇಷ ಸಂದರ್ಭಗಳಲ್ಲಿ ನನ್ನಿಂದ ಲೇಖನಗಳನ್ನು ಬರೆಸಿದ್ದೂ ಇದೆ. ಅತ್ಯಂತ ಆತ್ಮೀಯವಾದ ಪತ್ರಿಕೆ ಇದಾಗಿದೆ.

**ಚಂದ್ರಶೇಖರ ಕಂಬಾರ**
ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

## 'ನೈಜ ಸುದ್ದಿಗೆ ನಂಬರ್ ಒನ್'



1976ರಿಂದಲೂ ಪ್ರಜಾವಾಣಿ ಓದುತ್ತಿರುವೆ. ಪತ್ರಿಕೆಯ ವೈಚಾರಿಕ ಲೇಖನಗಳು ಎಲ್ಲರ ಗಮನಸೆಳೆಯುತ್ತಿವೆ. ಸಾಹಿತ್ಯ ವಲಯದವರು ಹಾಗೂ ನೈಜ ಸುದ್ದಿ ಬಯಸುವವರು ಮಾತ್ರ ಪ್ರಜಾವಾಣಿ ಓದುತ್ತಾರೆ. ಕಲೆ, ಸಾಹಿತ್ಯ, ಸಂಗೀತಕ್ಕೆ ಮೊದಲಿನಿಂದಲೂ ಒತ್ತು ಕೊಡುತ್ತಿರುವ ಪತ್ರಿಕೆ ಕಾಲಕ್ಕೆ ತಕ್ಕಂತೆ ತಂತ್ರಜ್ಞಾನ ಅಳವಡಿಸಿಕೊಂಡಿದೆ. ಪಕ್ಷಪಾತವಿಲ್ಲದೇ ಎಲ್ಲ ವರ್ಗದ ಜನರನ್ನು ಒಳಗೊಳ್ಳುವ ಸಾಮಾಜಿಕ ಜವಾಬ್ದಾರಿ ಹೊಂದಿದೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಪ್ರಜಾವಾಣಿಯೇ ನಾಡಿನ ನಂಬರ್ ಒನ್ ಪತ್ರಿಕೆ. ಮೊದಲು ಪ್ರಕಟವಾಗುತ್ತಿದ್ದ ಛೂ ಬಾಣ ಅಂಕಣ ಮತ್ತೆ ಆರಂಭಿಸಬೇಕು. ಹೊರರಾಜ್ಯ, ವಿದೇಶಗಳಲ್ಲಿಯೂ ಮುದ್ರಿತ ಪ್ರತಿ ಸಿಗುವಂತಾಗಲಿ. ಅಮೃತ ಸಂಭ್ರಮ ಇಮ್ಮಡಿಗೊಳ್ಳಲಿ.

**ಅಲ್ಲಮಪ್ರಭು ಬೆಟ್ಟದೂರು,** ಸಾಹಿತಿ, ಕೊಪ್ಪಳ

## 'ಓದಿದರೆ ಪ್ರಜಾವಾಣಿ ಓದಬೇಕು'

ಪ್ರಜಾವಾಣಿ ನನ್ನ ಬಂಧು, ಬಳಗದ ಹಾಗೆ. ನನ್ನನ್ನೊಬ್ಬ ಬರಹಗಾರನಾಗಿ ಗುರುತಿಸಿದ, ಮೊದಲ ಸಂಭಾವನೆ ನೀಡಿದ ಪತ್ರಿಕೆ. ಒಂದು ಕಾಲದಲ್ಲಿ 'ಪ್ರಜಾವಾಣಿ'ಗೆ ಏನಾದರೂ ಬರೆಯಬೇಕೆಂದಿದ್ದರೆ ನಮ್ಮೂರಿನ ಏಜೆಂಟರ ಲೆಟರ್‌ಹೆಡ್ ಮೂಲಕವೇ ಹೋಗಬೇಕು ಎಂಬ ಅಲಿಖಿತ ನಿಯಮವಿತ್ತು. ನನ್ನ ಒಂದು ಬರಹವನ್ನು ಕಳುಹಿಸಲು ಏಜೆಂಟರು ನಿರಾಕರಿಸಿದರು. ಆಗ ನಾನು ಒಂದು ಪೋಸ್ಟ್ ಕಾರ್ಡ್‌ನಲ್ಲಿ ನಮ್ಮೂರಿನಲ್ಲಿ ನಡೆಯುತ್ತಿದ್ದ ಕೋಣ ಬಲಿ ಪ್ರಕರಣದ ಬಗ್ಗೆ ಬರೆದು ಪತ್ರಿಕೆಗೆ ನೇರವಾಗಿ ಕಳುಹಿಸಿದೆ. ಕೆಲವೇ ದಿನಗಳಲ್ಲಿ ಪ್ರತಿಕ್ರಿಯೆ ಬಂದಿತು. 'ಆ ಬರಹವನ್ನು ಕೋಣನ ಸ್ವಗತದಂತೆ ಬರೆಯಿರಿ' ಎಂದು. ಈ ಮೂಲಕ ನಮ್ಮೂರಿನ ಅಲಿಖಿತ ನಿಯಮ ಮುರಿದಿದ್ದೆ.



'ನಾಡು ನಾಡಿ' ಕಾಲಂನಲ್ಲಿ ಹೊಯ್ಸಳರ ಕಾಲದ ಶಿಲ್ಪಗಳು ಅನಾಥವಾಗಿ ಬಿದ್ದದ್ದರ ಬಗ್ಗೆ ಬರೆದಿದ್ದೆ. ಅದೂ ಪ್ರಕಟವಾಗಿತ್ತು. ಆ ಬಳಿಕ ಬರಹ ಸಾಂಗತ್ಯ ನಿರಂತರ ಮುಂದುವರಿಯಿತು. ಭಾನುವಾರದ ಪುರವಣಿಯಂತೂ ನಮ್ಮ ಅರಿವನ್ನು ವಿಸ್ತರಿಸಿದೆ. ಸಾಕಷ್ಟು ಸಂಚಿಕೆಗಳನ್ನು ತೆಗೆದಿರಿಸಿದ್ದೆ. ವೈಭವೀಕರಣರಹಿತ ಸುದ್ದಿ, ಸರಳ ಭಾಷೆ ಇದೆಲ್ಲಾ ಇಷ್ಟವಾಗುವ ಸಂಗತಿಗಳು. ಇಂದಿಗೂ ಸಂಬಂಧ ವಿಸ್ತರಿಸಿದೆ. ನಮ್ಮಪ್ಪ ಹೇಳುತ್ತಿದ್ದ ಹಾಗೆ 'ಓದಿದರೆ ಪ್ರಜಾವಾಣಿ ಓದಬೇಕು'. ನಾನೂ ಅದನ್ನೇ ಹೇಳುತ್ತೇನೆ.

**ಪಿ.ಶೇಷಾದ್ರಿ,** ಚಲನಚಿತ್ರ, ಕಿರುತೆರೆ ನಿರ್ದೇಶಕ

## 'ವಿಶಾಲ, ವಿಕಾಸಮುಖಿ ವಿಚಾರಶಾಲೆ'



'ಪ್ರಜಾವಾಣಿ' ಅಂತ ಅಂದ ತಕ್ಷಣ ಅಥವಾ ಅದರ ಲಾಂಛನ ಶೀರ್ಷಿಕೆ ನೋಡಿದ ತಕ್ಷಣ, ಅದೊಂದು ವಿಶಾಲ, ವಿಕಾಸಮುಖಿ ವಿಚಾರಶಾಲೆಯಾಗಿಯೇ ಮನಸ್ಸಿಗೆ ಬರುತ್ತದೆ. ಯಾವುದೇ ಆಮಿಷ, ಪೂರ್ವಗ್ರಹ, ಮುಲಾಜುಗಳಿಗೆ ಒಳಗಾಗದೇ ಕನ್ನಡವೆಂಬ ಮನಸ್ಸಾಕ್ಷಿಯನ್ನು ಜೀವಂತವಾಗಿ, ಜಾಗೃತವಾಗಿ ಇರಿಸುವ ಕಾಯಕವನ್ನು ವೈದ್ಯಕೀಯದಂತೆ, ಉಪಾಸನೆಯಂತೆ ನಡೆಸಿಕೊಂಡು ಬಂದ ಧೀಮಂತ ದೈನಿಕ ಇದು.

ಸಂಗ್ರಾಮ, ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ ಸಾರ್ಥಕವಾಗುವಂತೆ ಸಮಾಜವನ್ನು ಕಟ್ಟುವಲ್ಲಿ ಶಿಕ್ಷಣದ ಪಾತ್ರ ಎಷ್ಟು ಮಹತ್ವದ್ದೋ ಪತ್ರಿಕೋದ್ಯಮದ ಭೂಮಿಕೆಯೂ ಅಷ್ಟೇ ಮುಖ್ಯವಾಗಿತ್ತು. ಆ ನಿಟ್ಟಿನಲ್ಲಿ ಘನವಾದ ಕಾಯಕವನ್ನು 'ಪ್ರಜಾವಾಣಿ' ಮಾಡಲು ಸಾಧ್ಯವಾದದ್ದು ಅದರ ಬಹುಮುಖಿ, ಪುರೋಗಾಮಿ ನಿಲುವಿನಿಂದ. ಇದರ ಸ್ಥೈರ್ಯಕ್ಕೆ ನೀರೆರೆದ, ಮೊದಲ ಸಂಚಿಕೆಯಿಂದ ಈ ಸಂಚಿಕೆಯ ತನಕದ, 'ಸಂಪಾದಕೀಯ- ಲೇಖಕ- ವರದಿಗಾರ- ವಿತರಕ- ವಾಚಕ' ಬಳಗದ ಎಲ್ಲರನ್ನೂ ಆಭಾರಪೂರ್ವಕವಾಗಿ ನೆನೆಯಬೇಕಾದ ಕ್ಷಣ ಇದು.

ನಮ್ಮೂರು ಗೋಕರ್ಣಕ್ಕೆ ಪತ್ರಿಕೆಯ ಬಂಡಲ್ ಸಂಜೆ ಐದೂವರೆಗೆ ಹುಬ್ಬಳ್ಳಿ ಬಸ್ಸಿನಲ್ಲಿ ಬರುತ್ತಿತ್ತು. ನಾವು ಗೆಳೆಯರು, ಭಾನುವಾರವಂತೂ ನೆಂಟರಿಗೆ ಕಾದಂತೆ ಆ ಬಸ್ಸಿಗೆ ಕಾಯುತ್ತಿದ್ದೆವು. ಹಿರಿಯ ಏಜೆಂಟರಾಗಿದ್ದ ಅನಂತ ಶೆಟ್ಟರ ಮಗ ಬಾಲಕೃಷ್ಣ ಶೆಟ್ಟರು ನಮಗೆ ಬಸ್ ಸ್ಟ್ಯಾಂಡಿನಲ್ಲೇ ಬಂಡಲ್ ಒಡೆದು ಸಂಚಿಕೆ ಕೊಡುತ್ತಿದ್ದರು. ಅವರು ಬಂಡಲ್ ತೆಗೆಯುವುದಕ್ಕೆ ನಾವು ಉತ್ಕಂಠಿತರಾಗಿ ಕಾದ ಕ್ಷಣಗಳ ಕಾಂತತ್ವ... ಪದಗಳಿಗೆ ಮೀರಿದ್ದು. ಗೌರೀಶ ಕಾಯ್ಕಿಣಿಯವರು ಹೇಳುವ 'ಸಂಯುಕ್ತ, ಚಿಂತನಶೀಲ ತನ್ಮಯತೆ'ಯ ದಾಹ ಅದು. ಈ ದಾಹವನ್ನು ಬಿತ್ತಿದ, ಮತ್ತು ಆತ್ಮ ಗೌರವಕ್ಕಿಂತಲೂ ಮಿಗಿಲಾದ ಮೌಲ್ಯವಿಲ್ಲ ಎಂಬುದನ್ನು ಪಾರದರ್ಶಕವಾಗಿ ಮನವರಿಕೆ ಮಾಡುತ್ತಲೆ ಬಂದ, ನೆಚ್ಚಿನ 'ಪ್ರಜಾವಾಣಿ'ಗೆ ಬೆಚ್ಚನೆ ವಂದನೆ.

**ಜಯಂತ ಕಾಯ್ಕಿಣಿ,** ಸಾಹಿತಿ, ಗೋಕರ್ಣ.

## '50 ವರ್ಷಗಳ ಬಾಂಧವ್ಯ'


ಆಗ ನಾನಿನ್ನೂ 9-10 ವರ್ಷದವನು. ಪ್ರೌಢಶಾಲೆ ಮುಖ್ಯೋಪಾಧ್ಯಾಯರಾಗಿದ್ದ ತಂದೆಯವರು 'ಪ್ರಜಾವಾಣಿ'ಯ ನಿತ್ಯದ ಓದುಗರಾಗಿದ್ದರು. ರಾತ್ರಿಯಾದರೂ ಪೇಪರ್ ಓದಿಯೇ ಮಲಗುವುದು ಅವರ ಅಭ್ಯಾಸ. ಆಗೆಲ್ಲಾ ಸಂಪಾದಕ ಟಿ.ಎಸ್. ರಾಮಚಂದ್ರರಾಯರು 'ಛೂಬಾಣ' ಅಂಕಣದಲ್ಲಿ ರಾಜಕಾರಣಿಗಳನ್ನು ಚುಚ್ಚಿ, ವ್ಯಂಗ್ಯ ಬೆರೆಸಿ ಬರೆಯುತ್ತಿದ್ದರು. ಅದನ್ನು ಓದಿ ಹೇಳಿ ನನಗೂ ಸಂಪಾದಕೀಯ ಪುಟ, ವಾಚಕರವಾಣಿ ತಪ್ಪದೇ ಓದಲು ಹೇಳುತ್ತಿದ್ದರು.

ಆದರೆ ನನಗೆ ಪತ್ರಿಕೆಯಲ್ಲಿ ನಿತ್ಯ ಬರುತ್ತಿದ್ದ ಫ್ಯಾಂಟಮ್, ಮಾಡೆಸ್ಟಿಬ್ಲೇಸ್ ಕಾರ್ಟೂನ್ ಕತೆಗಳು, ಮೊದ್ದುಮಣಿ ವ್ಯಂಗ್ಯಚಿತ್ರ ಇಷ್ಟದ ವಿಷಯಗಳು. ಶುಕ್ರವಾರದ ಸಿನಿಮಾಪುಟ, ಭಾನುವಾರದ ಪುರವಣಿಯ ರಾಮನ್ ವ್ಯಂಗ್ಯ ಚಿತ್ರಕತೆ, ಚಿಣ್ಣರ ಕತೆಗಳನ್ನು ತಪ್ಪದೇ ಓದುತ್ತಿದ್ದೆ. ಕಾಲೇಜು ದಿನಗಳಲ್ಲಿ ರಾಜಕೀಯ ಅಂಕಣ, ಹಾ.ಮಾ.ನಾಯಕರ ಸಾಂಪ್ರತ, ವಾಚಕರವಾಣಿ, ಭಾನುವಾರದ ಪದಬಂಧ ತುಂಬಾ ಇಷ್ಟದ ವಿಷಯಗಳಾಯ್ತು.

ನಾಗೇಶ ಹೆಗಡೆಯವರ ಅಂಕಣ, ಸಂಗತ ತಪ್ಪದೇ ಓದುತ್ತೇನೆ. ನನ್ನ ಪ್ರಜಾವಾಣಿಯ ಓದು ಹೀಗೆ 50 ವರ್ಷಗಳಿಗಿಂತ ಹಳೆಯದು. ಅದರ ಆಕಾರ, ರೂಪ, ಅಂಕಣಗಳು ಬದಲಾದರೂ, ಬೇರೆ ಅನೇಕ ಪೇಪರುಗಳು ಬಂದರೂ ನನ್ನ ಪೇಪರ್ ಬದಲಾಗಿಲ್ಲ.

**ಟಿ.ಆರ್.ರಘುನಾಥ್,** ನಾಗರಬಾವಿ,

## 'ಕನ್ನಡ ನೆಲದ ಸಾಕ್ಷಿಪ್ರಜ್ಞೆ'



ಮಲೆನಾಡ ತಪ್ಪಲಲ್ಲಿ ಹುಟ್ಟಿ ಬೆಳೆದ ನನಗೆ, ಶಾಲಾ ದಿನಗಳಲ್ಲಿಯೇ 'ಪ್ರಜಾವಾಣಿ'ಯ ಸಾಂಗತ್ಯ ದೊರಕಿದ್ದು ಭಾಗ್ಯವೇ ಸರಿ. 50 ವರ್ಷಗಳಿಗೂ ಹೆಚ್ಚು ಅವಧಿಯಿಂದ ನನ್ನ ದೈನಂದಿನ ಚಟುವಟಿಕೆಯ ಭಾಗವಾಗಿದೆ ಅದರ ಓದು. ನನ್ನ ಬುದ್ಧಿ–ಭಾವವನ್ನು ಅನನ್ಯವಾಗಿ ರೂಪಿಸಿದ ಹಾಗೂ ಕನ್ನಡ ನೆಲೆದ ಸಾಕ್ಷಿಪ್ರಜ್ಞೆಯಂತಿರುವ 'ಪ್ರಜಾವಾಣಿ'ಯು ಅಮೃತಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಅಭಿನಂದನೆಗಳು.

ನಾಲ್ಕು ದಶಕಗಳಿಂದ ಪರಿಸರ ಸಂರಕ್ಷಣೆ ಕಾರ್ಯದಲ್ಲಿ ತೊಡಗಿರುವ ನನಗೆ, ನಾಡಿನ ನೆಲ-ಜಲ-ಕಾಡಿನ ರಕ್ಷಣೆಯಲ್ಲಿ 'ಪ್ರಜಾವಾಣಿ' ತೋರುತ್ತಿರುವ ಕಾಳಜಿ ಮತ್ತು ಜವಾಬ್ದಾರಿ ಬಹಳ ಮಹತ್ವದ್ದಾಗಿ ತೋರುತ್ತದೆ. ರೈತರು, ಮಹಿಳೆಯರು, ವನವಾಸಿಗಳು, ವಿಜ್ಞಾನಿಗಳು, ವಿದ್ಯಾರ್ಥಿಗಳು- ಹೀಗೆ, ಸಮಾಜದ ಎಲ್ಲ ಸ್ತರಗಳ ಜನರು ತಳಮಟ್ಟದಲ್ಲಿ ನೈಸರ್ಗಿಕ ಪರಿಸರವನ್ನು ಉಳಿಸಿ ಬೆಳೆಸಲು ಶ್ರಮಿಸುವಾಗ, ಅಂತಹ ಎಲ್ಲ ರಚನಾತ್ಮಕ ಕಾರ್ಯಗಳಿಗೆ ಗಟ್ಟಿಧ್ವನಿಯಾದದ್ದು ಈ ಪತ್ರಿಕೆ. ಸರ್ಕಾರವನ್ನು ಎಚ್ಚರಿಸುವ ಜವಾಬ್ದಾರಿಯನ್ನು ನಿರಂತರವಾಗಿ ನಿರ್ವಹಿಸುತ್ತಿದೆ. ಪರಿಸರ ಸಂರಕ್ಷಣೆಯ ಇತಿಹಾಸದಲ್ಲಿ 'ಪ್ರಜಾವಾಣಿ'ಗೆ ಮಹತ್ವದ ಸ್ಥಾನ ಸದಾ ಇರುತ್ತದೆ ಎಂಬುದು ನನ್ನ ಖಚಿತ ನಂಬಿಕೆ.

**ಅನಂತ ಹೆಗಡೆ ಅಶೀಸರ,** ಅಧ್ಯಕ್ಷರು, ವೃಕ್ಷಲಕ್ಷ ಆಂದೋಲನ, ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





## ಸುಭಾಷಿತ

ಬೆಳಕಿನ ಅಸ್ತಿತ್ವವನೆ ಅಣಕಿಸುವ ಕತ್ತಲೆಗೆ ತಕ್ಕ ಉತ್ತರವಲ್ಲಿ ಕೇಳಿಬರಲಿ, ದೀಪಾವಳಿಯ ಜ್ಯೋತಿ ಅಭಯ ಹಸ್ತವನೆತ್ತಿ ಎಲ್ಲರಿಗೆ ಎಲ್ಲಕ್ಕೆ ಶುಭ ಕೋರಲಿ.

-ಕೆ.ಎಸ್. ನರಸಿಂಹಸ್ವಾಮಿ

# ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಅಧ್ಯಕ್ಷ, ಸದಸ್ಯರನ್ನು ತಕ್ಷಣ ನೇಮಿಸಿ

**ವಸತಿ ನಿಲಯದ** ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿದ ಹಾಗೂ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಅಡಿ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಸರಣಿಯೋಪಾದಿಯಲ್ಲಿ ಪ್ರಕರಣಗಳು ದಾಖಲಾಗಿವೆ. ಇಡೀ ಸಮಾಜ ಆಘಾತಕ್ಕೆ ಒಳಗಾಗುವಂತಹ ಪ್ರಕರಣವಿದು. ರಾಜ್ಯದಲ್ಲಿ ಮಕ್ಕಳ ಮೇಲಿನ ಅತ್ಯಾಚಾರ, ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಲೇ ಇವೆ. ಮಕ್ಕಳ ಹಕ್ಕುಗಳಿಗೆ ಸಂಕಷ್ಟ ಎದುರಾಗಿರುವ ಸಂದರ್ಭದಲ್ಲಿ ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಕೆಎಸ್‌ಸಿಪಿಸಿಆರ್) ಕಾಯಂ ಅಧ್ಯಕ್ಷ, ಸದಸ್ಯರಿಲ್ಲದೇ ದುರ್ಬಲಗೊಂಡಿದೆ. ಆಯೋಗವು ರಾಜ್ಯದಲ್ಲಿ ಮಕ್ಕಳ ಹಕ್ಕುಗಳಿಗೆ ರಕ್ಷಣೆ ಒದಗಿಸುವುದಕ್ಕಾಗಿಯೇ ಇರುವ ಅರೆನ್ಯಾಯಿಕ ಪ್ರಾಧಿಕಾರ. ಈ ಆಯೋಗಕ್ಕೆ ಹತ್ತು ತಿಂಗಳಿನಿಂದ ಕಾಯಂ ಅಧ್ಯಕ್ಷರೇ ಇಲ್ಲ. ಆರು ಸದಸ್ಯರ ಅಧಿಕಾರದ ಅವಧಿ ಜುಲೈ 9ಕ್ಕೆ ಕೊನೆಗೊಂಡಿದ್ದು, ಮೂರೂವರೆ ತಿಂಗಳಿನಿಂದ ಇಡೀ ಆಯೋಗವೇ ಅಸ್ತಿತ್ವ ಕಳೆದುಕೊಂಡಿದೆ. ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಯಾವುದೇ ಪ್ರಕರಣದ ವಿಚಾರಣೆ ನಡೆಸಲು ಮತ್ತು ಆದೇಶ ಹೊರಡಿಸಲು ಸಾಧ್ಯವಾಗದ ಸ್ಥಿತಿ ಆಯೋಗದಲ್ಲಿದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ, ಬಾಲಕಾರ್ಮಿಕ ಪದ್ಧತಿ, ಮಕ್ಕಳಿಗೆ ಆರ್‌ಟಿಇ ಅಡಿ ಶಾಲೆಗಳಿಗೆ ನೀಡಬೇಕಿದ್ದ ಪ್ರವೇಶವನ್ನು ನಿರಾಕರಿಸುವುದು ಸೇರಿದಂತೆ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ 1,200ಕ್ಕೂ ಹೆಚ್ಚು ಪ್ರಕರಣಗಳು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ವಿಚಾರಣೆಗೆ ಬಾಕಿ ಇವೆ. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸುವ ಅಧಿಕಾರವನ್ನು ಆಯೋಗ ಹೊಂದಿದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧ್ಯಯನ ನಡೆಸಿ, ಶಿಫಾರಸುಗಳನ್ನು ಮಾಡುವ ಜವಾಬ್ದಾರಿಯೂ ಆಯೋಗಕ್ಕಿದೆ. ಅಧ್ಯಕ್ಷರು, ಸದಸ್ಯರೇ ಇಲ್ಲದೆ ಆಯೋಗದ ಕೆಲಸಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ.



**ಈ ವಿಷಯದಲ್ಲಿ ಮುಖ್ಯಮಂತ್ರಿ ಯಾವುದೇ ಒತ್ತಡಕ್ಕೆ ಮಣಿಯದೆ ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕು**

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ ಯಾತ್ರೆ'ಯು ಕರ್ನಾಟಕದಲ್ಲಿ ಸಾಗುತ್ತಿರುವಾಗ ಬಾಲಕನೊಬ್ಬ ಕಾಂಗ್ರೆಸ್ ಪಕ್ಷದ ಬಾವುಟ ಹಿಡಿದು ನಡೆಯುತ್ತಿರುವ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದಂತೆಯೇ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್), ರಾಹುಲ್ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ರವಾನಿಸಿತ್ತು. ಆದರೆ, ಮುರುಘಾ ಮಠದ ಸ್ವಾಮೀಜಿ ವಿರುದ್ಧ ಅತ್ಯಾಚಾರ ಆರೋಪದಡಿ ದಾಖಲಾದ ಪ್ರಕರಣದ ವರದಿ ಕೇಳಿ ಸ್ಥಳೀಯ ಪೊಲೀಸರಿಗೆ ಪತ್ರ ಬರೆಯುವುದಕ್ಕೆ ಸೀಮಿತವಾಯಿತು ಎನ್‌ಸಿಪಿಸಿಆರ್ ಪಾತ್ರ. ಇಂತಹ ಆಯೋಗಗಳು ತಮ್ಮ ಅಧಿಕಾರವನ್ನು ಸರಿಯಾಗಿ ಚಲಾಯಿಸುವ ಬದಲಿಗೆ ಅಧಿಕಾರದಲ್ಲಿರುವ ರಾಜಕಾರಣಿಗಳ ಕೈಗೊಂಬೆಯಂತೆ ಹೇಗೆ ಕೆಲಸ ಮಾಡುತ್ತವೆ ಮತ್ತು ರಾಜಕೀಯ ಎದುರಾಳಿಗಳಿಗೆ ಕಿರುಕುಳ ನೀಡಲು ಹೇಗೆ ಬಳಕೆಯಾಗುತ್ತವೆ ಎಂಬುದಕ್ಕೆ ಇದು ಸಾಕ್ಷಿ.

ಕೇಂದ್ರ ಸರ್ಕಾರವು ಜಾರಿಗೊಳಿಸಿದ 'ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆ–2005'ರ ಅಡಿಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾರ್ಯನಿರ್ವಹಿಸುತ್ತದೆ. 2007ರಲ್ಲಿ ರಾಜ್ಯದಲ್ಲಿ ಆಯೋಗವು ಅಸ್ತಿತ್ವಕ್ಕೆ ಬಂದಿದೆ. ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆ ಖಾಲಿ ಆದಾಗಲೆಲ್ಲ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಈ ಬಾರಿ ದೀರ್ಘ ಕಾಲದಿಂದ ಎಲ್ಲ ಹುದ್ದೆಗಳು ಖಾಲಿ ಉಳಿದಿವೆ. ಕೆಎಸ್‌ಸಿಪಿಸಿಆರ್ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗೆ ರಾಜ್ಯ ಸರ್ಕಾರ ತೋರುತ್ತಿರುವ ವಿಳಂಬ ಧೋರಣೆಯು ಅದು ಮಕ್ಕಳ ಹಕ್ಕುಗಳ ರಕ್ಷಣೆಯ ವಿಚಾರದಲ್ಲಿ ಹೊಂದಿರುವ ನಿರಾಸಕ್ತಿಯನ್ನು ಎತ್ತಿ ತೋರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಾರ, ಅಧ್ಯಕ್ಷ ಸ್ಥಾನಕ್ಕೆ ಅರ್ಜಿ ಸಲ್ಲಿಸಿದವರಲ್ಲಿ ಐದು ಮಂದಿಯ ಹೆಸರನ್ನು ಮುಖ್ಯಮಂತ್ರಿಯವರಿಗೆ ಶಿಫಾರಸು ಮಾಡಲಾಗಿದೆ. ಆರು ಸದಸ್ಯ ಸ್ಥಾನಗಳಿಗೆ 80 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಆಯೋಗದ ಅಧ್ಯಕ್ಷ ಮತ್ತು ಸದಸ್ಯ ಸ್ಥಾನಕ್ಕೆ ಅರ್ಜಿ ಸಲ್ಲಿಸಿರುವವರ ಪರವಾಗಿ ಪ್ರಭಾವಿ ಸಚಿವರು, ರಾಜಕಾರಣಿಗಳು ಮತ್ತು ಮಠಾಧೀಶರು ಪ್ರಭಾವ ಬೀರುತ್ತಿರುವ ಆರೋಪಗಳಿವೆ. ಈ ಕಾರಣಕ್ಕಾಗಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬ ದೂರುಗಳಿವೆ. ಮುರುಘಾ ಮಠದ ಸ್ವಾಮೀಜಿ ವಿರುದ್ಧ ದೂರು ದಾಖಲಿಸಿರುವ ವಿದ್ಯಾರ್ಥಿನಿಯರೆಲ್ಲರೂ ಕೆಎಸ್‌ಸಿಪಿಸಿಆರ್ ಬಳಿ ಹೋಗದೆ ಸರ್ಕಾರೇತರ ಸಂಸ್ಥೆಯೊಂದರ ನೆರವು ಪಡೆದಿರುವುದು ಆಯೋಗದ ವಿಶ್ವಾಸಾರ್ಹತೆ ಕುರಿತು ಪ್ರಶ್ನೆ ಮೂಡುವಂತೆ ಮಾಡಿದೆ. ಯಾವುದೇ ರಾಜಕೀಯ ಪಕ್ಷದ ನಂಟು ಹೊಂದಿಲ್ಲದ, ಮಕ್ಕಳ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಬದ್ಧತೆ ಹೊಂದಿರುವ ವ್ಯಕ್ತಿಗಳನ್ನು ಆಯೋಗದ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನಕ್ಕೆ ನೇಮಿಸುವುದರಿಂದ ಮಾತ್ರ ಆಯೋಗದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಸಾಧ್ಯ. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ, ಸದಸ್ಯರ ನೇಮಕಾತಿ ವಿಚಾರದಲ್ಲಿ ಮುಖ್ಯಮಂತ್ರಿಯವರು ಯಾವುದೇ ಒತ್ತಡಕ್ಕೆ ಮಣಿಯದೆ ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕು. ಆ ಮೂಲಕ ರಾಜ್ಯದಲ್ಲಿ ಮಕ್ಕಳ ಹಕ್ಕುಗಳಿಗೆ ರಕ್ಷಣೆ ಒದಗಿಸುವ ಭರವಸೆಯನ್ನು ಮೂಡಿಸಬೇಕು.

## ದಿನದ ಟ್ವೀಟ್

### ಕಾಲಚಕ್ರ ಉರುಳಿದೆ...



**1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಹಂತದಲ್ಲಿದ್ದಾಗ ವಿನ್‌ಸ್ಟನ್ ಚರ್ಚಿಲ್ ಅವರು '... ಎಲ್ಲ ಭಾರತೀಯ ನಾಯಕರೂ ಕಡಿಮೆ ಸಾಮರ್ಥ್ಯ ಹೊಂದಿರುವವರು ಮತ್ತು ದುರ್ಬಲ ವ್ಯಕ್ತಿಗಳಾಗಿರುತ್ತಾರೆ' ಎಂದು ಹೇಳಿದ್ದರು. ಇಂದು, ನಮ್ಮ ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ, ಭಾರತೀಯ ಮೂಲದ ವ್ಯಕ್ತಿಯೊಬ್ಬರು ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿರುವ ಸಮಾಧಾನ ನಮ್ಮದು. ಬದುಕು ಸುಂದರವಾಗಿದೆ...**

**ಆನಂದ್ ಮಹೀಂದ್ರ,** ಉದ್ಯಮಿ

## ಕಿಡಿನುಡಿ



**ಮೊದಲು ಕಮಲಾ ಹ್ಯಾರಿಸ್, ಈಗ ರಿಷಿ ಸುನಕ್. ಅಮೆರಿಕ ಮತ್ತು ಬ್ರಿಟನ್‌ನ ಜನ ತಮ್ಮ ದೇಶದ ಬಹುಸಂಖ್ಯಾತ ಸಮುದಾಯಕ್ಕೆ ಸೇರಿಲ್ಲದವರನ್ನು ಒಪ್ಪಿಕೊಂಡು, ಸರ್ಕಾರದ ಅತ್ಯುನ್ನತ ಹುದ್ದೆಗಳಿಗೆ ಆಯ್ಕೆ ಮಾಡಿದ್ದಾರೆ. ಭಾರತಕ್ಕೆ ಮತ್ತು ಬಹುಸಂಖ್ಯಾತವಾದವನ್ನು ಪ್ರತಿಪಾದಿಸುವ ಪಕ್ಷಗಳಿಗೆ ಇಲ್ಲಿ ಒಂದು ಪಾಠವಿದೆ.**

**ಪಿ. ಚಿದಂಬರಂ,** ಕಾಂಗ್ರೆಸ್ ನಾಯಕ

## 25 ವರ್ಷಗಳ ಹಿಂದೆ

ಶನಿವಾರ, 25-10-1997

**• 100 ತಾಲ್ಲೂಕುಗಳಲ್ಲಿ ಬರ: ಪರಿಹಾರಕ್ಕೆ 20 ಕೋಟಿ**

**ಬೆಂಗಳೂರು, ಅ. 24**– ರಾಜ್ಯದಲ್ಲಿ ಸುಮಾರು 100 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಗಂಭೀರವಾಗಿದ್ದು, ಈ ತಾಲ್ಲೂಕುಗಳಲ್ಲಿ ಕೂಡಲೇ ಪರಿಹಾರ ಕಾರ್ಯಗಳನ್ನು ಆರಂಭಿಸಲು 12ರಿಂದ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಇಂದು ನಡೆದ ರಾಜ್ಯ ಸಚಿವ ಸಂಪುಟದ ಸಭೆ ತೀರ್ಮಾನಿಸಿದೆ.

ಸಚಿವ ಸಂಪುಟದ ನಿರ್ಧಾರಗಳನ್ನು ಪತ್ರಿಕಾಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಂ.ಸಿ. ನಾಣಯ್ಯ ವಿವರಿಸಿದರು.

**• ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನಿರ್ಬಂಧ: ಗುಜ್ರಾಲ್**

**ಎಡಿನ್‌ಬರ್ಗ್, ಅ. 24 (ಪಿಟಿಐ)**– ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಹೆಸರಿನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ನಿರ್ಬಂಧ ವಿಧಿಸಲಾಗುತ್ತಿದೆ ಎಂದು ಭಾರತದ ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ಟೀಕಿಸಿದರು.

ಇಂದು ಆರಂಭವಾದ ಕಾಮನ್‌ವೆಲ್ತ್ ರಾಷ್ಟ್ರಗಳ ಸಮ್ಮೇಳನವನ್ನು ಉದ್ದೇಶಿಸಿ ಪ್ರಧಾನ ಭಾಷಣ ಮಾಡಿದ ಅವರು, ನ್ಯಾಯ ಮತ್ತು ಸಮಾನತೆ ಆಧಾರದ ಮೇಲೆ ಮಾತ್ರ ಆರ್ಥಿಕ ಉದಾರೀಕರಣ ಯಶಸ್ವಿಯಾಗುತ್ತದೆ ಎಂದರು.

## 50 ವರ್ಷಗಳ ಹಿಂದೆ

ಬುಧವಾರ, 25-10-1972

**• ಭಯಾನಕ ಅಭಾವ ಸ್ಥಿತಿ ಎದುರಿಸಲು ಉಚಿತ ಗೋಧಿ ಹಂಚಲು ನಿರ್ಧಾರ**

**ಬೆಂಗಳೂರು, ಅ. 24**– ರಾಜ್ಯದ ಕೆಲವು ಜಿಲ್ಲೆಗಳಲ್ಲಿನ ಅಭಾವ 'ಭಯಾನಕ'ವಾಗಿರುವುದನ್ನು ಎದುರಿಸಲು ಅಂಥ ಪ್ರದೇಶಗಳಲ್ಲಿ ಜಾನುವಾರು ಸಾಕಣೆಗೆ ಅವಕಾಶ ಹಾಗೂ ದುರ್ಬಲರಿಗೆ ಉಚಿತವಾಗಿ ಗೋಧಿ ಹಂಚಿಕೆ ಕ್ರಮಗಳನ್ನು ಇಂದು ಮಂತ್ರಿಮಂಡಲದ ಸಭೆ ತೀರ್ಮಾನಿಸಿತು.

ದುರ್ಬಲರಿಗಾಗಿ ಗಂಜಿ ಕೇಂದ್ರಗಳನ್ನು ಸ್ಥಾಪಿಸುವ ಬದಲು ಉಚಿತವಾಗಿ ಗೋಧಿ ಒದಗಿಸುವುದು ಸೂಕ್ತ ಎಂಬುದು ಸರ್ಕಾರದ ಅಭಿಪ್ರಾಯವಾಗಿದೆ.

**• 'ನೂರು ಜನ ಹಸಿವಿಗೆ ಬಲಿ'**

**ಬೆಂಗಳೂರು, ಅ. 24**– ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಕಳೆದ ಕೆಲವು ದಿನಗಳಲ್ಲಿ ಸುಮಾರು ನೂರು ಮಂದಿ ಹಸಿವಿನಿಂದ ಸತ್ತಿರಬಹುದೆಂದು ಇಂದು ಇಲ್ಲಿ ತಿಳಿಸಿದ ಕಮ್ಯುನಿಸ್ಟ್ ಶಾಸಕ ವಿ.ಎನ್.ಪಾಟೀಲ್ ಅವರು, ಜನರಲ್ಲಿ ಗಾಬರಿ ಹುಟ್ಟಿಸದಿರಲು ಈ ಸುದ್ದಿಯನ್ನು ಸರ್ಕಾರ ಮರೆಮಾಚುತ್ತಿದೆ ಎಂದಿದ್ದಾರೆ.

'ಗುಲ್ಬರ್ಗ ಜಿಲ್ಲೆಯಲ್ಲೇ 11 ಸಾವಿರ ಪ್ರಕರಣಗಳಿವೆ, ಇತರ ಪ್ರದೇಶಗಳಲ್ಲೂ ಸುಮಾರು ನೂರು ಮಂದಿ ಸಾವಿಗೀಡಾಗಿರುವ ಅನಧಿಕೃತ ಸುದ್ದಿಗಳಿವೆ' ಎಂದು ತಿಳಿಸಿದರು.

### 40 ಪರ್ಸೆಂಟ್ ಕಮಿಷನ್‌ನ ಸಂಖ್ಯಾಶಾಸ್ತ್ರೀಯ ಆಳ ಮತ್ತು ರಾಜಕೀಯ ಅಗಲ

# ಭ್ರಷ್ಟಾಚಾರದ ಕಥನ ವಿನೂತನ ಜನಪದ



ಅನುರಣನ

ನಾರಾಯಣ ಎ.

**ವಿಚಾರ** ಅದೆಷ್ಟೇ ಗಂಭೀರವಾಗಿದ್ದರೂ ಅದು ಸಾರ್ವಜನಿಕ ಚರ್ಚೆಯಲ್ಲಿ ಬಹುಕಾಲ ಉಳಿದುಕೊಳ್ಳದ ಕಾಲಘಟ್ಟ ಇದು. ಅದರಲ್ಲೂ ಭ್ರಷ್ಟಾಚಾರದ ವಿಷಯ ಬಂದಾಗಲಂತೂ ಜನ 'ಇದು ಮಾಮೂಲಿ ಬಿಡಿ' ಎಂದು ಸಿನಿಕರಾಗುತ್ತಿದ್ದಾರೆ. ವರ್ತಮಾನದ ಸ್ಥಿತಿ ಹೀಗಿದ್ದರೂ ಕರ್ನಾಟಕ ಗುತ್ತಿಗೆದಾರರ ಸಂಘದವರು ಬಹಿರಂಗಗೊಳಿಸಿದ 40 ಪರ್ಸೆಂಟ್ ಕಮಿಷನ್‌ನ ಕಥನ ಇದೀಗ ಹೆಚ್ಚು ಕಡಿಮೆ ಒಂದು ವರ್ಷವಾದರೂ ರಾಜ್ಯ ರಾಜಕೀಯ ಜನಪದದ (political lore) ಭಾಗವಾಗಿ ಉಳಿದಿದೆ!

'40 ಪರ್ಸೆಂಟ್' ಈಗ ರಾಜಕೀಯ ಕೆಸರೆರಚಾಟದ ವಸ್ತುವಷ್ಟೇ ಅಲ್ಲ, ಅದೀಗ ಜನರ ದೈನಂದಿನ ಮಾತುಕತೆಯ ವಸ್ತು. ಅದೇನೂ ಪಿಸುಮಾತಲ್ಲ. ಗಟ್ಟಿ ಧ್ವನಿ. ಜೋಕುಗಳು, ಮೀಮ್‌ಗಳು, ಕುಹಕಗಳು, ವ್ಯಂಗ್ಯಗಳು, ವ್ಯಂಗ್ಯಚಿತ್ರಗಳು, ತರಹೇವಾರಿ ಪೋಸ್ಟರ್ ಹೀಗೆ ವಿವಿಧ ಅಭಿವ್ಯಕ್ತಿ ಪರಿಕರಗಳ ಮೂಲಕ ಕತೆ ಕುಣಿದಾಡುತ್ತಿದೆ. ಇದನ್ನೆಲ್ಲಾ ಜನ ಮಾಡುತ್ತಿರುವುದು ಹಾಸ್ಯಕ್ಕಲ್ಲ, ಮನರಂಜನೆಗಲ್ಲ. ಜನ ತಮ್ಮ ಅಸಹಾಯಕತೆಯನ್ನೂ ಹತಾಶೆಯನ್ನೂ ಆಕ್ರೋಶವನ್ನೂ ಭ್ರಮನಿರಸನವನ್ನೂ ವ್ಯಕ್ತಪಡಿಸುವ ವಿಧಾನಗಳಿವು. ಒಂದು ರೀತಿಯ ಸಾಮೂಹಿಕ ಪ್ರತಿಭಟನೆ ಅನ್ನಿ. ಜನಸಾಮಾನ್ಯರ ಇಂತಹ ಪ್ರತಿಭಟನೆಯ ವಿಧಾನಗಳನ್ನು ಅಸಹಾಯಕರ ಅಸ್ತ್ರಗಳು (Weapons of the Weak) ಎಂದು ಜೇಮ್ಸ್ ಸ್ಕಾಟ್ ಎಂಬ ಮಾನವಶಾಸ್ತ್ರಜ್ಞ ಕರೆದದ್ದುಂಟು.

ಭ್ರಷ್ಟಾಚಾರ ಮಾಮೂಲು ಅಂತ ಜನ ಸ್ವೀಕರಿಸಿದ ಸ್ಥಿತಿಯಲ್ಲೂ ಈ ರೀತಿಯ ಪ್ರತಿರೋಧವೊಂದನ್ನು ಕರ್ನಾಟಕದಲ್ಲಷ್ಟೇ ಅಲ್ಲ, ಇಡೀ ದೇಶದಲ್ಲಿ '40 ಪರ್ಸೆಂಟ್' ಕಥನ ಸೃಷ್ಟಿಸಿದೆ. ಚೋರ ವಿದ್ಯೆಗೂ ನಲವತ್ತು ಎಂಬ ಸಂಖ್ಯೆಗೂ ಒಂದು ನಂಟು 'ಅರೇಬಿಯನ್ ನೈಟ್ಸ್' ಕತೆಯ ಆಲಿಬಾಬನ ಕಾಲದಿಂದಲೂ ಇರುವುದು ಕಾಕತಾಳೀಯ ಮಾತ್ರ.

ಹಾಗೆ ನೋಡಿದರೆ ಇಲ್ಲಿ ಪಠಿಸಬೇಕಿರುವ ಸಂಖ್ಯೆ ನಲವತ್ತಲ್ಲ. ಮುನ್ನೂರು. ಯಾಕೆ ಅಂತ ಕೇಳಿ. ಹೋದ ಚುನಾವಣೆಯ ಸಂದರ್ಭದಲ್ಲಿ (2018) ಬಿಜೆಪಿಯ ಪ್ರಚಾರಾರ್ಥವಾಗಿ ಕರ್ನಾಟಕಕ್ಕೆ ಬಂದಿದ್ದ ಪ್ರಧಾನ-ಮಂತ್ರಿಯವರೇ ರಾಜ್ಯದಲ್ಲಿ ಆಗ ಶೇ 10 ಕಮಿಷನ್ ಅಥವಾ ಭ್ರಷ್ಟಾಚಾರ ಇದೆ ಎಂದು ಹೇಳಿದ್ದರು. ಅದನ್ನು ತರ್ಕಕ್ಕಾಗಿ ಸತ್ಯ ಅಂತಲೇ ಸ್ವೀಕರಿಸೋಣ. ಈಗ ಕರ್ನಾಟಕ ಗುತ್ತಿಗೆದಾರರ ಸಂಘದವರು ರಾಜ್ಯದಲ್ಲಿ ಶೇ 40 ಕಮಿಷನ್ ಅಥವಾ ಭ್ರಷ್ಟಾಚಾರ ಇದೆ ಅಂತ ಹೇಳುತ್ತಿದ್ದಾರೆ. ಪ್ರಧಾನಮಂತ್ರಿಯವರು ಆಗ ಮಾಡಿದ್ದ ಕಮಿಷನ್ ಆಪಾದನೆಯಲ್ಲಿ ಎಷ್ಟು ಸತ್ಯಾಂಶವಿತ್ತೋ ಅಷ್ಟೇ ಸತ್ಯಾಂಶವು ಗುತ್ತಿಗೆದಾರರು ಈಗ ನೀಡಿದ ದೂರಿನಲ್ಲೂ ಇದೆ ಅಂತ ಒಪ್ಪಲೇಬೇಕಾಗುತ್ತದೆ. ಅಂದರೆ ಹಿಂದೆ ಇದ್ದ 10 ಈಗ 40 ಆಗಿದೆ.


ನಮ್ಮ ಮುಂದಿರುವ ಪ್ರಶ್ನೆ ಹೀಗಿದೆ: ಹಿಂದೆ 10 ಇದ್ದದ್ದು ಈಗ 40ಕ್ಕೆ ಏರಿದೆ ಎಂದಾದರೆ ಶೇಕಡಾವಾರು ಎಷ್ಟು ಹೆಚ್ಚಳವಾಯಿತು? ಇದನ್ನು ಗಣಿತ ಸೂತ್ರದ ಪ್ರಕಾರ ಲೆಕ್ಕಹಾಕಲು 40 ಅನ್ನು 10ರಿಂದ ಕಳೆದು, ಬಂದ ಉತ್ತರವನ್ನು ಮತ್ತೆ 10ರಿಂದ ಭಾಗಿಸಿ ನೂರರಿಂದ ಗುಣಿಸಬೇಕು (40-10 ÷ 10 x 100). ಉತ್ತರ 300. ಅಂದರೆ, ಹೋದ ನಾಲ್ಕೂವರೆ ವರ್ಷಗಳಲ್ಲಿ, ಮೂರೂವರೆ ವರ್ಷಗಳ ಕಾಲ ಪ್ರಧಾನಮಂತ್ರಿ ಪ್ರತಿನಿಧಿಸುವ ಪಕ್ಷವೇ ಆಡಳಿತ ನಡೆಸುತ್ತಿರುವಾಗಲೇ ದಂಧೆಯಲ್ಲಿ ಆದ ಹೆಚ್ಚಳ ಶೇ 300ರಷ್ಟು! ಈಗ ಹೇಳಿ. ಈ ಚರ್ಚೆಯ ಕೇಂದ್ರದಲ್ಲಿ ಇರಬೇಕಿರುವ ಸಂಖ್ಯೆ ನಲವತ್ತೋ ಅಥವಾ ಮುನ್ನೂರೋ ಅಂತ. 'ಆಗಲೂ ಇತ್ತು ಈಗಲೂ ಇದೆ' ಎನ್ನುವ ಸಮಜಾಯಿಷಿಗೆ ಅರ್ಥವೇ ಇಲ್ಲ. ಇಲ್ಲಿ ಬೆಚ್ಚಿ ಬೀಳಿಸುವ ವಿಚಾರ ನಿಚ್ಚಳವಾದ ಹೆಚ್ಚಳ.

ಆಪಾದನೆಗಳಿಗೆಲ್ಲ ಪುರಾವೆ ಎಲ್ಲಿದೆ ಅಂತ ಮುಖ್ಯಮಂತ್ರಿ ಆದಿಯಾಗಿ ಆಡಳಿತ ಪಕ್ಷದ ವಕ್ತಾರರೆಲ್ಲಾ ಕೇಳುತ್ತಿದ್ದಾರೆ. ಹೌದು, ಪುರಾವೆ ಇಲ್ಲ. 2018ರ 'ಹತ್ತು ಪರ್ಸೆಂಟ್' ಆಪಾದನೆಗೆ ಪ್ರಧಾನಮಂತ್ರಿಯವರೂ ಪುರಾವೆ ಒದಗಿಸಿರಲಿಲ್ಲ. ಎಲ್ಲರಿಗೂ ತಿಳಿದಿರುವಂತೆ ಇಂತಹ ಚತುರಚೋರ ವ್ಯವಹಾರಗಳಿಗೆಲ್ಲಾ ಇರುವುದು ಎರಡೇ ಎರಡು ಸಾಕ್ಷಿಗಳು. ಮೊದಲನೆಯದ್ದು ಆತ್ಮಸಾಕ್ಷಿ. ಎರಡನೆಯದ್ದು ಪಂಚಭೂತಗಳ ಸಾಕ್ಷಿ. ಆತ್ಮಸಾಕ್ಷಿ ಎನ್ನುವುದು ಸತ್ತುಹೋಗಿರುವ ರಾಜಕೀಯ ಸಂಸ್ಕೃತಿಯಲ್ಲಿ ಪಂಚಭೂತಗಳ ಸಾಕ್ಷಿ ಕೆಲಸಕ್ಕೆ ಬರುವುದಿಲ್ಲ.

ಹಾಗಂತ ಸಾಕ್ಷ್ಯ ಇಲ್ಲವೇ ಇಲ್ಲ ಅಂತ ಅಲ್ಲ. ಬೇಕಾದಷ್ಟಿವೆ. ಅವುಗಳನ್ನು ಕಾಣುವ ಕಣ್ಣು ಬೇಕಷ್ಟೆ. ಬರೀ ನೋಡಿದರೆ ಸಾಲದು. ಕಾಣಬೇಕು. ನೋಡುವ ಕಣ್ಣುಗಳು ಮುಖದ ಮೇಲಿರುತ್ತವೆ. ಕಾಣುವ ಕಣ್ಣು ಹೃದಯದಲ್ಲಿರುತ್ತದೆ. ಹಾಗಾಗಿಯೇ ಆಡಳಿತ ಪಕ್ಷದವರಿಗೆ ಕಾಣಸಿಗದ ಸಾಕ್ಷ್ಯ ಜನರಿಗೆ ದಿನನಿತ್ಯ ಕಾಣಸಿಗುತ್ತದೆ. ಗುಂಡಿಗಳ ಮಧ್ಯೆ ರಸ್ತೆಗಳನ್ನು ಹುಡುಕುತ್ತಾ ಅಪಘಾತಕ್ಕೀಡಾಗಿ ಅಮಾಯಕ ವಾಹನ ಸವಾರರು ಸಾಯುತ್ತಾರಲ್ಲ ಅವರ ಕುಟುಂಬವರ್ಗದವರ ಕಣ್ಣೀರಿನಲ್ಲಿ ಜನ ಸಾಕ್ಷ್ಯ ಕಾಣುತ್ತಾರೆ. ಸೋರುವ ಮಾಡಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳ ಅಸಹಾಯಕತೆಯಲ್ಲಿ ಜನ ಸಾಕ್ಷ್ಯ ಕಾಣುತ್ತಾರೆ. ಇನ್ನೂ ಕಟ್ಟುತ್ತಿರುವಾಗಲೇ ಕುಸಿದು ಬೀಳುತ್ತಿರುವ ಸೇತುವೆ-ಅಣೆಕಟ್ಟುಗಳಲ್ಲಿ ಜನ ಸಾಕ್ಷ್ಯ ಕಾಣುತ್ತಾರೆ. ಇನ್ನೂ ದಶಕ ಪೂರೈಸದ ಬೆಂಗಳೂರಿನ ಬೃಹತ್ ಮೇಲ್ಸೇತುವೆಗಳಲ್ಲಿ ಎದ್ದಿರುವ ಬಿರುಕುಗಳಲ್ಲಿ ಜನ ಸಾಕ್ಷ್ಯ ಕಾಣುತ್ತಾರೆ.

ಹೀಗೆ '40 ಪರ್ಸೆಂಟ್' ಭ್ರಷ್ಟಾಚಾರದ ವಿಚಾರ ಒಂದು ಜನಪದ ನುಡಿಗಟ್ಟಾಗಿ ಜನರ ಬಾಯಲ್ಲಿ ಪುನರಾವರ್ತನೆಗೊಳ್ಳುತ್ತಿರುವ ವಿದ್ಯಮಾನದೆದುರು ಸರ್ಕಾರದ ಸಮಜಾಯಿಷಿಗಳು ಸೋಲುತ್ತಿವೆ. ಕಾಂಗ್ರೆಸ್ಸಿನವರು ಈ ವಿಷಯವನ್ನು ಕೈಗೆತ್ತಿಕೊಂಡು 'ಪೇಸಿಎಂ' ಎನ್ನುವ ಹೆಸರಿನಲ್ಲಿ ರೂಪಿಸಿದ ಆಂದೋಲನವನ್ನು ಬಿಜೆಪಿಯವರು 'ಭೂತದ ಬಾಯಲ್ಲಿ ಭಗವದ್ಗೀತೆ' ಅಂತ ಹಂಗಿಸಿ ಅದರ ಮೊನಚನ್ನು ಕಡಿಮೆಗೊಳಿಸಲು ಪ್ರಯತ್ನಿಸಿದರು. ಬಿಜೆಪಿಯ ಪ್ರತಿಕ್ರಿಯೆಯಲ್ಲಿ ಎರಡು ರೀತಿಯ ವಿಶೇಷಗಳನ್ನು ಗಮನಿಸಬೇಕಿದೆ. ಮೊದಲನೆಯದ್ದು ಇಡೀ 'ಪೇಸಿಎಂ' ಕ್ಯಾಂಪೇನ್ ಇದೆಯಲ್ಲಾ ಅದರ ಸ್ವರೂಪ ಮತ್ತು ಮಟ್ಟ ಹೇಗಿತ್ತು ಎಂದರೆ, ಅದು ಬಿಜೆಪಿಯು ಯಾವತ್ತೂ ಎದುರಾಳಿಗಳ ಮೇಲೆ ಎಸಗುವ ಆಕ್ರಮಣದ ನಕಲಾಗಿತ್ತು. ತನ್ನ ತಂತ್ರ ತನಗೇ ತಿರುಮಂತ್ರವಾದಾಗ ಹೇಗಿರುತ್ತದೆ ಅಂತ ಬಿಜೆಪಿಯ ಅನುಭವಕ್ಕೆ ಬಂದ ಕ್ಷಣವದು.

ಅದೇನೇ ಇರಲಿ, ಕಾಂಗ್ರೆಸ್ 'ಪೇಸಿಎಂ' ಎಂದಾಗ ಬಿಜೆಪಿಯವರು ಅದನ್ನು ಭೂತದ ಬಾಯಲ್ಲಿ ಆ ಗೀತೆ ಈ ಗೀತೆ ಅಂತ ತೇಲಿಸಿಬಿಡಬಹುದು. ಜನ ಬೀದಿಯಲ್ಲಿ ನಿಂತು ದಿನನಿತ್ಯವೂ '40 ಪರ್ಸೆಂಟ್' ಮಂತ್ರ ಪಠಿಸುತ್ತಿರುವುದನ್ನು ಏನಂತ ಕರೆಯುವುದು? ಅದಕ್ಕೇನಾದರೂ ಸೂಕ್ತ ಹೋಲಿಕೆ ನೀಡಬೇಕಿದ್ದರೆ ತುಳುನಾಡಿನ ಮೂಲನಿವಾಸಿಗಳ ಆರಾಧನಾ ಸಂಪ್ರದಾಯದ ಕೇಂದ್ರದಲ್ಲಿರುವ ಭೂತಗಳು (ದೈವಗಳು) ಹಾಡುವ ಪಾಡ್ದನ ಹಾಡುಗಳನ್ನು ಉದಾಹರಿಸಬಹುದೋ ಏನೋ? ಯಾಕೆಂದರೆ, ಈ ಪಾಡ್ದನಗಳಲ್ಲಿ ಭೂತಗಳು ತಾವು ಮನುಷ್ಯರಾಗಿದ್ದಾಗ ಅನುಭವಿಸಿದ ಪಡಿಪಾಟಲುಗಳನ್ನು, ಉಂಡ ನೋವುಗಳನ್ನು, ಕಂಡ ಅನ್ಯಾಯಗಳನ್ನು ಬಣ್ಣಿಸುತ್ತಿರುತ್ತವೆ. ಭೂತಗಳ ಈ ಪಾಡ್ದನಗಳು, ಅವುಗಳ ಮುಖದ ಕಡುಕೆಂಪು- ಹಳದಿಯ ಬಣ್ಣಗಳು, ಕಿವಿಗಡಚಿಕ್ಕುವ ಆರ್ಭಟ, ವೀರಾವೇಶದ ನಾಟ್ಯ ಎಲ್ಲವೂ ಒಟ್ಟಂದದಲ್ಲಿ ಜೇಮ್ಸ್ ಸ್ಕಾಟ್ ಹೇಳಿದ 'ಅಸಹಾಯಕರ ಅಸ್ತ್ರ'ದ ಪರಿಕಲ್ಪನೆಯನ್ನೇ ಇನ್ನೊಂದು ರೀತಿಯಲ್ಲಿ ನೆನಪಿಸುತ್ತವೆ. ಭ್ರಷ್ಟಾಚಾರದ ದೈತ್ಯ ಸ್ವರೂಪದ ಎದುರು ಅಸಹಾಯಕರಾದ ಜನ ಸಿಟ್ಟು, ಸೆಡವು, ಜೋಕು, ಪೋಸ್ಟರ್‌ಗಳ ಮೂಲಕ ತಮ್ಮ ಪ್ರತಿಭಟನೆ ದಾಖಲಿಸುತ್ತಿರುವಂತೆ ಅದು ಕೂಡಾ. ಆಧುನಿಕ ಮಾಧ್ಯಮಗಳು, ಅವುಗಳನ್ನು ನಿಯಂತ್ರಿಸುವ ಸರ್ಕಾರಗಳು, ಆಳುವ ಪಕ್ಷಗಳ ಅಡಿಯಾಳುಗಳು ರಂಗಿನಾಡಂಬರದಲ್ಲಿ-ಶಬ್ದಗಳಾಡಂಬರದಲ್ಲಿ ಸತ್ಯವನ್ನು ಮುಚ್ಚಿಡಲು ಪ್ರಯತ್ನಿಸಬಹುದು. ಆದರೆ, ಸತ್ಯವು ಜನಸಾಮಾನ್ಯರ ಆಡುಮಾತುಗಳಲ್ಲಿ ಪದೇ ಪದೇ ಪುನರಾವರ್ತನೆ ಆಗುತ್ತಿರುತ್ತದೆ.



## ಚುರುಮುರಿ



### ಬರಿ ಓಳು, ಬರಿ ಓಳು

• ಲಿಂಗರಾಜು ಡಿ.ಎಸ್.

**'ವಿಧಾನಸಭೆ** ಚುನಾವಣೆಯ ಟಿಕೆಟ್ ಆಕಾಂಕ್ಷಿಗಳು ದೀವಳಿಗೆ ಹಬ್ಬಕ್ಕೆ ಮನೆ ಮನೆಗೋಗಿ ಉಡುಗೊರೆ ಕೊಡ್ತಾವ್ರಂತೆ ಸಾ' ಅಂತ ಸುದ್ದಿ ಹೇಳಿದೆ.

'ಈಗ ಉಡುಗೊರೆ ಇಟ್ವಾಡುಸ್ತರೆ. ಗೆದ್ದ ಮೇಲೆ ಏನನ್ನಾ ಕೇಳಕ್ಕೋದ್ರೆ ಕೆನ್ನೆಗೆ ವಡಿತರೆ' ಅಂತು ಯಂಟಪ್ಪಣ್ಣ.

'ಸರ್ಕಾರಿ ಸ್ಕೂಲಲ್ಲಿ ನೂರು ರೂಪಾಯಿ ಉಡುಗೊರೆ ಕೊಡಬೇಕು ಅಂತ ಆಡ್ರು ಹೊಂಡುಸಿದ್ದು ಸರ್ಕಾರಕ್ಕೆ ಗೊತ್ತೇ ಇರಲಿಲ್ಲ ಅಂತ ನಾಗಣ್ಣ ಓಳು ಬುಟ್ಟವ್ರೆ ಪಾಪ' ಚಂದ್ರು ಹುಸಿ ಪಟಾಕಿ ಹಾರಿಸಿದ.

'ಎಷ್ಟು ದೊಡ್ಡೋರಾದ್ರೂ ರಾಜಕಾಲುವೆ ಒತ್ತುವರಿ ತೆರವು ಮಾಡದೇಯ ಅಂತ್ಲೂ ನಾಯಕಮಣಿಗಳು ಓಳು ಬುಟ್ಟವ್ರೆ' ಅಂತಂದೆ.

'ದಿನಕ್ಕೊಬ್ರು ಸಾಯ್ತಾವ್ರೆ ರೋಡು ಗುಂಡಿ ಮುಚ್ರೀ ಅಂದ್ರೆ, ವರದಿ ತರಿಸಿ ಕ್ರಮ ತಗತೀವಿ ಅಂತ ಓಳು ಬುಡ್ತರೆ. ಕೋರ್ಟೂ ತಾರಾಮಾರ ಉಗೀತಪ್ಪ. ಒರೆಸಿಗ್ಯಂಡು ದಿಮ್ಮಗೆ ಕುಂತವ್ರೆ' ಅಂತು ಯಂಟಪ್ಪಣ್ಣ.

'ಇದೇನು ಕಂಡ್ರಿ ಸಾ, ರಾಜಕಾಲುವೆ ಹೂಳೆತ್ತಕ್ಕೆ ಅಂತ್ಲೇ ಪಾಲಿಕೆ ಐನೂರು ಕೋಟಿ ಖರ್ಚು ಮಾಡ್ಯದಂತೆ!' ಅಂತಂದ ಚಂದ್ರು.

'ರಸ್ತೇಲಿ ಹೂಳೆತ್ತಿದ್ಕೆ ಗುಂಡಿ ಆಗ್ಯದೆ ಕಪ್ಪಾ. ಮಳೆ ನಿಂತ ಮ್ಯಾಲೆ ಸೈತಾನ್ ಮಿಶೀನ್ ತಂದು ಎಲ್ಲ ಗುಂಡಿ ಮುಚ್ತೀವಿ ಅಂತ ಓಳು ಬುಡ್ತಲೇ ಬಂದವ್ರಲ್ಲ' ಯಂಟಪ್ಪಣ್ಣ ಬಾಯ ಮ್ಯಾಲೆ ಬೆಳ್ಳು ಮಡಗಿತು.

'ಹ್ಞೂಂಕನೇಳ್ಲಾ, ಹಿಂದೆ ಒಬ್ಬರು ಪಾಲಿಕೇಲಿ ಇನ್ನೂರು ಕೋಟಿ ರೂಪಾಯಿ ಹೂಳೆತ್ತಿ ಹೊಂಟೋದ್ರು. ಮಣ್ಣು ಎಲ್ಲೋತೋ ಗೊತ್ತಿಲ್ಲ! ಹೂಳೆತ್ತೋ ಕೆಲಸ ಅಂದ್ರೆ 'ನಾನು ಮೊದಲು' ಅಂತ ಕ್ಯೂ ನಿಂತುಗತ್ತರಂತೆ ಪಾಲಿಕೆ ಜನ' ತುರೇಮಣೆ ಬಾಣ ಬುಟ್ಟರು.

'ಇವುರ ತಲೆ ಒಳಗೇ ಹೂಳು ತುಂಬ್ಯದೆ' ಅಂತು ಯಂಟಪ್ಪಣ್ಣ.

'ಈಗ ಹೂಳೆತ್ತೋ ಸರದಿ ಮುಂದುವರೆಸಿರೋ ಚೋರಾಗ್ರಣಿಗಳಿಗೆ ಏನಂತೀರಾ ಸಾ?' ಕೇಳಿದೆ.

'ಹೂಳ್ಪಡೆಯಪ್ಪುದು ಕಾಣಾ ಮಹಾ ಮೌಢ್ಯರಂಗದೊಳ್!'

ತುರೇಮಣೆ ಮತಾಪು ಹಾರಿಸಿದರು.

## ಸಂಗತ

# ಬಂದಿದೆ ಗ್ರಹಣ, ವೀಕ್ಷಿಸಿ, ಸಂಭ್ರಮಿಸಿ

### ತೊರೆಯಿರಿ ಮೌಢ್ಯ, ಅರಿಯಿರಿ ವೈಜ್ಞಾನಿಕ ಮಾಹಿತಿ

• ಈ.ಬಸವರಾಜು

**ಇಂದು** (ಮಂಗಳವಾರ) ಪಾರ್ಶ್ವ ಸೂರ್ಯಗ್ರಹಣ ಸಂಭವಿಸಲಿದೆ. ವಿಶ್ವದ ಕೆಲವೆಡೆ ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸಲಿರುವ ಈ ಪಾರ್ಶ್ವ ಸೂರ್ಯಗ್ರಹಣವು ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಸುಮಾರು ಶೇ 15ರಷ್ಟು ಪ್ರಮಾಣದಲ್ಲಿ ಗೋಚರಿಸಲಿದೆ. ಸಂಜೆ 5.12ಕ್ಕೆ ಪ್ರಾರಂಭವಾಗಿ 5.49ಕ್ಕೆ ಮುಕ್ತಾಯವಾಗಲಿದೆ. 2019ರ ಡಿಸೆಂಬರ್‌ನಲ್ಲಿ ಸಂಭವಿಸಿದ ಪೂರ್ಣ ಕಂಕಣ ಸೂರ್ಯಗ್ರಹಣ ಬಹಳಷ್ಟು ಸದ್ದು ಮಾಡಿತ್ತು ಮತ್ತು ಜನರು ದೊಡ್ಡ ಸಂಖ್ಯೆಯಲ್ಲಿ ವೀಕ್ಷಿಸಿ ಸಂತಸಪಟ್ಟಿದ್ದರು.

ಗ್ರಹಣ ಎಂದಕೂಡಲೇ ಕೆಲವರು ಈಗಲೂ ಭಯ, ಆತಂಕಕ್ಕೆ ಒಳಗಾಗುತ್ತಾರೆ. ಈ ಸಂಬಂಧ ತಿಳಿವಳಿಕೆ ಮೂಡಿಸುವ ಪ್ರಯತ್ನಗಳು ಸಾಗಿವೆ. ಗ್ರಹಣ ವೀಕ್ಷಣೆ ಹಾಗೂ ಆ ಸಮಯದಲ್ಲಿ ಆಹಾರ ಸೇವನೆಯಂಥ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಜನವಿಜ್ಞಾನ ಸಂಘಟನೆಗಳು 1994ರಿಂದಲೂ ನಡೆಸುತ್ತಿವೆ. ಇಂತಹ ಪ್ರಯತ್ನಗಳು ತಕ್ಕಮಟ್ಟಿಗೆ ಫಲ ಕೊಟ್ಟಿವೆ. ಈಗ ಗ್ರಹಣ ಎಂದಾಕ್ಷಣ ಅದರಲ್ಲಿಯೂ ಸೂರ್ಯಗ್ರಹಣ ಎಂದಕೂಡಲೇ 'ಗ್ರಹಣ ವೀಕ್ಷಿಸುವ ಕನ್ನಡಕಗಳಿವೆಯೇ?' ಎಂಬ ಕರೆಗಳು ಬರುತ್ತವೆ. ಆದರೂ ಸೂರ್ಯಗ್ರಹಣ ಎನ್ನುವುದು ಅಪಾಯದ ಸಂಕೇತ, ಕೇಡಿನ ಸಂಕೇತ ಎಂದು ಹೇಳುವವರು ಈಗಲೂ ನಮ್ಮ ನಡುವೆ ಇದ್ದಾರೆ. ಪ್ರಕೃತಿಯಲ್ಲಿ ಸಂಭವಿಸುವ ವಿಕೋಪಗಳಿಗೂ ಗ್ರಹಣಗಳಿಗೂ ತಳುಕು ಹಾಕಿ ಭಯ ಉಂಟು ಮಾಡುವವರ ಸಂಖ್ಯೆ ಕಡಿಮೆ ಆಗಿದೆಯಾದರೂ ಅವರ ಹಾವಳಿ ಸಂಪೂರ್ಣವಾಗಿ ನಿವಾರಣೆ ಆಗಿಲ್ಲ.

ಸೂರ್ಯಗ್ರಹಣದಲ್ಲಿ ಪಾರ್ಶ್ವ, ಸಂಪೂರ್ಣ ಹಾಗೂ ಕಂಕಣ ಸೂರ್ಯಗ್ರಹಣ ಎಂಬ ಮೂರು ವಿಧಗಳಿವೆ. ಸಂಪೂರ್ಣ ಸೂರ್ಯಗ್ರಹಣದ ಸಂದರ್ಭದಲ್ಲಿ ಚಂದ್ರನು ಸೂರ್ಯನನ್ನು ಸಂಪೂರ್ಣವಾಗಿ ಮರೆಮಾಡುವುದರಿಂದ ಹಗಲಿನಲ್ಲೂ ಕತ್ತಲೆಯ ವಾತಾವರಣ ಉಂಟಾಗುತ್ತದೆ. ಇದೇ ಸಂದರ್ಭದಲ್ಲಿ ಡೈಮಂಡ್ ರಿಂಗ್‌ನಂತಹ ದೃಶ್ಯಗಳನ್ನು ವೀಕ್ಷಿಸಲು ಸಾಧ್ಯವಾಗುತ್ತದೆ. ಸಂಪೂರ್ಣ ಸೂರ್ಯಗ್ರಹಣ ಉಂಟಾಗುವ ಮೊದಲು ಅದು ಪಾರ್ಶ್ವ ಸೂರ್ಯಗ್ರಹಣವೂ ಆಗಿರುತ್ತದೆ. ಕಂಕಣ ಸೂರ್ಯಗ್ರಹಣ ಸಂಭವಿಸಿದಾಗ ಚಂದ್ರನು ಸೂರ್ಯನನ್ನು ಸಂಪೂರ್ಣ ಮರೆ ಮಾಡದೆ ಕೇಂದ್ರ ಭಾಗವನ್ನು ಮಾತ್ರ ಆವರಿಸಿಕೊಂಡು ಸುತ್ತಲ ಪ್ರದೇಶವನ್ನು ಹಾಗೆಯೇ ಬಿಡುವ ಕಾರಣ, ಅದು ಸಹ ಒಂದು ಹೊಳೆಯುವ ಉಂಗುರದಂತೆ ಕಾಣುತ್ತದೆ. ಇದು ಸಂಭವಿಸುವ ಮೊದಲಿಗೆ ಅದು ಪಾರ್ಶ್ವ ಗ್ರಹಣವೂ ಆಗಿರುತ್ತದೆ.

2019ರ ಡಿ. 26ರಂದು ಕೊಡಗಿನಲ್ಲಿ ಸಂಪೂರ್ಣ ಕಂಕಣ ಸೂರ್ಯಗ್ರಹಣ ಗೋಚರವಾಗಿತ್ತು. ಆ ದಿನ ರಾಜ್ಯ, ದೇಶ, ವಿದೇಶದ ಖಗೋಳಾಸಕ್ತರು ಕೊಡಗಿಗೆ ಭೇಟಿ ನೀಡಿ ಗ್ರಹಣದ ವೀಕ್ಷಣೆ, ಸಂಭ್ರಮ, ಅಧ್ಯಯನ ಕೈಗೊಂಡಿದ್ದರು. ವಿಜ್ಞಾನ ಸಂಘಟನೆಗಳು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದವು. ಕೊಡಗು ಜಿಲ್ಲಾಡಳಿತವೂ ಈ ಕಂಕಣ ಸೂರ್ಯಗ್ರಹಣ ವೀಕ್ಷಣಾ ಕಾರ್ಯಕ್ರಮಕ್ಕೆ ನೆರವಾಗಿತ್ತು. ಸೂರ್ಯ, ಭೂಮಿ, ಚಂದ್ರರ ಚಲನೆಯಿಂದಾಗಿ ಗ್ರಹಣಗಳು ಸಂಭವಿಸುತ್ತವೆ, ಈ ಚಲನೆಯ ಸಂದರ್ಭದಲ್ಲಿ ಭೂಮಿ ಮತ್ತು ಸೂರ್ಯನ ನಡುವೆ ಚಂದ್ರ ಬಂದಾಗ ಸೂರ್ಯಗ್ರಹಣ ಸಂಭವಿಸುತ್ತದೆ. ಚಂದ್ರನು ಸೂರ್ಯನಿಂದ ಎಷ್ಟು ದೂರ ಇರುತ್ತಾನೆ ಎಂಬುದರ ಮೇಲೆ ಅದು ಸಂಪೂರ್ಣವೋ ಕಂಕಣವೋ ಆಗುತ್ತದೆ. ಅಮಾವಾಸ್ಯೆಯಂದು ಸೂರ್ಯಗ್ರಹಣವೂ ಹುಣ್ಣಿಮೆಯ ದಿನ ಚಂದ್ರಗ್ರಹಣವೂ ಸಂಭವಿಸುತ್ತದೆ.

ಗ್ರಹಣದ ವೈಜ್ಞಾನಿಕ ಹಿನ್ನೆಲೆ ತಿಳಿದಿದ್ದರೂ ಶಾಲಾ ಪಠ್ಯಪುಸ್ತಕದಲ್ಲಿಯೂ ಈ ಬಗ್ಗೆ ಮಾಹಿತಿ ಇದ್ದರೂ ಗ್ರಹಣದ ಬಗ್ಗೆ ಜನರಲ್ಲಿ ಭಯ, ಆತಂಕ ಬೇರುಬಿಟ್ಟಿದೆ. ಆಗಿಂದಾಗ್ಗೆ ಸಂಭವಿಸುವ ಇಂಥ ಗ್ರಹಣಗಳ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಹಾಗೂ ವೈಜ್ಞಾನಿಕ ದೃಷ್ಟಿಕೋನ ಮೂಡಿಸುವುದು ಅಗತ್ಯ.



ಗ್ರಹಣದ ಸಂದರ್ಭದಲ್ಲಿ ಆಹಾರ ವಿಷಮಯವಾಗುತ್ತದೆ, ಆದಕಾರಣ ಆಹಾರ ಹಾಗೂ ನೀರನ್ನು ಹೊರಗೆ ಚೆಲ್ಲಬೇಕೆಂದು ಹೇಳುವವರು ಇದ್ದಾರೆ. ಅಂಥವರಿಗೆ ಕೆರೆ, ಟ್ಯಾಂಕ್‌ಗಳ ನೀರಿನ ಬಗ್ಗೆ ವಿವರಿಸಿದರೆ ತಿಳಿವಳಿಕೆ ಮೂಡಬಹುದು. ಕೆಲವು ನಕ್ಷತ್ರದವರಿಗೆ ದೋಷವಿದೆ ಎಂದು ಪರಿಹಾರ ಸೂಚಿಸುವವರೂ ಇದ್ದಾರೆ. ಅದನ್ನು ನಂಬುವ ಮೊದಲು ಅದರ ಬಗ್ಗೆ ಚಿಂತನೆ ಮಾಡುವುದು ಅಪೇಕ್ಷಣೀಯ. ಮನುಷ್ಯನಿಗೂ ಸಾವಿರಾರು ಬೆಳಕಿನ ವರ್ಷಗಳ ದೂರವಿರುವ ನಕ್ಷತ್ರಗಳಿಗೂ ನಿಜವಾಗಲೂ ಸಂಬಂಧವಿದೆಯೇ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಸೂರ್ಯಗ್ರಹಣವನ್ನು ಬರಿಗಣ್ಣಿನಿಂದ ನೋಡುವುದು ಕಣ್ಣಿಗೆ ಹಾನಿಯುಂಟು ಮಾಡುತ್ತದೆ. ಆದ್ದರಿಂದ ಗ್ರಹಣವನ್ನು ಸುರಕ್ಷಿತ ಕನ್ನಡಕಗಳ ಮೂಲಕವೇ ವೀಕ್ಷಿಸಬೇಕು. ಈ ಬಾರಿ, 2019ರಂತೆ ದೊಡ್ಡ ಪ್ರಮಾಣದಲ್ಲಿ ಸುರಕ್ಷಿತ ಕನ್ನಡಕಗಳು (ಸೋಲಾರ್ ಫಿಲ್ಟರ್ಸ್) ಲಭ್ಯವಿಲ್ಲದಿದ್ದರೂ ಈ ಹಿಂದೆ ಸಂಗ್ರಹಿಸಿದ್ದ ಕನ್ನಡಕಗಳು ಸುರಕ್ಷಿತ ಸ್ಥಿತಿಯಲ್ಲಿದ್ದರೆ ಅವನ್ನೇ ಉಪಯೋಗಿಸಬಹುದು. ಸಂಜೆಯ ಸಮಯ ಹಾಗೂ ಮೋಡದ ಸಮಸ್ಯೆ ಇದ್ದರೂ ತಯಾರಾಗಿರುವುದು ಒಳಿತು.

ಪಾರ್ಶ್ವವಿರಲಿ, ಪೂರ್ಣವಿರಲಿ, ಕಂಕಣವಿರಲಿ, ಗ್ರಹಣದ ಬಗ್ಗೆ ವೈಜ್ಞಾನಿಕ ಮಾಹಿತಿ ತಿಳಿದುಕೊಂಡು ಸುರಕ್ಷಿತವಾಗಿ ವೀಕ್ಷಿಸುವ, ಗ್ರಹಣದ ಸಂದರ್ಭದಲ್ಲಿ ಆಹಾರ ಉತ್ಸವವನ್ನು ನಡೆಸುವ ಮೂಲಕ ಸೂರ್ಯೋತ್ಸವ ನಡೆಯಲಿ, ತನ್ಮೂಲಕ ವೈಜ್ಞಾನಿಕ ಚಿಂತನೆ ಹರಡಿ, ಜನರಲ್ಲಿ ಅರಿವು ಹೆಚ್ಚಾಗಲಿ, ಮೌಢ್ಯಾಚರಣೆಗಳು ದೂರವಾಗಲಿ.

ಲೇಖಕ: ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ

## ವಾಚಕರ ವಾಣಿ

### ಗಂಟು ರೋಗ: ಹೆಚ್ಚಿನ ಸ್ಪಂದನ ಅಗತ್ಯ

ಮಧ್ಯ ಕರ್ನಾಟಕದಲ್ಲಿ ದೀಪಾವಳಿ ವಿಶೇಷವೆಂದರೆ, ದನಕರುಗಳನ್ನು ಸಿಂಗರಿಸಿ, ಪೂಜಿಸಿ ಮೆರವಣಿಗೆ ಮಾಡುವುದು. ಹೋರಿಗಳಿಗೆ ಕೊಬ್ಬರಿ ಕಟ್ಟಿ ಪರ್ಸಿಯಲ್ಲಿ (ಹೋರಿಗಳನ್ನು ಬಿಡುವ ಸ್ಥಳ) ಬಿಟ್ಟು ಖುಷಿಪಡುವುದು. ಇನ್ನೂ ವಿಶೇಷವೆಂದರೆ, ಇಂತಹ ಸ್ಪರ್ಧೆಗೆ ಬಹುಮಾನಗಳು ಇರುತ್ತವೆ.

ಈ ಹಬ್ಬವು ಕೊರೊನಾದ ಕರಿಛಾಯೆಯಿಂದ ಈ ಹಿಂದಿನ ಎರಡು ವರ್ಷ ರಂಗು ಕಳೆದುಕೊಂಡಿತ್ತು. ಈಗ ಕೊರೊನಾ ಬಾಧೆ ಇಲ್ಲ. ಆದರೆ ರಾಸುಗಳಿಗೆ ಕಾಣಿಸಿಕೊಂಡ ಗಂಟು ರೋಗವು ಉಲ್ಬಣಿಸುವ ಮೂಲಕ ಹಬ್ಬದ ಸಂಭ್ರಮವನ್ನು ಕಿತ್ತುಕೊಂಡಿದೆ. ಸರ್ಕಾರ ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ. ಇನ್ನೂ ಹೆಚ್ಚಿನ ಸ್ಪಂದನ ಅಗತ್ಯ. ಔಷಧೋಪಚಾರವು ತ್ವರಿತವಾಗಿ ಸಿಗುವಂತೆ ಆಗಬೇಕು.

**ಶೈಲಾ ಭ. ಕೊಪ್ಪದ,** ಉಪ್ಪುಣಸಿ, ಹಾನಗಲ್

### ಜಾರಿಕೊಳ್ಳುವ ಜಾಣ ನಡೆ!

ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳ ನಿರ್ವಹಣಾ ವೆಚ್ಚ ಸರಿದೂಗಿಸುವುದಕ್ಕಾಗಿ ಮಕ್ಕಳ ಪೋಷಕರಿಂದ ದೇಣಿಗೆ ರೂಪದಲ್ಲಿ ಪ್ರತೀ ತಿಂಗಳು ₹ 100 ಸಂಗ್ರಹಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಅನುಮತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಹೊರಡಿಸಿದ್ದ ಸುತ್ತೋಲೆಯನ್ನು ಹಿಂದಕ್ಕೆ ಪಡೆದಿರುವುದು ಸ್ವಾಗತಾರ್ಹ. ಆದರೆ ಈ ಸಂಬಂಧ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ನೀಡಿರುವ ಹೇಳಿಕೆಯನ್ನು ಒಪ್ಪಲಾಗದು.

ತಮ್ಮ ಗಮನಕ್ಕೆ ತಾರದೆ ಆ ಸುತ್ತೋಲೆಯನ್ನು ಹೊರಡಿಸಲಾಗಿತ್ತು ಎಂದು ಸಚಿವರು ಹೇಳಿದ್ದಾರೆ. ಇದು, ಜಾರಿಕೊಳ್ಳುವ ಜಾಣತನದ ನಡೆ. ಸಂಬಂಧಪಟ್ಟ ಸಚಿವರ ಗಮನಕ್ಕೇ ತಾರದೆ ಇಂತಹ ಪ್ರಮುಖ ನಿರ್ಧಾರವನ್ನು ಅಧಿಕಾರಿಗಳೇ ಕೈಗೊಳ್ಳುತ್ತಾರೆ ಎನ್ನುವುದನ್ನು ನಂಬಲಿಕ್ಕೆ ಸಾಧ್ಯವಿಲ್ಲ.

**ಟಿ.ಕೆ. ಸುರೇಶ್,** ಹಾಸನ

### ಭಾಷೆ ಎಂಬ ಬೇರಿಗೆ ಬೇಕು ಪೋಷಣೆ

ಕರ್ನಾಟಕ ಸರ್ಕಾರ ಪ್ರಾಯೋಜಿತ ಮಾತಾಡ್ ಮಾತಾಡ್ ಕನ್ನಡ, ಕೋಟಿ ಕಂಠ ಗಾಯನ ಇವು ಕನ್ನಡದ ಭಾವನೆಗೆ ಸಂಬಂಧಿಸಿದ ಕಾರ್ಯಕ್ರಮಗಳು. ಇವುಗಳನ್ನು ಆಯೋಜಿಸಿದ್ದರ ಬಗ್ಗೆ ತಕರಾರು ಇಲ್ಲ. ಆದರೆ, ಭಾಷೆಯ ಬೆಳವಣಿಗೆಗೆ ಈಗ ಬೇಕಾಗಿರುವುದು ದೂರದೃಷ್ಟಿಯ ಕಾರ್ಯಕ್ರಮಗಳು.

ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳಿಗೆ ನಡೆಯುವ ಎಲ್ಲಾ ನೇಮಕಾತಿ ಪರೀಕ್ಷೆಗಳನ್ನೂ ಕನ್ನಡದಲ್ಲಿ ಬರೆಯಲು ಅವಕಾಶ ದೊರೆಯಬೇಕು. ಸರ್ಕಾರಿ ಕನ್ನಡ ಶಾಲೆಗಳ ಸಬಲೀಕರಣ ಆಗಬೇಕು. ಕೊನೇಪಕ್ಷ ಪ್ರಾಥಮಿಕ ಶಿಕ್ಷಣದ ಹಂತದಲ್ಲಾದರೂ ಕನ್ನಡ ಮಾಧ್ಯಮದ ಬೋಧನೆ ಕಡ್ಡಾಯವಾಗಬೇಕು. ಇಂತಹವು ಕನ್ನಡದ, ಕನ್ನಡಿಗರ ಬದುಕಿಗೆ ಸಂಬಂಧಿಸಿದ ವಿಷಯಗಳು. ಇವುಗಳ ಬಗ್ಗೆ ದೃಢ ನಿಲುವು ತಳೆಯುವ ತುರ್ತು ಇದೆ. ಭಾಷೆಗೆ ಭಾವನೆಯೂ ಬೇಕು ಬದುಕೂ ಬೇಕು. ಬರೀ ಭಾವನೆಗಳಿಂದ ಭಾಷೆ ಉಳಿಸುತ್ತೇವೆಂದು ಹೊರಡುವುದು ಬೇರುಗಳನ್ನು ಕಡಿದು ಮರ ಉಳಿಸುವ ವ್ಯರ್ಥ ಪ್ರಯತ್ನ ಅಷ್ಟೇ! ಕನ್ನಡವು ಅನ್ನದ ಭಾಷೆಯಾಗಬೇಕು. ಆಗಮಾತ್ರ ಭಾಷೆಯು ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ.

**ಗಿರೀಶ್ ಮತ್ತೇರ,** ಯರಗಟ್ಟಿಹಳ್ಳಿ, ಚನ್ನಗಿರಿ

### ಅದಂತೂ ನಮ್ಮನ್ನು ನೋಡುತ್ತಿರುತ್ತದೆ!

ಸಚಿವ ಸೋಮಣ್ಣ ಅವರು ಕಾರ್ಯಕ್ರಮವೊಂದರಲ್ಲಿ ಸಮಸ್ಯೆಯನ್ನು ಹೇಳಿಕೊಳ್ಳಲು ಬಂದಿದ್ದ ಮಹಿಳೆಯ ಕೆನ್ನೆಗೆ ಹೊಡೆದಿರುವುದು ಚಿತ್ರ, ವಿಡಿಯೊಗಳಲ್ಲಿ ಸ್ಪಷ್ಟವಾಗಿದೆ. ಚೋದ್ಯವೆಂದರೆ, ಕೆನ್ನೆಗೆ ಹೊಡೆದವರು ಮತ್ತು ಹೊಡೆಸಿಕೊಂಡವರು ಇಬ್ಬರೂ ಇದನ್ನು ನಿರಾಕರಿಸುತ್ತಿರುವುದು.

'ಕಾರ್ಯಭಾರದ ಒತ್ತಡದಲ್ಲಿ ತಾಳ್ಮೆ ಕಳೆದುಕೊಂಡು ಆಕೆಯ ಕೆನ್ನೆಗೆ ಹೊಡೆದುಬಿಟ್ಟೆ, ಹೊಡೆಯಬಾರದಿತ್ತು' ಎಂದು ಸಚಿವರು ಹೇಳಿದ್ದರೆ ಅವರ ಘನತೆಗೆ ಕುಂದು ಉಂಟಾಗುತ್ತಿರಲಿಲ್ಲ. ಆ ಹೆಣ್ಣುಮಗಳೂ 'ಸಚಿವರು ನನ್ನ ಕೆನ್ನೆಗೆ ಹೊಡೆದರು ಎಂದು ತಪ್ಪಾಗಿ ಆರೋಪಿಸಲಾಗಿದೆ' ಎಂದು ಅಪ್ಪಟ ಸುಳ್ಳು ಹೇಳುವುದರ ಬದಲು ಒಪ್ಪಿಕೊಂಡುಬಿಟ್ಟಿದ್ದರೆ, ಆಕೆಯ ಪರವಾಗಿ ದನಿ ಎತ್ತಿದ ಜನರಿಗೆ ಇಷ್ಟೊಂದು ಭ್ರಮನಿರಸನವಾಗುತ್ತಿರಲಿಲ್ಲ. ನ್ಯಾಯ, ಅನ್ಯಾಯಗಳನ್ನು ಮೇಲಿನವನು (ದೇವರು) ನೋಡುತ್ತಾನೋ ಬಿಡುತ್ತಾನೋ ಗೊತ್ತಿಲ್ಲ. ಆದರೆ ಸಿ.ಸಿ. ಟಿ.ವಿ ಕ್ಯಾಮೆರಾವೋ ಮೊಬೈಲ್ ಕ್ಯಾಮೆರಾವೋ ನಮ್ಮನ್ನು ನೋಡುತ್ತಿರುತ್ತದೆ ಎಂಬ ಎಚ್ಚರ ನಮಗಿರಬೇಕು.

**ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ,** ಬೆಂಗಳೂರು

### ಮಣ್ಣಿನ ಹಣತೆ ಮನೆ ಬೆಳಗಲಿ

ಮಣ್ಣಿನ ದೀಪಗಳಿಗೆ ತಮ್ಮದೇ ಆದ ಮಹತ್ವವಿದೆ. ಇತ್ತೀಚಿನ ವರ್ಷಗಳಲ್ಲಿ ರಾಸಾಯನಿಕ ವಸ್ತುಗಳನ್ನು ಬಳಸಿ, ಯಂತ್ರದಿಂದ ತಯಾರಾಗುವ ದೀಪಗಳಿಗೆ ಹೆಚ್ಚಿನ ಬೇಡಿಕೆ ಇರುವುದು ಕಂಡುಬಂದಿದೆ. ಇದೇ ವೇಳೆ ಮಣ್ಣಿನ ದೀಪ ಮಾಡುತ್ತಿದ್ದ ಕುಂಬಾರರ ಕುಲಕಸುಬಿಗೆ ಹೊರ ರಾಜ್ಯಗಳ ಮೌಲ್ಡ್ ದೀಪಗಳ ಪೈಪೋಟಿ ಭಾರಿ ಹೊಡೆತ ನೀಡಿದೆ ಎಂದು ಹೇಳಲಾಗುತ್ತಿದೆ.

ಕೊರೊನಾ ಸೋಂಕಿನ ಕಾರಣದಿಂದಾಗಿ ಹಲವಾರು ದೇಸಿ ಉದ್ಯಮಗಳಿಗೆ ಪೆಟ್ಟು ಬಿದ್ದಿದೆ. ಅವುಗಳ ಪೈಕಿ ಮಣ್ಣಿನ ದೀಪಗಳನ್ನು ತಮ್ಮ ಅದ್ಭುತವಾದ ಕೈಚಳಕದಿಂದ ತಯಾರಿಸುವ ಕುಂಬಾರಿಕೆಯೂ ಒಂದು. ಹಿಂದೆ ದೀಪಾವಳಿಯಲ್ಲಿ 5 ಲಕ್ಷ ಮಣ್ಣಿನ ಹಣತೆಗಳಿಗೆ ಇರುತ್ತಿದ್ದ ಬೇಡಿಕೆ ಈಗ 50 ಸಾವಿರಕ್ಕೆ ಇಳಿದಿದೆ ಎಂಬುದು ಈ ಉದ್ಯಮದಲ್ಲಿ ತೊಡಗಿಸಿಕೊಂಡವರ ಅಳಲು. ಕುಂಬಾರಿಕೆ ಕುಲಕಸುಬನ್ನು ನೂರಾರು ಕುಟುಂಬಗಳು ಅವಲಂಬಿಸಿವೆ. ಇಂತಹ ಸಾಂಪ್ರದಾಯಿಕ ಶೈಲಿಯ ಕುಲಕಸುಬನ್ನು ಪ್ರೋತ್ಸಾಹಿಸಲು ಪ್ರತಿಯೊಬ್ಬರೂ ಮಣ್ಣಿನ ದೀಪಗಳನ್ನೇ ಬಳಸಬೇಕು. ಇದು ಅವರ ಮನೆಗಳನ್ನು ಮಾತ್ರವಲ್ಲದೆ ಈ ಕುಲಕಸುಬನ್ನು ನೆಚ್ಚಿಕೊಂಡಿರುವ ನೂರಾರು ಕುಟುಂಬಗಳ ಮನೆಗಳನ್ನೂ ಬೆಳಗುತ್ತದೆ.

**ಕೆ.ವಿ.ವಾಸು,** ಮೈಸೂರು

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

ಭಾರತ ಮೂಲದ ರಿಷಿ ಸುನಕ್ ಅವರು ಬ್ರಿಟನ್‌ನ ಪ್ರಧಾನಿಯಾಗಿ ಆಯ್ಕೆ ಆಗಿದ್ದಾರೆ. ಭಾರತವನ್ನು ವಸಾಹತನ್ನಾಗಿ ಮಾಡಿಕೊಂಡಿದ್ದ ದೇಶದ ಮುಖ್ಯಸ್ಥರಾಗಿ ಭಾರತ ಮೂಲದವರು ಆಯ್ಕೆ ಆಗಿರುವುದು ದೇಶಕ್ಕೆ ದೊಡ್ಡ ಹೆಗ್ಗಳಿಕೆಯ ವಿಚಾರ. ಬ್ರಿಟನ್‌ನಲ್ಲಿ ಮಾತ್ರವಲ್ಲ, ಜಗತ್ತಿನ ಹಲವು ದೇಶಗಳ ಅಧ್ಯಕ್ಷ, ಪ್ರಧಾನಿ ಹುದ್ದೆಯಲ್ಲಿ ಭಾರತ ಮೂಲದವರು ಇದ್ದಾರೆ. ದೇಶಗಳ ಉಪಮುಖ್ಯಸ್ಥರಾಗಿ, ಸಚಿವರಾಗಿ, ಸಂಸದರಾಗಿಯೂ ಹಲವಾರು ನಾಯಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಕುರಿತ ಒಂದು ನೋಟ ಇಲ್ಲಿದೆ:

# ಜಗದಗಲ ಭಾರತೀಯರ ಬಲ

## ಗಯಾನಾ: ಇರ್ಫಾನ್ ಅಲಿ, ಭರತ್ ಜಗದೇವ್


ಇರ್ಫಾನ್ ಅಲಿ

ಗಯಾನಾ ದೇಶದ ಅತ್ಯುನ್ನತವಾದ ಎರಡು ಹುದ್ದೆಗಳಲ್ಲಿ ಭಾರತ ಮೂಲದವರು ಇದ್ದಾರೆ. ಆ ದೇಶದ ಅಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ ಮತ್ತು ಉಪಾಧ್ಯಕ್ಷ ಭರತ್ ಜಗದೇವ್ ಅವರಿಗೆ ಭಾರತದ ಜತೆಗೆ ನಂಟು ಇದೆ. ಇರ್ಫಾನ್ ಅಲಿ ಅವರ ಹಿರೀಕರು ಭಾರತದಿಂದ ವಲಸೆ ಹೋಗಿ ಗಯಾನಾದಲ್ಲಿ ನೆಲೆಯಾದವರು. ಇರ್ಫಾನ್ ಅವರ ತಾಯಿ ಬಿಬಿ ಶರೀಮಾನ್ ಅವರು ಶಿಕ್ಷಕಿ.

'ಬಾಲಕ ಇರ್ಫಾನ್ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ, ದೇಶದ ಅಧ್ಯಕ್ಷನಾಗುವುದು ತನ್ನ ಗುರಿ ಎಂದಿದ್ದ. ನಾವು ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ, ನಿರಂತರ ಪರಿಶ್ರಮದಿಂದ ಅವನು ಅದನ್ನು ಸಾಧಿಸಿಬಿಟ್ಟ' ಎಂದು ಶರೀಮಾನ್ ಅವರು 2020ರ ಆಗಸ್ಟ್ ಒಂದರಂದು ಇರ್ಫಾನ್ ಅಲಿ ಅವರು ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಹೇಳಿದ್ದರು.

ಇರ್ಫಾನ್ ಅಲಿ ಅಧ್ಯಕ್ಷರಾಗಿ ಆಯ್ಕೆ ಆದಾಗ ಅವರಿಗೆ 40 ವರ್ಷವಾಗಿತ್ತು. ಅವರು ಗಯಾನಾ ದೇಶದ ಮೊದಲ ಮುಸ್ಲಿಂ ಅಧ್ಯಕ್ಷ ಮತ್ತು ಈ ಹುದ್ದೆಗೆ ಏರಿದ ಎರಡನೇ ಅತಿ ಕಿರಿಯ ವ್ಯಕ್ತಿ.

ಭರತ್ ಜಗದೇವ್ ಅವರು 1999ರಲ್ಲಿ ತಮ್ಮ 35ನೇ ವಯಸ್ಸಿನಲ್ಲಿಯೇ ಗಯಾನಾದ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಅತ್ಯಂತ ಕಿರಿಯ ವಯಸ್ಸಿನ ಅಧ್ಯಕ್ಷ ಎಂಬ ಹಿರಿಮೆಗೆ ಅವರು ಪಾತ್ರರಾಗಿದ್ದರು. ನಂತರ, 2001 ಮತ್ತು 2006ರಲ್ಲಿ ಪುನರಾಯ್ಕೆ ಆಗಿದ್ದರು. ಉತ್ತರ ಪ್ರದೇಶದ ಅಮೇಠಿ ಸಮೀಪದ ಒಂದು ಕುಗ್ರಾಮದಲ್ಲಿ ಅವರ ಪೂರ್ವಜರು ನೆಲೆಸಿದ್ದರು. 2003ರಲ್ಲಿ ಜಗದೇವ್ ಅವರು ಈ ಗ್ರಾಮಕ್ಕೆ ಬಂದು, ತಮ್ಮ ಅಜ್ಜ ಮತ್ತು ಇತರ ಸಂಬಂಧಿಕರನ್ನು ಭೇಟಿ ಆಗಿದ್ದರು.

## ಐರ್ಲೆಂಡ್: ಲಿಯೊ ವರಾಡಕರ್



ಐರ್ಲೆಂಡ್‌ನ ಉಪ ಪ್ರಧಾನಿಯಾಗಿರುವ ಲಿಯೊ ವರಾಡಕರ್ ಅವರು ಮಹಾರಾಷ್ಟ್ರ ಮೂಲದವರು. 2017ರಲ್ಲಿ ಐರ್ಲೆಂಡ್ ಪ್ರಧಾನಿಯಾಗಿ ಆಯ್ಕೆಯಾಗಿದ್ದ ಅವರು 2020ರಲ್ಲಿ ರಾಜೀನಾಮೆ ನೀಡಿದ್ದರು. ಇದೇ ಡಿಸೆಂಬರ್‌ನಲ್ಲಿ ಐರ್ಲೆಂಡ್ ಪ್ರಧಾನಿಯಾಗಿ ಮತ್ತೆ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಈಗಿನ ಪ್ರಧಾನಿ ಮೈಕೆಲ್ ಮಾರ್ಟಿನ್ ಅವರೊಂದಿಗೆ 2020ರಲ್ಲಿ ನಡೆದಿದ್ದ ಐತಿಹಾಸಿಕ ಮೈತ್ರಿ ಒಪ್ಪಂದದ ಅನ್ವಯ ಎರಡು ವರ್ಷದ ಅವಧಿಗೆ ಮಾರ್ಟಿನ್ ಅವರು ಪ್ರಧಾನಿಯಾಗಿ ಇರಲಿದ್ದಾರೆ. ಡಿಸೆಂಬರ್‌ನಲ್ಲಿ ವರಾಡಕರ್ ಪ್ರಧಾನಿ ಗದ್ದುಗೆ ಅಲಂಕರಿಸಲಿದ್ದಾರೆ.

ಪ್ರಧಾನಿಯಾಗಿದ್ದಾಗ, 2019ರ ಡಿಸೆಂಬರ್‌ನಲ್ಲಿ ವರಾಡಕರ್ ಅವರು ಭಾರತಕ್ಕೆ ಬಂದಿದ್ದರು. ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಮಾಲ್ವನ್ ತಹಶೀಲ್‌ಗೆ ಸೇರಿದ ವರಾಡ್ ಎಂಬ ತಮ್ಮ ಪೂರ್ವಜರ ಊರಿಗೆ ಒಂದು ದಿನದ ಖಾಸಗಿ ಭೇಟಿ ನೀಡಿದ್ದರು. ವರಾಡಕರ್ ಅವರ ತಂದೆ ಅಶೋಕ್ ವರಾಡಕರ್ ವೃತ್ತಿಯಲ್ಲಿ ವೈದ್ಯರಾಗಿದ್ದು, 1960ರಲ್ಲಿ ಬ್ರಿಟನ್‌ಗೆ ವಲಸೆ ಹೋಗಿದ್ದರು. ಐರಿಷ್ ಮಹಿಳೆಯನ್ನು ಅವರು ವಿವಾಹವಾಗಿದ್ದರು. ವರಾಡಕರ್ ಅವರು ಡಬ್ಲಿನ್‌ನಲ್ಲಿ ಜನಿಸಿದವರು.

## ಅಮೆರಿಕ: ಕಮಲಾ ಹ್ಯಾರಿಸ್



ಅಮೆರಿಕದ ಉಪಾಧ್ಯಕ್ಷೆ ಕಮಲಾದೇವಿ ಹ್ಯಾರಿಸ್ ಅವರ ಕುಟುಂಬದವರು ತಮಿಳುನಾಡು ಮೂಲದವರು. ಚುನಾವಣೆಯಲ್ಲಿ ಗೆದ್ದಾಗ, ಅವರ ಕುಟುಂಬದ ಊರಾದ ತುಳಸೇಂದ್ರಪುರ ಸಮೀಪದ ಪೈಂಗನಾಡಿನಲ್ಲಿ ಸಂಭ್ರಮ ಮನೆಮಾಡಿತ್ತು. ಅವರು, ಅಮೆರಿಕ ಉಪಾಧ್ಯಕ್ಷೆಯಾಗಿ ಆಯ್ಕೆಯಾದ ಮೊದಲ ಮಹಿಳೆಯಾಗಿ ಹೊಸ ಇತಿಹಾಸ ಸೃಷ್ಟಿಸಿದ್ದರು. ಉಪಾಧ್ಯಕ್ಷೆಯಾಗಿ ಚುನಾಯಿತರಾಗುವ ಮುನ್ನ ಅವರು ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ಆಗಿದ್ದರು. ಕಮಲಾ ಅವರ ಅಜ್ಜ ಪಿ.ವಿ. ಗೋಪಾಲನ್ ತಮಿಳುನಾಡಿನವರು. ಅವರ ಪ್ರಗತಿಪರ ಹಾಗೂ ಪ್ರಜಾಪ್ರಭುತ್ವವಾದಿ ಧೋರಣೆಗಳು ಕಮಲಾ ಅವರ ಮೇಲೆ ಪ್ರಭಾವ ಬೀರಿದ್ದವು. ಕಮಲಾ ಅವರ ತಾಯಿ ಶ್ಯಾಮಲಾ ಗೋಪಾಲನ್ ಅವರು ಆರು ದಶಕಗಳ ಹಿಂದೆ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ತೆರಳಿದ್ದರು. ಅಲ್ಲಿ ಅವರು ಜಮೈಕಾ ಮೂಲದ ಡೊನಾಲ್ಡ್ ಹ್ಯಾರಿಸ್ ಎಂಬುವವರನ್ನು ವಿವಾಹವಾಗಿದ್ದರು. 1964ರ ಅಕ್ಟೋಬರ್ 20ರಂದು ಅಮೆರಿಕದ ಓಕ್ಲಂಡ್‌ನಲ್ಲಿ ಕಮಲಾ ಜನಿಸಿದರು. 1986ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪದವಿ ಪಡೆದರು. ಕಮಲಾ ಅವರು ಭಾನುವಾರವಷ್ಟೇ, ಅಮೆರಿಕದ ಹಿಂದೂ ಧರ್ಮೀಯರ ಜೊತೆ ದೀಪಾವಳಿ ಹಬ್ಬ ಆಚರಿಸಿದರು. ಜೊ ಬೈಡನ್ ಅವರ ಅಧಿಕಾರಾವಧಿಯ ಬಳಿಕ ಕಮಲಾ ಅವರು ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಆಯ್ಕೆಯಾಗಲಿದ್ದಾರೆ ಎಂಬ ಮಾತಿದೆ.

## ಸುರಿನಾಮ್: ಚಂದ್ರಿಕಾಪ್ರಸಾದ್ ಸಂತೋಖಿ



ದಕ್ಷಿಣ ಅಮೆರಿಕದ ಸುರಿನಾಮ್ ದೇಶದ ಅಧ್ಯಕ್ಷರಾಗಿ ಭಾರತ ಮೂಲದ ಚಂದ್ರಿಕಾಪ್ರಸಾದ್ ಸಂತೋಖಿ (ಚಾನ್ ಸಂತೋಖಿ) ಅವರು ಆಡಳಿತ ನಡೆಸುತ್ತಿದ್ದಾರೆ. ಪೊಲೀಸ್ ಆಯುಕ್ತರಾಗಿದ್ದ ಸಂತೋಖಿ ಅವರು 2020ರ ಜುಲೈನಲ್ಲಿ ನಡೆದ ಚುನಾವಣೆಯಲ್ಲಿ ಅಭೂತಪೂರ್ವ ಜಯ ಗಳಿಸಿದ್ದರು. ಈ ಚುನಾವಣೆಯಲ್ಲಿ ಡೇಸಿ ಬೌಟರ್ಸ್ ಅವರ ಸರ್ವಾಧಿಕಾರಿ ಆಡಳಿತವನ್ನು ಕೊನೆಗೊಳಿಸಿದ್ದರು. ಡಚ್ಚರ ವಸಾಹತುವಾಗಿದ್ದ ಈ ಪುಟ್ಟ ದೇಶದಲ್ಲಿ ಶೇ 22ರಷ್ಟು ಹಿಂದೂ ಧರ್ಮೀಯರಿದ್ದಾರೆ.

1959ರಲ್ಲಿ ಸುರಿನಾಮ್‌ನ ಕೆಲಿಡರ್ಪ್‌ನಲ್ಲಿ ಜನಿಸಿದ ಸಂತೋಖಿ ಅವರ ಪೂರ್ವಜರು ಬಿಹಾರದವರು. 19ನೇ ಶತಮಾನದಲ್ಲಿ ಕಾರ್ಮಿಕರಾಗಿ ಸುರಿನಾಮ್‌ಗೆ ವಲಸೆ ಹೋಗಿದ್ದರು. ಸಂತೋಖಿ ಅವರು ಮೆಲ್ಲಿಸಾ ಕವಿತಾದೇವಿ ಎಂಬುವರನ್ನು ಹಿಂದೂ ಸಂಪ್ರದಾಯದಂತೆ ವಿವಾಹವಾಗಿದ್ದಾರೆ. ಇದು ಅವರ ಎರಡನೇ ಮದುವೆ. ಕವಿತಾದೇವಿ ಅವರೂ ಪೊಲೀಸ್ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ.

## ಮಾರಿಷಸ್: ಪ್ರವಿಂದ್ ಜಗನ್ನಾಥ್



2019ರಲ್ಲಿ ಮಾರಿಷಸ್ ಪ್ರಧಾನಿಯಾಗಿ ಪ್ರವಿಂದ್ ಜಗನ್ನಾಥ್ ಅವರು ಆಯ್ಕೆಯಾಗುತ್ತಿದ್ದಂತೆಯೇ, ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯ ರಸಡಾ ಪಟ್ಟಣದಲ್ಲಿ ಸಂಭ್ರಮ ಗರಿಗೆದರಿತ್ತು. ಜಗನ್ನಾಥ್ ಪೂರ್ವಜರು ಮಾರಿಷಸ್‌ಗೆ ವಲಸೆ ಹೋಗಿದ್ದರು ಎನ್ನಲಾಗಿದೆ. ಆದರೆ ಅವರ ಊರು ಯಾವುದು ಎಂಬುದು ಖಚಿತವಾಗಿ ಗೊತ್ತಿಲ್ಲ. ರಸಡಾದ ಕೆಲವರು ತಾವು ಜಗನ್ನಾಥ್ ಅವರ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರಾದರೂ ಅದು ಖಚಿತವಿಲ್ಲ. ಮಾರಿಷಸ್‌ನ ಕೆಲವು ಅಧಿಕಾರಿಗಳು ರಸಡಾಕ್ಕೆ ಇತ್ತೀಚೆಗೆ ಭೇಟಿ ನೀಡಿ, ವಂಶಸ್ಥರನ್ನು ಪತ್ತೆಹಚ್ಚಲು ಯತ್ನಿಸಿದ್ದರು. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಗನ್ನಾಥ್ ಅವರ ವಂಶಸ್ಥರು ಒಪ್ಪಂದದ ಕಾರ್ಮಿಕರಾಗಿ ದ್ವೀಪರಾಷ್ಟ್ರಕ್ಕೆ ತೆರಳಿದ್ದರು ಎನ್ನಲಾಗುತ್ತಿದೆ.

ಪ್ರವಿಂದ್ ಅವರ ತಂದೆ ಅನಿರುದ್ಧ ಜಗನ್ನಾಥ್ ಅವರೂ ಮಾರಿಷಸ್‌ನ ಪ್ರಧಾನಿಯಾಗಿ, ಅಧ್ಯಕ್ಷರಾಗಿ ಸುದೀರ್ಘ ಅವಧಿ ಅಧಿಕಾರ ಚಲಾಯಿಸಿದ್ದಾರೆ. 2017ರಲ್ಲಿ ಪ್ರಧಾನಿ ಹುದ್ದೆಯಿಂದ ಕೆಳಗಿಳಿದ ಅವರು, ತಮ್ಮ ಪುತ್ರ ಪ್ರವಿಂದ್ ಅವರಿಗೆ ಅಧಿಕಾರ ವಹಿಸಿದ್ದರು. ಅನಿರುದ್ಧ ಅವರ ಅವಧಿಯಲ್ಲಿ ಮಾರಿಷಸ್ ಪ್ರಗತಿ ಸಾಧಿಸಿತ್ತು. ಅನಿರುದ್ಧ ಕಳೆದ ವರ್ಷ ನಿಧನರಾದರು.

## ಮಾರಿಷಸ್: ಪೃಥ್ವಿರಾಜ ಸಿಂಹ ರೂಪನ್



ಮಾರಿಷಸ್‌ನ ಏಳನೇ ಅಧ್ಯಕ್ಷರಾಗಿ 2019ರಿಂದ ಕಾರ್ಯ ನಿರ್ವಹಿಸುತ್ತಿರುವ ಪೃಥ್ವಿರಾಜ ಸಿಂಹ ರೂಪನ್ ಅವರು ಭಾರತದ ಹಿಂದೂ ಆರ್ಯ ಸಮಾಜಕ್ಕೆ ಸೇರಿದ ಕುಟುಂಬದಲ್ಲಿ ಜನಿಸಿದ್ದಾರೆ. ಪ್ರದೀಪ್‌ಕುಮಾರ್ ಸಿಂಹ ಎಂದೂ ಅವರನ್ನು ಕರೆಯಲಾಗುತ್ತದೆ. ಸೆಂಟ್ರಲ್ ಲ್ಯಾಂಕ್‌ಶೈರ್ ವಿಶ್ವವಿದ್ಯಾಲಯದಿಂದ 'ಇಂಟರ್‌ನ್ಯಾಷನಲ್ ಬ್ಯುಸಿನೆಸ್ ಲಾ' ವಿಷಯದಲ್ಲಿ ಪದವಿ ಪಡೆದಿದ್ದಾರೆ. ಸಯುಕ್ತಾ ರೂಪನ್ ಅವರನ್ನು ವಿವಾಹವಾಗಿದ್ದಾರೆ. ದಿವ್ಯ, ಜೋತ್ಸ್ನಾ, ಆದಿಷ್ಟಾ ಹಾಗೂ ವೇದಿಶಾ ಮಕ್ಕಳು. 2020ರ ಫೆಬ್ರುವರಿಯಲ್ಲಿ ವಾರಾಣಸಿಗೆ ಕುಟುಂಬ ಸಮೇತ ಖಾಸಗಿ ಭೇಟಿ ನೀಡಿದ್ದರು. ಗೊತ್ತುಪಡಿಸಿದ್ದಕ್ಕಿಂತ ಹೆಚ್ಚು ಭಾರದ ಲಗೇಜ್ ಹೊಂದಿದ್ದಾರೆ ಎಂಬ ಕಾರಣಕ್ಕೆ ಏರ್ ಇಂಡಿಯಾ ವಿಮಾನದ ಸಿಬ್ಬಂದಿ ರೂಪನ್ ಅವರನ್ನು ತಡೆದಿದ್ದು ಸುದ್ದಿಯಾಗಿತ್ತು.

## ಪೋರ್ಚುಗಲ್: ಅಂಟೊನಿಯೊ ಕೋಸ್ಟ



ಅಂಟೊನಿಯೊ ಕೋಸ್ಟ ಅವರು 2015ರಿಂದಲೇ ಪೋರ್ಚುಗಲ್‌ನ ಪ್ರಧಾನಿಯಾಗಿದ್ದಾರೆ. ಅವರ ತಂದೆ ಒರ್ಲಾಂಡೊ ಡಾ ಕೋಸ್ಟ ಅವರು ಗೋವಾದವರು. ಕಾನೂನು ಮತ್ತು ರಾಜಕೀಯ ಶಾಸ್ತ್ರದಲ್ಲಿ ಪದವಿ ಪಡೆದ ಅಂಟೊನಿಯೊ ಅವರನ್ನು 1995ರಲ್ಲಿ ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವರನ್ನಾಗಿ 1995ರಲ್ಲಿ ನೇಮಿಸಲಾಗಿತ್ತು. ಆಗ ಅವರಿಗೆ 34 ವರ್ಷ ವಯಸ್ಸು. ನಾಲ್ಕು ವರ್ಷಗಳ ಬಳಿಕ ಕಾನೂನು ಸಚಿವರಾಗಿ ಅವರಿಗೆ ಬಡ್ತಿ ದೊರಕಿತ್ತು. 2005ರಲ್ಲಿ ಆಂತರಿಕ ವ್ಯವಹಾರಗಳ ಸಚಿವರಾಗಿದ್ದರು. ಆದರೆ, 2006ರಲ್ಲಿ ಈ ಹುದ್ದೆಗೆ ರಾಜೀನಾಮೆ ನೀಡಿ ಲಿಸ್ಬನ್‌ನ ಮೇಯರ್ ಹುದ್ದೆಗೆ ಸ್ಪರ್ಧಿಸಿ ಗೆದ್ದರು. ಬಳಿಕ, 2009 ಮತ್ತು 2013ರಲ್ಲಿ ಪುನರಾಯ್ಕೆ ಆದರು. ಇವರಿಗಿಂತ ಮುಂಚೆ ಪ್ರಧಾನಿಯಾಗಿದ್ದ ಸಾಕ್ರೆಟಿಸ್ ಅವರನ್ನು ಭ್ರಷ್ಟಾಚಾರ ಮತ್ತು ತೆರಿಗೆ ವಂಚನೆ ಆರೋಪದಲ್ಲಿ 2014ರಲ್ಲಿ ಬಂಧಿಸಲಾಗಿತ್ತು. ತೀವ್ರ ಆರ್ಥಿಕ ಹಿಂಜರಿತಕ್ಕೆ ಒಳಗಾಗಿದ್ದ ದೇಶಕ್ಕೆ ಅಂತರರಾಷ್ಟ್ರೀಯ ನೆರವು ನೀಡಲಾಗಿತ್ತು. ಅಂಟೊನಿಯೊ ಅವರು ಪ್ರಧಾನಿಯಾದ ಬಳಿಕ ಅಲ್ಲಿನ ಆರ್ಥಿಕ ಸ್ಥಿತಿ ಸುಧಾರಿಸಿದೆ. ಅಂಟೊನಿಯೊ ಅವರು ಸದಾ ಹಸನ್ಮುಖಿಯಾಗಿಯೇ ಇರುತ್ತಾರೆ.

## ಸಚಿವರಾಗಿರುವವರ ಸಂಖ್ಯೆ ಕಡಿಮೆ ಅಲ್ಲ


ವಿವಿಧ ದೇಶಗಳ ಅಧ್ಯಕ್ಷ, ಪ್ರಧಾನಿ, ಉಪಾಧ್ಯಕ್ಷ ಮತ್ತು ಉಪಪ್ರಧಾನಿಯಾಗಿ ಭಾರತ ಮೂಲದ ಹಲವರು ನಾಯಕರು ಇದ್ದಾರೆ. ಮಹತ್ವದ ಸಚಿವಾಲಯಗಳಲ್ಲಿ ಸಚಿವರಾಗಿ ಕೆಲಸ ಮಾಡುತ್ತಿರುವ ಭಾರತ ಮೂಲದ ಜನರ ಸಂಖ್ಯೆ 60ಕ್ಕೂ ಹೆಚ್ಚು ಇದೆ. ಸುರಿನಾಮ್‌ನ ಹಣಕಾಸು ಸಚಿವ ಅರ್ಮಂದ್ ಅಚಯ್‌ಬರ್ಸಿಂಗ್, ಟ್ರಿನಿಡಾಡ್ ಆ್ಯಂಡ್ ಟೊಬಾಗೊದ ಕಾನೂನು ಸಚಿವ ಫಾರಿಸ್ ಅಲ್ ರವಿ, ಸಿಂಗಪುರದ ವಿದೇಶಾಂಗ ಸಚಿವ ವಿವಿಯನ್ ಬಾಲಕೃಷ್ಣನ್, ಫಿಜಿಯ ಉದ್ಯೋಗ ಮತ್ತು ಕೈಗಾರಿಕಾ ವ್ಯವಹಾರಗಳ ಸಚಿವ ಪರ್ವಿನ್ ಬಾಲಾ, ಪೋರ್ಚುಗಲ್‌ನ ಯೋಜನಾ ಸಚಿವ ನೆಲ್ಸನ್ ಡಿಸೋಜಾ, ದಕ್ಷಿಣ ಆಫ್ರಿಕಾದ ಸಾರ್ವಜನಿಕ ವ್ಯವಹಾರಗಳ ಸಚಿವ ಪ್ರವೀಣ್ ಗೋವರ್ಧನ್ ಮುಖ್ಯರಾಗಿದ್ದಾರೆ. ಮಾರಿಷಸ್‌ನ ಸಚಿವ ಸಂಪುಟದಲ್ಲಿ ಭಾರತದ ಮೂಲದ ಹತ್ತಕ್ಕೂ ಹೆಚ್ಚು ಸಚಿವರು ಇದ್ದಾರೆ.

ವಿವಿಧ ದೇಶಗಳಲ್ಲಿ ಸಚಿವರಾಗಿರುವ ಭಾರತ ಮೂಲದ ಮಹಿಳೆಯರ ಸಂಖ್ಯೆಯೂ ಕಡಿಮೆ ಏನಲ್ಲ. ರೋಜಿ ಅಕ್ಬರ್ ಅವರು ಫಿಜಿಯ ಶಿಕ್ಷಣ ಸಚಿವೆ ಆಗಿದ್ದಾರೆ. ಕೆನಡಾದ ರಕ್ಷಣಾ ಸಚಿವರಾಗಿ ಅನಿತಾ ಆನಂದ್ ಅವರಿದ್ದಾರೆ. ಸುರಿನಾಮ್ ಮತ್ತು ಗಯಾನಾದಲ್ಲಿಯೂ ಭಾರತದ ಮೂಲದ ಹಲವು ಮಹಿಳೆಯರು ಸಚಿವರಾಗಿದ್ದಾರೆ.

ಆಧಾರ: ಇಂಡಿಯಾಸ್ಪೋರಾ ಡಾಟ್ ಆರ್ಗ್, ಬಿಬಿಸಿ, ಬ್ರಿಟಾನಿಕಾ

## ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ




ಸಮಸ್ಯೆ ಹೇಳಿಕೊಳ್ಳಲು ಮುಂದಾದ ಮಹಿಳೆಯ ಕೆನ್ನೆಗೆ ಸಚಿವ ವಿ.ಸೋಮಣ್ಣ ಹೊಡೆದದ್ದು, ಜನಪ್ರತಿನಿಧಿಗಳ ದುರ್ನಡತೆಗೆ ಸಾಕ್ಷಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

## ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 258

### ಮದುವೆ ದಿಬ್ಬಣದಲ್ಲಿ ಗಣಗಳು

ಶಂಕರನ ಆಜ್ಞೆಯಂತೆ ಗಣನಾಯಕರು ಸಂತೋಷದಿಂದ ತಮ್ಮ ತಮ್ಮ ಗಣಸೈನ್ಯವನ್ನು ಕರೆದುಕೊಂಡು ಹೊರಟರು.

ಶಂಖಕರ್ಣನೆಂಬ ಗಣನಾಯಕನು ಹಿಮವಂತನ ನಗರಕ್ಕೆ ತನ್ನ ಕೋಟಿ ಗಣಗಳೊಡನೆ, ಕೇಕರಾಕ್ಷಸ ಹತ್ತುಕೋಟಿ ಗಣಗಳೊಡನೆ ಹೊರಟ. ವಿಕೃತನೆಂಬ ಗಣನಾಯಕ ಎಂಟುಕೋಟಿ ಗಣಗಳೊಡನೆ, ವಿಶಾಖ ನಾಲ್ಕುಕೋಟಿ ಗಣಗಳೊಡನೆ, ಪಾರಿಜಾತ ಒಂಬತ್ತುಕೋಟಿ ಗಣಗಳೊಡನೆ, ಸರ್ವಾಂತಕ ಮತ್ತು ವಿಕೃತಾನನ ಅರವತ್ತು ಕೋಟಿ ಗಣಗಳೊಡನೆ, ದುಂದುಭ ಒಂದುಕೋಟಿ ಗಣಗಳೊಡನೆ. ವೀರನಾದ ಸಂದಾರಕನೆಂಬ ಗಣನಾಯಕ ಆರುಕೋಟಿ ಗಣಗಳೊಡನೆ. ಕಂದುಕ-ಕುಂಡಕರೆಂಬ ಗಣನಾಯಕರು ಕೋಟಿ ಗಣಗಳೊಡನೆ, ವಿಷ್ಟಂಭ ಎಂಟುಕೋಟಿ ಗಣಗಳೊಡನೆ. ಪಿಪ್ಪಲ ಮತ್ತು ವೀರನಾದ ಸನಾದಕ ಸಾವಿರಕೋಟಿ ಗಣಗಳೊಡನೆ, ಆವೇಶನ ಎಂಟುಕೋಟಿ ಗಣಗಳೊಡನೆ. ಮಹಾಕೇಶ ಸಾವಿರಕೋಟಿ ಗಣಗಳೊಡನೆ ಹರ್ಷದಿಂದ ಹೊರಟರು.

ಕುಂಡ ಮತ್ತು ಪರ್ವತಕರೆಂಬ ಗಣನಾಯಕರು ಹನ್ನೆರಡುಕೋಟಿ ಗಣಗಳೊಡನೆ; ಚಂದ್ರತಾಪನೆಂಬ ವೀರ ಎಂಟುಕೋಟಿ ಗಣಗಳೊಡನೆ. ಕಾಲ, ಕಾಲಕ, ಅಗ್ನಿಕರೆಂಬ ಗಣನಾಯಕರು ನೂರುನೂರು ಕೋಟಿ ಗಣಗಳೊಡನೆ; ಅಗ್ನಿಮುಖ, ಆದಿತ್ಯಮೂರ್ಧಾ, ಘನಾವಹ ಎಂಬುವವರೂ ಕೋಟಿಕೋಟಿ ಗಣಗಳೊಂದಿಗೆ; ಸನ್ನಾಹ, ಕುಮುದ, ಅಮೋಘ, ಕೋಕಿಲರೆಂಬ ಗಣನಾಯಕರು ನೂರುನೂರುಕೋಟಿ ಗಣಗಳೊಡನೆ ತೆರಳಿದರು. ಸುಮಂತ್ರ ಕೋಟಿಕೋಟಿ ಗಣಗಳೊಡನೆ; ಕಾಕಾಪಾದೋದರ, ಸಂತಾನಕ ಅರವತ್ತರವತ್ತುಕೋಟಿ ಗಣಗಳೊಡನೆ; ಮಹಾಬಲ, ಮಧುಪಿಂಗ ಒಂಬತ್ತೊಂಬತ್ತು ಕೋಟಿ ಗಣಗಳೊಡನೆ; ನೀಲ ಮತ್ತು ಪೂರ್ಣಭದ್ರರೆಂಬುವರು ತೊಂಬತ್ತುಕೋಟಿ ಗಣಗಳೊಡನೆ; ಚತುರ್ವಕ್ತ್ರ ಏಳುಕೋಟಿ ಗಣಗಳೊಡನೆ; ಕರಣ ಇಪ್ಪತ್ತುಕೋಟಿ ಗಣಗಳೊಡನೆ; ಅಹಿರೋಮಕ ತೊಂಬತ್ತುಕೋಟಿ ಗಣಗಳೊಡನೆ; ಯಜ್ವಾಕ್ಷ, ಶತಮನ್ಯು, ಮೇಘಮನ್ಯು ತೊಂಬತ್ತೊಂಬತ್ತು ಕೋಟಿ ಗಣಗಳೊಡನೆ; ಕಾಷ್ಠಾಗೂಷ್ಠನೆಂಬ ಗಣನಾಯಕ ಅರವತ್ತನಾಲ್ಕು ಕೋಟಿ ಗಣಗಳೊಡನೆ. ವಿರೂಪಾಕ್ಷ, ಸುಕೇಶ, ವೃಷಭ, ಸನಾತನ, ತಾಲಕೇತು, ಷಡಾಸ್ಯ, ಚಂಚ್ವಾಸ್ಯ, ಸಂವರ್ತಕ, ಚೈತ್ರ, ನಕುಲೀಶ, ಸ್ವಯಂಪ್ರಭು, ಕೋಕಾಂತಕ ಗಣನಾಯಕರು ಅರವತ್ತುಕೋಟಿ ಗಣಗಳೊಡನೆ; ಅಶನಿ ಮತ್ತು ಭಾನುಕ ಅರವತ್ತನಾಲ್ಕುಸಾವಿರಕೋಟಿ ಗಣಗಳೊಡನೆ; ಭೃಂಗಿರಿಟಿ ಅರವತ್ತುಕೋಟಿ ಗಣಗಳೊಡನೆ ಉತ್ಸಾಹದಿಂದ ನಡೆದರು.

ಇವರಲ್ಲದೆ ಸಾವಿರಕೋಟಿ ಭೂತಗಳು, ಮೂರುಕೋಟಿ ಪ್ರಮಥಗಳು, ವೀರಭದ್ರನ ಅರವತ್ತನಾಲ್ಕುಕೋಟಿ ಗಣಗಳು, ರೋಮಜರೆಂಬ ಮೂರುಕೋಟಿ ಗಣಗಳು; ನಂದಿ ಮೊದಲಾದ ಗಣನಾಯಕರ ಇಪ್ಪತ್ತುಕೋಟಿ, ನೂರುಕೋಟಿ, ಸಾವಿರಕೋಟಿ ಗಣಗಳು; ಕ್ಷೇತ್ರಪಾಲ, ಭೈರವನ ಕೋಟಿಕೋಟಿ ಗಣಗಳು ಶಂಕರನೊಡನೆ ಉತ್ಸವದೋಪಾದಿಯಲ್ಲಿ ಹೊರಟರು. ಇವರಲ್ಲದೆ ಲೆಕ್ಕವಿಲ್ಲದಷ್ಟು ಗಣನಾಯಕರು ಮಹಾಸೈನ್ಯದೊಂದಿಗೆ ದಿಬ್ಬಣದಲ್ಲಿ ಬಂದು ಸೇರಿದರು.

ಆ ಎಲ್ಲಾ ಗಣಗಳಿಗೂ ಸಾವಿರ ಕೈಗಳಿದ್ದವು. ಜಟೆ ಮತ್ತು ಕಿರೀಟಗಳನ್ನು ಧರಿಸಿದ್ದರು. ಶಿರಸ್ಸಿನಲ್ಲಿ ಚಂದ್ರಕಲೆ ಬೆಳಗುತ್ತಿತ್ತು. ಎಲ್ಲರ ಕತ್ತೂ ನೀಲವಾಗಿತ್ತು. ಎಲ್ಲರಿಗೂ ಮೂರು ಕಣ್ಣುಗಳಿದ್ದವು. ಎಲ್ಲರೂ ರುದ್ರಾಕ್ಷಿಯನ್ನು ಧರಿಸಿದ್ದರು. ಪವಿತ್ರವಾದ ಭಸ್ಮವನ್ನು ಹಚ್ಚಿಕೊಂಡಿದ್ದರು. ತೇಜಸ್ವಿಗಳಂತೆ ಕಾಣುತ್ತಿದ್ದರು. ಒಟ್ಟಾರೆ, ಗಣಗಳೆಲ್ಲ ಬಂದು ಸೇರಿದರು. ಶಿವ ತನ್ನ ಮದುವೆಗಾಗಿ ಪ್ರಯಾಣ ಬೆಳೆಸಿದ. ಹೀಗೆ ಹಿಮವಂತನ ರಾಜಧಾನಿಗೆ ತೆರಳುವಾಗ ಅಲ್ಲಿ ಮತ್ತೊಂದು ಘಟನೆ ನಡೆಯಿತು. ●

## ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಸೂಟ್‌ಕೇಸ್‌ನಲ್ಲಿ ತುಂಬಿಸಲಾಗಿದ್ದ** ಮಹಿಳೆಯ ಶವವೊಂದು ಗುರುಗ್ರಾಮ ಸಮೀಪದ ಪೊದೆಯಲ್ಲಿ ಇತ್ತೀಚೆಗೆ ಪತ್ತೆಯಾಗಿತ್ತು. ಪೊಲೀಸರು ಇದನ್ನು ಪರಿಶೀಲಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮೃತ ಮಹಿಳೆಯು 'ಲವ್ ಜಿಹಾದ್' ಸಂತ್ರಸ್ತೆಯಾಗಿದ್ದಾಳೆ ಎಂಬುದಾಗಿ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಗಾಜಿಯಾಬಾದ್ ಜಿಲ್ಲಾ ಬಿಜೆಪಿ ಘಟಕದ ಸಾಮಾಜಿಕ ಜಾಲತಾಣ ಮುಖ್ಯಸ್ಥ ಎಂದು ಹೇಳಿಕೊಂಡಿರುವ ಆನಂದ್ ಕರ್ಲಾ ಎಂಬುವರು ಲವ್ ಜಿಹಾದ್ ನಡೆದಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ ಲವ್ ಜಿಹಾದ್‌ಗೂ, ಈ ಪ್ರಕರಣಕ್ಕೂ ಸಂಬಂಧವಿಲ್ಲ.




✓ **ಪ್ರಮುಖ ಪತ್ರಿಕೆಗಳು** ಸೂಟ್‌ಕೇಸ್ ಪತ್ತೆ ಕುರಿತು ಪ್ರಕಟಿಸಿದ ವರದಿಗಳು ಹಾಗೂ ಡಿಸಿಪಿ ಹೇಳಿಕೆಯಲ್ಲಿ ಲವ್ ಜಿಹಾದ್‌ನ ಉಲ್ಲೇಖವಿಲ್ಲ ಎಂದು 'ದಿ ವೈರ್' ತಾಣ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಮೃತಪಟ್ಟಿರುವ ಮಹಿಳೆಯನ್ನು ಪ್ರಿಯಾಂಕಾ ಎಂದು ಗುರುತಿಸಲಾಗಿದೆ. ಪೊಲೀಸ್ ಎಫ್‌ಐಆರ್‌ನಲ್ಲಿ ಆರೋಪಿಯನ್ನು ರಾಹುಲ್ ಎಂದು ಉಲ್ಲೇಖಿಸಲಾಗಿದೆ. ಇಬ್ಬರೂ ಒಂದೇ ಧರ್ಮಕ್ಕೆ ಸೇರಿದವರಾಗಿದ್ದಾರೆ. ಇದು ಲವ್ ಜಿಹಾದ್‌ಗೆ ಸಂಬಂಧಿಸಿದ ಪ್ರಕರಣವಲ್ಲ ಎಂದು ಠಾಣಾಧಿಕಾರಿ ಹರೀಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

## ಗುಂಡಣ್ಣ




## ಬೆರಗಿನ ಬೆಳಕು



ಗುರುರಾಜ ಕರಜಗಿ

### ಆತ್ಮಹಿತಕ್ಕೆ ಮೂರು ಗುಣಗಳು

**ಬಹುವಿದ್ಯೆ ಬಹುತರ್ಕ ಬಹುನೇಮ ಬೇಕಿಲ್ಲ |**
**ವಹಿಸೆ ಜೀವನಭರವನದು ಹಗುರೆನಿಪವೊಲ್ ||**
**ಸಹನೆ ಸಮರಸಭಾವವಂತ: ಪರೀಕ್ಷೆಗಳು |**
**ವಿಹಿತವಾತ್ಮದ ಹಿತಕೆ – ಮಂಕುತಿಮ್ಮ || 742 ||**

**ಪದ-ಅರ್ಥ:** ಜೀವನಭರವನದು = ಜೀವನ + ಭರವನು + ಅದು, ಹಗುರೆನಿಪವೊಲ್ = ಹಗುರೆನ್ನಿಸುವಂತೆ, ಸಮರಸಭಾವವಂತ: ಪರೀಕ್ಷೆಗಳು = ಸಮರಸಭಾವ + ಅಂತಃಪರೀಕ್ಷೆಗಳು, ವಿಹಿತವಾತ್ಮದ = ವಿಹಿತ(ಸೂಕ್ತ) + ಆತ್ಮದ,

**ವಾಚ್ಯಾರ್ಥ:** ಬದುಕಿನ ಭಾರವನ್ನು ಹಗುರಾಗಿಸಿಕೊಳ್ಳಲು ದೊಡ್ಡ ವಿದ್ಯೆ, ದೊಡ್ಡ ತರ್ಕ, ಬಹಳ ನೇಮಗಳು ಬೇಕಿಲ್ಲ. ಅದಕ್ಕೆ ಬೇಕಾದದ್ದು ತಾಳ್ಮೆ, ಸಮರಸಭಾವ ಮತ್ತು ಅಂತರೀಕ್ಷಣೆ. ಇವು ಆತ್ಮದ ಹಿತಕೆ ಸೂಕ್ತವಾದವುಗಳು.

**ವಿವರಣೆ:** ಬದುಕು ಸುಲಭವಲ್ಲ. ಅದೊಂದು ದೀರ್ಘ ಹೋರಾಟ- ಅದರಲ್ಲಿ ಜಯ ಸಾಧಿಸುವುದು ತುಂಬ ಕಷ್ಟ ಎಂದೆಲ್ಲ ಹೇಳುತ್ತಾರೆ. ಆದರೆ ಕಗ್ಗ ತಿಳಿಸುತ್ತದೆ, ಬದುಕನ್ನು ಹಗುರಾಗಿಸಲು ಬಹಳವಾದ ವಿದ್ಯೆಯಾಗಲಿ, ಕಷ್ಟಕರವಾದ ನಿಯಮಗಳ ಪಾಲನೆ ಬೇಕಿಲ್ಲ. ಹಾಗಾದರೆ ಬೇಕಾದ ಗುಣಗಳು ಯಾವವು? ಕಗ್ಗ ಮೂರು ಗುಣಗಳನ್ನು ಹೆಸರಿಸುತ್ತದೆ.

ಮೊದಲನೆಯದು ಸಹನೆ. ಬಹಳಷ್ಟು ಜನರಿಗೆ ಒಂದು ತಪ್ಪು ಕಲ್ಪನೆಯೆಂದರೆ ಸಾಧಕರಿಗೆ ಮಾತ್ರ ಸಹನೆ ಸಾಧ್ಯ ಎಂದು. ಸಹನೆಯೆಂದರೆ ಸಂದರ್ಭವನ್ನು, ವ್ಯಕ್ತಿಗಳನ್ನು ಇರುವಂತೆಯೇ ಒಪ್ಪಿಕೊಳ್ಳಲು ಪ್ರಯತ್ನಿಸುವುದು. ನಮಗೆ ಕೋಪ ಬರುವುದು ಯಾವಾಗ? ಪರಿಸ್ಥಿತಿ ನಮಗೆ ಅನುಕೂಲವಾಗದಿದ್ದಾಗ, ವ್ಯಕ್ತಿಗಳು ನಮ್ಮ ಅಪೇಕ್ಷೆಗೆ ತಕ್ಕಂತೆ ವರ್ತಿಸದಿದ್ದಾಗ. ಆಗ ಒಂದು ವಿಷಯವನ್ನು ಮನಸ್ಸಿಗೆ ತೆಗೆದುಕೊಳ್ಳಬೇಕಾದದ್ದೆಂದರೆ ಜನರು, ಪರಿಸ್ಥಿತಿಗಳು ಎಂದಿಗೂ ನೀವು ಬಯಸಿದಂತೆ ಇರಲಾರವು. ಆದರೆ ಅವು ಇದ್ದಂತೆ ನಾವು ಹೊಂದಿಕೊಳ್ಳಬೇಕು. ಈ ತಿಳುವಳಿಕೆಯೇ ಸಹನೆ. ಒಂದು ಬಾರಿ ಆ ಅರಿವು ಮೂಡಿದರೆ ಯಾವುದರ ಬಗ್ಗೆಯೂ ಅಸಹನೆ ಮೂಡುವುದಿಲ್ಲ. ಎರಡನೆಯ ಗುಣ ಸಮರಸಭಾವ. ಸಮರಸಭಾವ ಅಥವಾ ಸಾಮರಸ್ಯ ಎಂದರೆ ಹೊಂದಾಣಿಕೆ. ಜಗತ್ತಿನಲ್ಲಿ ಯಾವುದೂ ನಮಗಾಗಿಯೇ ನಿರ್ಮಿತವಾದದ್ದಲ್ಲ. ಅದು ನಿಸರ್ಗ ಸೃಷ್ಟಿ. ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಸದಾ ಸಂಕಟ, ತಳಮಳ. ಗಂಡ ಸರಿ ಇಲ್ಲವೆಂದು ಹೆಂಡತಿ, ಹೆಂಡತಿ ತನಗೆ ಅನುರೂಪಳಾಗಿಲ್ಲವೆಂದು ಗಂಡ ಕೊರಗಿದರೆ ಏನು ಪ್ರಯೋಜನ? ಮಕ್ಕಳು ತಂದೆ- ತಾಯಿಯರ ಬಗ್ಗೆ, ಶಿಕ್ಷಕರ ವಿದ್ಯಾರ್ಥಿಗಳ ಬಗ್ಗೆ ಹೀಗೆ ಒಬ್ಬರು ಮತ್ತೊಬ್ಬರ ಬಗ್ಗೆ ದೂರುವುದು ಸಾಮಾನ್ಯವಾಗಿದೆ. ಈ ದೂರು, ತಕರಾರು ಬರುವುದೇ ಸಾಮರಸ್ಯದ ಕೊರತೆಯಿಂದ. ನಾನು ವಿಶೇಷನಾದವನು, ಉಳಿದವರು ನನ್ನ ಮಟ್ಟಕ್ಕಿಲ್ಲ ಎನ್ನುವುದಾಗಲೀ, ನಾನು ನಿಷ್ಪ್ರಯೋಜಕ, ಅಸಹಾಯ, ಉಳಿದವರ ಹಾಗೆ ಬಲಶಾಲಿ, ಬುದ್ಧಿಶಾಲಿಯಲ್ಲ ಎನ್ನುವುದಾಗಲೀ ಸಾಮರಸ್ಯವನ್ನು ತರಲಾರದು. ನನಗಿರುವ ಶಕ್ತಿ, ಅವಕಾಶಗಳಲ್ಲಿ ನಾನು ಚೆನ್ನಾಗಿದ್ದೇನೆ. ಉಳಿದವರೂ ಅವರವರ ಶಕ್ತಿಗೆ ಅನುಗುಣವಾಗಿದ್ದಾರೆ. ಹೋಲಿಕೆ ಮಾಡಿನೋಡುವ ಅವಶ್ಯಕತೆ ಇಲ್ಲ ಎನ್ನುವುದು ಸಾಮರಸ್ಯಕ್ಕೆ ಮೂಲ ಆಧಾರ. ಇವೆರಡು ಗುಣಗಳೊಂದಿಗೆ, ಅಂತರೀಕ್ಷಣೆ ಮುಖ್ಯ. ಸದಾ ಕಾಲ ಬಹಿರ್ಮುಖರಾಗಿದ್ದಾಗ ನಮ್ಮ ಶಕ್ತಿಗಳು, ದೋಷಗಳನ್ನು ಅರಿತುಕೊಳ್ಳಲು ಸಾಧ್ಯವಾಗುವುದಿಲ್ಲ. ಅದಕ್ಕೆ ಆಗಾಗ ಮನಸ್ಸನ್ನು ಒಳಗಳೆದುಕೊಂಡು ಅಂತರ್ಮುಖರಾಗಿ ಯೋಚಿಸಬೇಕು. ಆಗ ನಮ್ಮ ಸಿದ್ಧಿ, ಸಾಧನೆಗಳನ್ನು ಮತ್ತು ವೈಫಲ್ಯ, ದೋಷಗಳನ್ನು ಪರಿಶೀಲಿಸಲು ಸಾಧ್ಯವಾಗುವುದರೊಂದಿಗೆ ಬದುಕಿನ ವೇಗಕ್ಕೆ ತಡೆ ಹಾಕಿ, ಅದನ್ನು ಅಸ್ವಾದಿಸಲು ಅನುವಾಗುತ್ತದೆ. ಈ ಮೂರೂ ಗುಣಗಳ ಅಳವಡಿಕೆ ನಮ್ಮ ಆತ್ಮದ ಹಿತಕ್ಕೆ ಪ್ರಯೋಜನಕಾರಿಯಾದವುಗಳು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಅಕ್ಟೋಬರ್ 25, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಆಶ್ವಯುಜ ಕೃಷ್ಣ ಅಮಾವಾಸ್ಯೆ ಗಂ. 16-19, ನಕ್ಷತ್ರ: ಚಿತ್ತಾ ಗಂ. 14-17 ಯೋಗ: ವಿಷ್ಕಂಭ ಗಂ. 12-31, ಕರಣ: ನಾಗವಾನ್ ಗಂ. 16-19, ತುಲಾ ಮಾಸದ 07 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 – 04:30, ಸೂರ್ಯೋದಯ : 06-26 ಸೂರ್ಯಾಸ್ತ : 06-03 ಮುಸ್ಲಿಂ ದಿನಾಂಕ : 28 ರಬೀಉಲ್ಲಾವಲ್, ದಿನ ವಿಶೇಷ : ಗೋವರ್ಧನ ಪೂಜಾ, ದೀಪಾವಳಿ, ಖಂಡಗ್ರಾಸ ಸೂರ್ಯ ಗ್ರಹಣ (ಭಾರತದಲ್ಲಿ ಗೋಚರಿಸುತ್ತದೆ) (ಸಾಯಂಕಾಲ ಸಮಯ 05:08 – 06:29 ರವರೆಗೆ ಗ್ರಹಣ ಸಂಭವಿಸಲಿದೆ.) ಅದೃಷ್ಟ ಸಂಖ್ಯೆ : 2, 3

**ಮೇಷ:** ಈ ದಿನವನ್ನು ಸಂತೋಷಮಯವಾಗಿ ಕಳೆಯುವಿರಿ. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಅಧಿಕ ವ್ಯಾಪಾರ ಮತ್ತು ಲಾಭ ಸಿಗಲಿದೆ. ಇಷ್ಟಾರ್ಥ ನೆರವೇರುವ ಸಲುವಾಗಿ ಹೇಳಿಕೊಂಡಿರುವ ಹರಕೆ ತೀರಿಸುವ ಬಗ್ಗೆ ಗಮನವಿರಲಿ.

**ವೃಷಭ:** ಇಂದು ಲೇವಾದೇವಿ ವ್ಯವಹಾರ ನಡೆಸುವುದು ಸರಿಯಲ್ಲ. ದಿನದ ಮಧ್ಯದಲ್ಲಿ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ. ಮನೆಯಲ್ಲಿ ನಿಮ್ಮ ನಿರ್ಧಾರ ಎಲ್ಲರ ಮನಮುಟ್ಟುವಂತೆ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.

**ಮಿಥುನ:** ಖಾದ್ಯ ತೈಲಗಳ, ಸಿಹಿ ತಿನಿಸುಗಳ ಮಾರಾಟದವರಿಗೆ ಲಾಭವಿರುವುದು. ಮನೆಯ ಅಲಂಕಾರಿಕ ವಸ್ತುಗಳಿಗಾಗಿ ಖರ್ಚು ಮಾಡುವಿರಿ. ಹೊಸ ಮನೆಯೊಂದನ್ನು ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯಲಿದೆ.

**ಕರ್ಕಾಟಕ:** ನಿಮ್ಮ ವೈಯುಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವುದು. ದೇವರ ಆಶೀರ್ವಾದದಿಂದ ನಿಮ್ಮ ಆರ್ಥಿಕ ಆದಾಯ ಉತ್ತಮವಾಗಿರುವುದು, ಆದರೆ, ಸೋಮಾರಿತನ ನಿಮಗೆ ಶತ್ರುವಾಗಿ ಪರಿಣಮಿಸಲಿದೆ.

**ಸಿಂಹ:** ಗೌರವಯುತವಾದಂತಹ ಸ್ಥಾನಮಾನಗಳು ಈ ದಿನ ನಿಮ್ಮದಾಗಲಿದೆ. ಸಗಟು ವ್ಯಾಪಾರಿಗಳಿಗೆ ಇಂದು ಶುಭ ದಿನ. ತೆರೆಮರೆಯ ಸಂಧಾನದ ಮಾತುಕತೆ ಯಶಸ್ವಿಯಾಗುವುದು. ಅಧಿಕಾರಕ್ಕಾಗಿ ಯಾವುದೇ ಅಡ್ಡದಾರಿ ಅನುಸರಿಸಬೇಡಿ.

**ಕನ್ಯಾ:** ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾನೂನು ವಿಷಯದಲ್ಲಿ ಹೆಚ್ಚಿನ ಸಲಹೆ ಪಡೆದುಕೊಳ್ಳುವುದು ಅನಿವಾರ್ಯ. ಇತರರಿಗೆ ಮಾದರಿಯಂತಾಗುವ ನಿಮ್ಮ ವ್ಯಕ್ತಿತ್ವವನ್ನು ಸಹಿಸಲಾರದ ಜನರು ಎದುರಾಗಬಹುದು.

**ತುಲಾ:** ಕೌಟುಂಬಿಕವಾಗಿ ಇದ್ದಂತಹ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವಿರಿ. ರಫ್ತು ವಹಿವಾಟುಗಳು ಹೆಚ್ಚಲಿದೆ. ಯಂತ್ರೋಪಕರಣ ಮಾರಾಟದಿಂದ ಲಾಭವಿರುವುದು. ಸಾಲ ಮಾಡುವ ಪರಿಸ್ಥಿತಿ ತಂದುಕೊಳ್ಳಬೇಡಿ.

**ವೃಶ್ಚಿಕ:** ಸಂಬಂಧಗಳಿಗೆ ಪ್ರಾಮುಖ್ಯ ನೀಡಿದಲ್ಲಿ ಹೊಸ ಬದಲಾವಣೆ ಸೂಚನೆ ಸಿಗಲಿದೆ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ ಶುಭ ಸಮಾರಂಭಗಳು ಇರುವುದರಿಂದ ಮನೆಯಲ್ಲಿ ಸಂಭ್ರಮದ ವಾತಾವರಣವಿರುವುದು.

**ಧನು:** ಪದವಿ ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆತು ಹೆಚ್ಚಿನ ಆನಂದವಿರುವುದು. ವ್ಯಾಪಾರದಲ್ಲಿ ಲಾಭಾಂಶದ ಇಳಿಕೆಯಾಗದಂತೆ ಎಚ್ಚರಿಕೆ ವಹಿಸುವಿರಿ. ಹಿಂದಿನ ಕಹಿ ಘಟನೆಗಳು ಪುನಃ ಮರುಕಳಿಸದಂತೆ ಎಚ್ಚರ ವಹಿಸಿ.

**ಮಕರ:** ಪತ್ನಿ ವರ್ಗದವರಿಂದ ನಿಮ್ಮೆಲ್ಲಾ ಕೆಲಸ ಕಾರ್ಯಗಳಿಗೆ ಸಹಾಯ ದೊರೆಯಲಿದೆ. ಹಣಕಾಸು ಪರಿಸ್ಥಿತಿ ಉತ್ತಮವಿರುವುದರಿಂದ ಆಸ್ತಿ ಕೊಳ್ಳುವ ಬಗ್ಗೆ ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ಸ್ಪರ್ಧೆಗಳಲ್ಲಿ ಜಯ.

**ಕುಂಭ:** ಒತ್ತಡ ತರುವಂಥ ಕೆಲಸಗಳಿಂದ ದೂರವಿರಿ. ಮನೆಯಲ್ಲಿ ದೊಡ್ಡವರಾದ್ದರಿಂದ ಹೆಚ್ಚಿನ ಕಾರ್ಯಭಾರ ಮತ್ತು ಸೌಲಭ್ಯ ಪಡೆಯುವಿರಿ. ಸಂಬಂಧಿಕರೊಂದಿಗಿದ್ದ ವ್ಯವಹಾರ ಕಡಿಮೆ ಮಾಡಿಕೊಳ್ಳುವುದು ಉತ್ತಮ.

**ಮೀನ:** ಸೌಜನ್ಯತೆ ನಿಮ್ಮ ಹುದ್ದೆಗೆ ಬಹಳಷ್ಟು ಮೆರುಗು ತರುವುದು. ಹಣಕಾಸಿನ ವ್ಯವಹಾರಗಳಲ್ಲಿ ಅತಿ ಜಾಗರೂಕರಾಗಿರುವುದು ಅವಶ್ಯ. ಮಹಾಲಕ್ಷ್ಮಿ ಅಷ್ಟೋತ್ತರ ಪಠಿಸಿದಲ್ಲಿ ಹೆಚ್ಚಿನ ಯಶಸ್ಸು ನಿಮ್ಮದಾಗುವುದು.


## ಪದಬಂಧ 5119 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ತಾಪವಿದ್ದಾಗ ಈ ಪರಿ ಬಂದಿರುವ ದುಃಖ! (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿ ಕಾಣುತ್ತಿರುವ ಕೆಟ್ಟಗುಣ (4)
8.ಬರದಿಂದ ಕಂಗೆಟ್ಟವನಿಗೆ ನೀಡಿರುವ ಪಾನಕ (4)
10.ಮನದಲ್ಲಿ ಓಟನ್ನು ನೀಡುವಿಕೆ (4)
12.ಗರತಿ ಸೇರಿಕೊಂಡಿರುವ ಇಯತ್ತೆ (4)
13.ಬಲು ವಾಚಾಳಿಯಾಗಿರುವ ವರ (3)
16.ವ್ಯಂಗ್ಯದಿಂದ ಕೂಡಿದ ನಗೆ (4)
17.ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

**ಮೇಲಿಂದ ಕೆಳಕ್ಕೆ**

1.ಅತ್ತೆ ಗೊತ್ತುಹಚ್ಚಿರುವ ವಿಳಾಸ (2)
2.ಪಣವಿಟ್ಟು ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ಹೊಳೆ ದಾಟಲು ಬಳಸುವ ಸಾಧನ (2)
7.ವರನ ತಗಾದೆಯೇ ಇದು? (3)
9.ಬಹಳ ಆತ್ಮೀಯ ನೆಂಟರ ಸಮೂಹ (3)
11.ವನ ವಾಸದ ಒಂಬತ್ತು ತಿಂಗಳು! (4)
12.ಈ ತರಹ ತೋರಿರುವ ಬೇಧಭಾವ (4)
14.ಕ್ರೂರನಾದವನು ತಿರುಗಿದ್ದಾನಲ್ಲಾ! (2)
15.ದೇವತೆಗಳ ಒಡೆಯನೀತ (2)



**5118ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಸುರಂಗಮಾರ್ಗ 3.ಕುಲಾವಿ 5.ವ್ಯವಕಲನ 7.ಗರಳ 8.ಒಣಹರಟೆ 10.ಬಯಕೆ 11.ಹೊಸದಂಪತಿ 14.ದಿಗಿಲು 15.ಸುಲಿಗೆಗಾರ

**ಮೇಲಿಂದ ಕೆಳಕ್ಕೆ:** 1.ಸುಶ್ರಾವ್ಯ 2.ಗಣಕ 4.ವಿರಳ 6.ಲಕ್ಷಣ 7.ಗಲಾಟೆ 8.ಒನಕೆ 9.ರಕ್ಕಸ 10.ಬಸದಿ 12.ದಂಡಿಗೆ 13.ತಿಮಿರ

## ಸುಡೊಕು 5505

| | | | | | | | | |
|---|---|---|---|---|---|---|---|---|
| | | 7 | | 6 | | | | 2 |
| | 8 | | 5 | | 2 | 3 | | |
| 6 | | 2 | | 4 | | 7 | | 8 |
| | 7 | | | | 9 | | | |
| 5 | | 9 | | | 6 | | 3 | 7 |
| | 6 | | 7 | | | | | 4 |
| 2 | | 3 | 8 | | 4 | 6 | | |
| | | 6 | | 2 | | | 8 | 9 |
| 8 | 1 | | 6 | | 7 | 4 | | |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**5504 ಸುಡೊಕು**

| | | | | | | | | |
|---|---|---|---|---|---|---|---|---|
| 8 | 7 | 9 | 4 | 6 | 1 | 2 | 5 | 3 |
| 2 | 4 | 3 | 9 | 8 | 5 | 7 | 6 | 1 |
| 6 | 5 | 1 | 2 | 7 | 3 | 4 | 8 | 9 |
| 7 | 9 | 2 | 1 | 5 | 8 | 3 | 4 | 6 |
| 4 | 3 | 8 | 7 | 9 | 6 | 1 | 2 | 5 |
| 5 | 1 | 6 | 3 | 4 | 2 | 9 | 7 | 8 |
| 3 | 2 | 5 | 6 | 1 | 4 | 8 | 9 | 7 |
| 1 | 6 | 7 | 8 | 2 | 9 | 5 | 3 | 4 |
| 9 | 8 | 4 | 5 | 3 | 7 | 6 | 1 | 2 |

# ಬ್ರಿಟನ್ ಪ್ರಧಾನಿ ಗಾದಿ: ಸುನಕ್ ಸಾಗಿದ ಹಾದಿ

**2015:** ಯಾರ್ಕ್‌ಶೈರ್‌ನ ರಿಚ್‌ಮಂಡ್ ಕ್ಷೇತ್ರದ ಸಂಸದರಾಗಿ ಆಯ್ಕೆ, ಸಂಸತ್ತಿನಲ್ಲಿ ಭಗವದ್ಗೀತೆ ಮೇಲೆ ಪ್ರಮಾಣ ವಚನ ಸ್ವೀಕಾರ

**2016:** ಬ್ರೆಕ್ಸಿಟ್‌ನಿಂದ ದೇಶ ಹೊರ ಬರಬೇಕೆಂಬ ಅಚಲ ನಿಲುವು

**2018:** ಥೆರೆಸಾ ಮೇ ಅವರ ಸರ್ಕಾರದಲ್ಲಿ ಮೊದಲ ಬಾರಿಗೆ ಸಚಿವ ಸ್ಥಾನ ನಿರ್ವಹಣೆ. ಹೊಸದಾಗಿ ಮರುನಾಮಕರಣಗೊಂಡ ವಸತಿ, ಸಮುದಾಯ ಮತ್ತು ಸ್ಥಳೀಯ ಸರ್ಕಾರಗಳ ಸಚಿವಾಲಯದ ಜವಾಬ್ದಾರಿ

**2019-ಜುಲೈ:** ಬೋರಿಸ್ ಜಾನ್ಸನ್ ಅವರ ಸರ್ಕಾರದಲ್ಲಿ ಚಾನ್ಸಲರ್ ಸಾಜಿದ್ ಜಾವಿದ್ ಅವರ ಅಧೀನದಲ್ಲಿ ಹಣಕಾಸು ಸಚಿವರಾಗಿ, ಹೊಸ ನಾಯಕನಾಗಿ ಗುರುತಿಸಿಕೊಂಡರು

**2020- ಫೆಬ್ರುವರಿ:** ಪ್ರಧಾನಿಯೊಂದಿಗೆ ಅಧಿಕಾರ ಸಂಘರ್ಷದಿಂದ ಜಾವಿದ್ ರಾಜೀನಾಮೆ ನಂತರ ಚಾನ್ಸಲರ್ ಆಗಿ ಪದೋನ್ನತಿ. ಬ್ರಿಟನ್ ಸರ್ಕಾರದಲ್ಲಿ ಅತ್ಯುನ್ನತ ಸಚಿವಾಲಯ ಮುನ್ನಡೆಸಿದ ಮೊದಲ ಭಾರತೀಯ ಎನ್ನುವ ಶ್ರೇಯ

**2020- ಏಪ್ರಿಲ್:** ಕೋವಿಡ್–19 ಸಾಂಕ್ರಾಮಿಕದಿಂದ ಮಾರ್ಚ್‌ನಲ್ಲಿ ಸಂಪೂರ್ಣ ಲಾಕ್‌ಡೌನ್ ಹೇರಿಕೆ. ಹಣ ಉಳಿತಾಯ ಮತ್ತು ಉದ್ಯೋಗ ಹಾಗೂ ವಾಣಿಜ್ಯ ವ್ಯವಹಾರ ರಕ್ಷಣೆಗಾಗಿ ಪರಿಹಾರ ಯೋಜನೆಗಳನ್ನು ಪರಿಚಯಿಸಲು ಸರಣಿ ಮಿನಿ ಬಜೆಟ್ ಮಂಡನೆ, ದೇಶದ ಜನತೆಯಿಂದ ಪ್ರಶಂಸೆ

**2021:** ಬೋರಿಸ್ ಜಾನ್ಸನ್ ಅವರಿಗೆ ಪಾರ್ಟಿಗೇಟ್ ಹಗರಣ ಸುತ್ತಿಕೊಂಡಾಗ ಅವರ ಉತ್ತರಾಧಿಕಾರಿ ಎಂದೇ ಬಿಂಬಿತ

**2022:** ಲಾಕ್ ಡೌನ್ ನಿಯಮ ಉಲ್ಲಂಘಿಸಿ ಡೌನಿಂಗ್ ಸ್ಟ್ರೀಟ್‌ನ ಕ್ಯಾಬಿನೆಟ್ ಕೊಠಡಿಯಲ್ಲಿ ಜಾನ್ಸನ್ ಅವರ ಹುಟ್ಟುಹಬ್ಬದ ಪಾರ್ಟಿಯಲ್ಲಿ ಭಾಗವಹಿಸಿದ್ದಾಗಿ ಒಪ್ಪಿಕೊಂಡರು

**2022- ಏಪ್ರಿಲ್:** ಅಮೆರಿಕದ ಗ್ರೀನ್ ಕಾರ್ಡ್ ಹೊಂದಿರುವುದಕ್ಕೆ , ಪತ್ನಿಯು ಬ್ರಿಟನ್‌ಗೆ ತೆರಿಗೆ ಪಾವತಿಸದ ಕಾರಣಕ್ಕೆ ಮಾಧ್ಯಮಗಳಲ್ಲಿ ವ್ಯಾಪಕ ಟೀಕೆ

**2022 ಜುಲೈ:** ಆರೋಗ್ಯ ಕಾರ್ಯದರ್ಶಿ ಸ್ಥಾನಕ್ಕೆ ಸಾಜಿದ್ ಜಾವಿದ್ ರಾಜೀನಾಮೆ ನೀಡಿದ ಕೆಲವೇ ಕ್ಷಣಗಳಲ್ಲಿ ಚಾನ್ಸಲರ್ ಸ್ಥಾನಕ್ಕೆ ಸುನಕ್ ರಾಜೀನಾಮೆ

**2022–ಜುಲೈ 8:** ಬೋರಿಸ್ ಜಾನ್ಸನ್ ಅವರ ಉತ್ತರಾಧಿಕಾರಿಯಾಗಿ ಪ್ರಧಾನಿ ಹುದ್ದೆಗೆ ಸ್ಪರ್ಧೆ ಘೋಷಣೆ

**ಜುಲೈ 20:** ಪ್ರಧಾನಿ ಚುನಾವಣೆಯಲ್ಲಿ 137 ಮತಗಳನ್ನು ಪಡೆದು ತಮ್ಮ ಎದುರಾಳಿ ಲಿಜ್ ಟ್ರಸ್‌ಗಿಂತ ಮುನ್ನಡೆ

**ಆಗಸ್ಟ್ 5:** ಟಿ .ವಿ ಚರ್ಚೆಯಲ್ಲಿ ಮತದಾರರ ಬೆಂಬಲದಿಂದ ಜಯ

**ಸೆಪ್ಟೆಂಬರ್ 5:** ಕನ್ಸರ್ವೇಟಿವ್ ಪಕ್ಷದ ನಾಯಕತ್ವದ ಸ್ಪರ್ಧೆಯಲ್ಲಿ ಲಿಜ್ ಟ್ರಸ್ ಎದುರು ಸೋಲು

**ಅಕ್ಟೋಬರ್ 14:** ಆರ್ಥಿಕ ಪ್ರಕ್ಷುಬ್ಧತೆಯ ನಡುವೆ ಚಾನ್ಸಲರ್ ಹುದ್ದೆಯಿಂದ ಕ್ವಾಸಿ ಕ್ವಾರ್ಟೆಂಗ್ ಅವರನ್ನು ವಜಾಗೊಳಿಸಿದ ಲಿಜ್ ಟ್ರಸ್

**ಅಕ್ಟೋಬರ್ 20:** ಸ್ವಪಕ್ಷೀಯರ ಬಹಿರಂಗ ಬಂಡಾಯದಿಂದ ಟ್ರಸ್ ರಾಜೀನಾಮೆ, ಆರು ವಾರಗಳ ಅಧಿಕಾರಕ್ಕೆ ಇತಿಶ್ರೀ

- ಭಾರತದ ಪಂಜಾಬ್ ಮೂಲದ ಯಶ್ವೀರ್ ಮತ್ತು ಉಷಾ ಸುನಕ್ ದಂಪತಿಯ ಮಗ ರಿಷಿ ಸುನಕ್. ಬ್ರಿಟನ್ನಿನ ಸೌತಾಂಪ್ಟನ್‌ನಲ್ಲಿ ಜನಿಸಿದರು.
- ರಾಜಕೀಯ ಪ್ರವೇಶಕ್ಕೂ ಮುನ್ನ ಪ್ರಮುಖ ಬ್ಯಾಂಕ್‌ವೊಂದರಲ್ಲಿ ವಿಶ್ಲೇಷಕರಾಗಿ ಸುನಕ್ ಕೆಲಸ ಮಾಡಿದ್ದರು.
- ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅಕ್ಷತಾ ಮೂರ್ತಿಯವರನ್ನು ಭೇಟಿಯಾಗಿದ್ದ ರಿಷಿ ಸುನಕ್, 2009ರ ಆಗಸ್ಟ್ 31ರಂದು ಬೆಂಗಳೂರಿನ ಲೀಲಾಪ್ಯಾಲೆಸ್‌ನಲ್ಲಿ ವಿವಾಹವಾದರು. ಇವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ.



ಪತ್ನಿ, ಪುತ್ರಿಯರೊಂದಿಗೆ ರಿಷಿ ಸುನಕ್ –ಟ್ವಿಟರ್ ಚಿತ್ರ

## ಬ್ರಿಟನ್ ಪ್ರಧಾನಿ ಹುದ್ದೆಗೆ ರಿಷಿ

**ಒಂದನೇ ಪುಟದಿಂದ...**

ಬ್ರಿಟನ್‌ನ ಸುಮಾರು 2 ಶತಮಾನಗಳ ಇತಿಹಾಸದಲ್ಲಿ, 42 ವರ್ಷದ ರಿಷಿ ಅವರು ಅತ್ಯಂತ ಕಿರಿಯ ಪ್ರಧಾನಿ ಎನಿಸಿಕೊಳ್ಳಲಿದ್ದಾರೆ. ರಿಷಿ ತಕ್ಷಣವೇ ಪ್ರಧಾನಿ ಹುದ್ದೆ ವಹಿಸಿಕೊಳ್ಳುವುದು ಸಾಧ್ಯವಿಲ್ಲ. ಮೊದಲನೆಯದಾಗಿ, ಟ್ರಸ್ ಅವರು ಹುದ್ದೆಗೆ ರಾಜೀನಾಮೆ ಕೊಡಬೇಕು ಮತ್ತು ಅದು ಅಂಗೀಕಾರವಾಗಬೇಕು.

ಅಧಿಕಾರ ಹಸ್ತಾಂತರ ಯಾವಾಗ ನಡೆಯಬೇಕು ಮತ್ತು ಕಾರ್ಯಕ್ರಮ ಹೇಗಿರಬೇಕು ಎಂಬುದರ ಕುರಿತು ಚರ್ಚೆ ಆರಂಭವಾಗಿದೆ ಎಂದು ಟ್ರಸ್ ಅವರ ವಕ್ತಾರರು ತಿಳಿಸಿದ್ದಾರೆ.

## ಭಾರಿ ಬೆಂಬಲ

- ರಿಷಿಗೆ ಪೂರ್ಣ ಬೆಂಬಲ ನೀಡುವುದಾಗಿ ಮಾರ್ಡಂಟ್ ಅವರು ಘೋಷಿಸಿದ್ದಾರೆ
- ಜಾನ್ಸನ್ ಬಣದಲ್ಲಿದ್ದ ಮಾಜಿ ಸಚಿವೆ ಪ್ರೀತಿ ಪಟೇಲ್ ಅವರಿಂದ ರಿಷಿಗೆ ಬೆಂಬಲ
- ಸಚಿವರಾದ ಜೇಮ್ಸ್ ಕ್ಲೆವರ್ಲಿ, ನದೀಂ ಜಹಾವಿ ಬೆಂಬಲ ನೀಡಿದ್ದಾರೆ

## ‘ಭಾರತ–ಪಾಕ್‌ಗೆ ಚಾರಿತ್ರಿಕ ಹೆಮ್ಮೆ’

ಇಸ್ಲಾಮಾಬಾದ್ (ಪಿಟಿಐ): ರಿಷಿ ಸುನಕ್ ಅಧಿಕಾರ ಸ್ವೀಕರಿಸಲು ಸಜ್ಜಾಗಿರುವುದರಲ್ಲಿ ಬದ್ಧ ವೈರಿಗಳಾದ ಭಾರತ ಮತ್ತು ಪಾಕಿಸ್ತಾನದ ಪಾತ್ರವಿಲ್ಲದಿದ್ದರೂ ಇದು ಉಭಯ ರಾಷ್ಟ್ರಗಳಿಗೆ ಚಾರಿತ್ರಿಕ ಹೆಮ್ಮೆಯ ಸಂದರ್ಭವೆನಿಸಿದೆ.

ಸುನಕ್ ಅವರ ಅಜ್ಜ–ಅಜ್ಜಿ ಮೂಲತಃ ಬ್ರಿಟಿಷ್ ಭಾರತದವರು. ಸುನಕ್ ಪೂರ್ವಿಕರ ಹುಟ್ಟೂರು ಗುಜರನ್‌ವಾಲ ಈಗಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿದೆ. ಹಾಗಾಗಿ ಸುನಕ್ ಭಾರತೀಯ ಮತ್ತು ಪಾಕಿಸ್ತಾನಿ ಮೂಲದವರು ಎನಿಸಿಕೊಳ್ಳುತ್ತಾರೆ.



ಬೆಂಗಳೂರಿನ ಲೀಲಾಪ್ಯಾಲೆಸ್‌ನಲ್ಲಿ ರಿಷಿ, ಅಕ್ಷತಾ ಮದುವೆಯ ಸಂದರ್ಭ

ಎರಡೂ ದೇಶಗಳು ಈ ವಿಷಯದಲ್ಲಿ ಸಂಭ್ರಮಿಸಬೇಕೆಂದು ಜಾಲತಾಣದಲ್ಲಿ ನೆಟ್ಟಿಗರು ಹೇಳಿಕೊಂಡಿದ್ದಾರೆ .

# ‘ಉಭಯತ್ರರಿಗೆ ಪೂರಕವಾಗಿ ಬ್ರಿಟನ್– ಭಾರತ ಬಾಂಧವ್ಯ’

ಲಂಡನ್ (ಪಿಟಿಐ): ಬ್ರಿಟನ್ ಮತ್ತು ಭಾರತದ ನಡುವಿನ ಬಾಂಧವ್ಯವನ್ನು ಪರಸ್ಪರ ವಿನಿಮಯದ ಮತ್ತು ಉಭಯತ್ರರಿಗೂ ಹೆಚ್ಚು ಅನುಕೂಲವಾಗುವಂತೆ ಬದಲಿಸುವ ಬಯಕೆ ಇದೆ. ಇದರಿಂದ ಬ್ರಿಟನ್ ವಿದ್ಯಾರ್ಥಿಗಳಿಗೆ ಮತ್ತು ಕಂಪನಿಗಳಿಗೂ ಸುಲಭವಾಗಿ ಭಾರತಕ್ಕೆ ಪ್ರವೇಶ ಸಿಗಲಿದೆ ಎಂದು ಬ್ರಿಟನ್‌ನ ಮೊದಲ ಭಾರತೀಯ ಮೂಲದ, ಹಿಂದೂ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

ಇತ್ತೀಚೆಗೆ ಉತ್ತರ ಲಂಡನ್‌ನಲ್ಲಿ ಭಾರತೀಯ ಕನ್ಸರ್ವೇಟಿವ್ ಸ್ನೇಹ ಬಳಗ (ಸಿಎಫ್‌ಐಎನ್) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಮೂಲದ ಕನ್ಸರ್ವೇಟಿವ್ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ್ದ ರಿಷಿ ಸುನಕ್, ಸದ್ಯ ದೇಶವು ಹಣದುಬ್ಬರದ ಕಷ್ಟಕರ ಸ್ಥಿತಿಯಲ್ಲಿದೆ. ಸುರಕ್ಷಿತ ಮತ್ತು ಉತ್ತಮವಾದ ಬ್ರಿಟನ್ ಕಟ್ಟುವ ಸವಾಲು ನಮ್ಮ ಮುಂದಿದೆ ಎಂದು ಹೇಳಿದ್ದರು.

ಸಿಎಫ್‌ಐಎನ್‌ನ ಸಹ ಅಧ್ಯಕ್ಷೆ ರೀನಾ ರೇಂಜರ್ ಅವರು ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧದ ಕುರಿತು ಕೇಳಿದ ಪ್ರಶ್ನೆಗೆ ‘ಭಾರತ– ಬ್ರಿಟನ್ ಬಾಂಧವ್ಯ ತುಂಬಾ ಮುಖ್ಯವಾದುದು ಎಂಬುದು ನಮಗೆಲ್ಲರಿಗೂ ತಿಳಿದಿದೆ. ನಾವು ನಮ್ಮ ಎರಡು ದೇಶಗಳ ನಡುವಿನ ಜೀವಂತ ಸೇತುವೆಯ ಪ್ರತಿನಿಧಿಗಳು’ ಎಂದು ರಿಷಿ ಹೇಳಿದ್ದರು.

ಇದಕ್ಕೂ ಮೊದಲು ರಿಷಿ ಅವರು ಸಭಿಕರನ್ನು ಉದ್ದೇಶಿಸಿ ‘ನಮಸ್ತೆ, ಸಲಾಂ, ಖೇಮ್ ಚೋ ಅಂಡ್ ಕಿಡ್ಡಾ’ ಎಂದು ಸ್ವಾಗತಿಸಿ, ನಂತರ ಹಿಂದಿಯಲ್ಲಿ ‘ಆಪ್ ಸಬ್ ಮೇರೆ ಪರಿವಾರ್ ಹೋ’ (ನೀವೆಲ್ಲರೂ ನನ್ನ ಕುಟುಂಬ) ಎಂದು ಹೇಳುವ ಮೂಲಕ ಎಲ್ಲರ ಮನಸ್ಸನ್ನು ಗೆದ್ದಿದ್ದರು.

ಸೌತ್‌ಹ್ಯಾಂಪ್ಟನ್‌ನಲ್ಲಿ ಜನಿಸಿದ ರಿಷಿ ಸುನಕ್ ಅಪ್ಪಟ ಹಿಂದೂ. ಸದಾ ದೇವಸ್ಥಾನಕ್ಕೆ ಹೋಗುವ ಅಭ್ಯಾಸ ರೂಢಿಸಿಕೊಂಡಿದ್ದಾರೆ. ತಮ್ಮ ಇಬ್ಬರು ಪುತ್ರಿಯರಾದ ಕೃಷ್ಣಾ ಮತ್ತು ಅನೂಷ್ಕಾ ಅವರನ್ನು ಭಾರತೀಯ ಸಂಸ್ಕೃತಿ ಅನುಸಾರ ಬೆಳೆಸುತ್ತಿದ್ದಾರೆ. ಪುತ್ರಿ ಅನೂಷ್ಕಾ ತನ್ನ ಸಹಪಾಠಿಗಳ ಜತೆಗೆ ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ಜೂನ್‌ನಲ್ಲಿ ನಡೆದ ರಾಣಿಯ ಅಮೃತ ಮಹೋತ್ಸವದ ಆಚರಣೆ ಸಮಾರಂಭದಲ್ಲಿ ಕೂಚುಪುಡಿ ನೃತ್ಯ ಪ್ರದರ್ಶಿಸಿದ್ದರು. ಈ ವಿಡಿಯೊ ಅನ್ನು ಇತ್ತೀಚೆಗಷ್ಟೇ ರಿಶಿ ಸುನಕ್ ಹಂಚಿಕೊಂಡಿದ್ದರು.



ರಿಷಿ ಸುನಕ್ ಅವರು ಸೋಮವಾರ ಲಂಡನ್‌ನ ಕೇಂದ್ರ ಭಾಗದಲ್ಲಿರುವ ಕನ್ಸರ್ವೇಟಿವ್ ಪಕ್ಷದ ಕಚೇರಿಗೆ ಭೇಟಿ ನೀಡಿದಾಗ ತಮ್ಮ ಬೆಂಬಲಿಗರೊಂದಿಗೆ ಜನರತ್ತ ಕೈಬೀಸಿದರು– ಎಎಫ್‌ಪಿ ಚಿತ್ರ

## ‘ಐತಿಹಾಸಿಕ, ಸ್ಫೂರ್ತಿದಾಯಕ ಕ್ಷಣ’

ಲಂಡನ್ (ಪಿಟಿಐ): ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿರುವುದಕ್ಕೆ ಬ್ರಿಟನ್‌ನಲ್ಲಿನ ಭಾರತೀಯ ಸಮುದಾಯದ ನಾಯಕರು ಮತ್ತು ಸಂಘಟನೆಗಳ ಮುಖಂಡರು ಹರ್ಷಗೊಂಡಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಈ ಬೆಳವಣಿಗೆ ‘ಐತಿಹಾಸಿಕ’ ಮತ್ತು ‘ಸ್ಫೂರ್ತಿದಾಯಕ’ ಎಂದು ಅವರು ಬಣ್ಣಿಸಿದ್ದಾರೆ.

‘ಪ್ರಧಾನಿಯಾಗಿ ಸುನಕ್ ಆಯ್ಕೆಯಾಗಿರುವ ಈ ಐತಿಹಾಸಿಕ ಕ್ಷಣ ಸೋಜಿಗವಾದದ್ದು’ ಎಂದು ಬ್ರಿಟನ್‌ನ ಭಾರತೀಯ ಚಿಂತನಾ ಚಾವಡಿ 1928 ಸಂಸ್ಥೆ ಹೇಳಿದೆ.


‘ನಮ್ಮ ಹಿರಿಯರು ಬ್ರಿಟಿಷರ ಆಳ್ವಿಕೆಯನ್ನು ಕಂಡಿದ್ದರು. ನಾವು ಈಗ ಬ್ರಿಟನ್‌ನ ಅತ್ಯುನ್ನತ ಸ್ಥಾನದಲ್ಲಿ ಭಾರತೀಯ ನಾಯಕನನ್ನು ಕಾಣುತ್ತಿರುವುದು ಪ್ರೇರಣಾದಾಯಕ. ಮುಂದಿನ ಜನಾಂಗಕ್ಕೂ ಇದು ಸ್ಫೂರ್ತಿದಾಯಕ’ ಎಂದು ಸಂಸ್ಥೆ ಹೇಳಿದೆ. ದೇಶದಲ್ಲಿ ಭಾರತ ಮೂಲದ 17 ಲಕ್ಷ ಜನರಿದ್ದು ಇದು ಒಟ್ಟು ಜನಸಂಖ್ಯೆಯ ಶೇಕಡಾ 2.5ರಷ್ಟು ಮಾತ್ರ. ಹೀಗಾಗಿ ಭಾರತೀಯ ಮೂಲದವರೊಬ್ಬರು ಪ್ರಧಾನಿ ಸ್ಥಾನಕ್ಕೇರುವುದು ಸದ್ಯದ ನಿರೀಕ್ಷೆ ಆಗಿರಲಿಲ್ಲ ಎಂದು ಐಐಎಸ್‌ಎಸ್‌ನ ದಕ್ಷಿಣ ಏಷ್ಯಾದ ಸೀನಿಯರ್ ಫೆಲೊ ರಾಹುಲ್ ರಾಯ್ ಚೌಧರಿ ಪ್ರತಿಕ್ರಿಯಿಸಿದರು.







### ಷೇರುಪೇಟೆ ವಹಿವಾಟು





### ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹325-598

ದ್ವಿತಳಿ (ಬಿ.ವಿ) ₹388-778

### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,576 |
| ಇಂದಿನ ಅಂತ್ಯ | 17,730 |
| ▲ | 154 |
| ದಿನದ ಗರಿಷ್ಠ | 17,777 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹485 |
| 12 ಮೊಟ್ಟೆಗೆ | ₹63 |
| ಮೈಸೂರು | |
| 100 ಮೊಟ್ಟೆಗೆ | ₹490 |

## ಮುಹೂರ್ತ ವಹಿವಾಟು: ಜಿಗಿದ ಷೇರುಪೇಟೆ



ಮುಂಬೈ (ಪಿಟಿಐ): ದೀಪಾವಳಿ ಸಂದರ್ಭದಲ್ಲಿ ನಡೆದ ಮುಹೂರ್ತ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ದಾಖಲಿಸಿದವು. ಸೋಮವಾರ ನಡೆದ ಒಂದು ತಾಸು ಅವಧಿಯ ವಹಿವಾಟಿನಲ್ಲಿ ಹೂಡಿಕೆದಾರರು ಷೇರುಗಳ ಖರೀದಿಗೆ ಗಮನ ನೀಡಿದರು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 524 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 154 ಅಂಶ ಏರಿಕೆ ಕಂಡವು. ಸೆನ್ಸೆಕ್ಸ್‌ನ ಭಾಗವಾಗಿರುವ ಮೂವತ್ತು ಕಂಪನಿಗಳ ಪೈಕಿ ಹಿಂದುಸ್ತಾನ್ ಯೂನಿಲಿವರ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್ ಷೇರುಗಳು ಮಾತ್ರ ಇಳಿಕೆ ಕಂಡವು.

ಬಿಎಸ್‌ಇ ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಸೂಚ್ಯಂಕಗಳು ಕೂಡ ಏರಿಕೆ ಕಂಡಿವೆ. ಹಿಂದಿನ ವರ್ಷದ ಮುಹೂರ್ತ ವಹಿವಾಟಿನಲ್ಲಿ ಸೆನ್ಸೆಕ್ಸ್ 464 ಅಂಶ, ನಿಫ್ಟಿ 252 ಅಂಶ ಕುಸಿತ ಕಂಡಿದ್ದವು.

‘ದೀಪಾವಳಿಗೆ ಕೊನೆಗೊಂಡ ಒಂದು ವರ್ಷದ ಅವಧಿಯಲ್ಲಿ ದೇಶದ ಷೇರು ಮಾರುಕಟ್ಟೆಗಳು ಅಲ್ಪ ಪ್ರಮಾಣದ ಕುಸಿತ ದಾಖಲಿಸಿದ್ದರೂ, ಭಾರತವು ಇತರ ದೇಶಗಳ ಷೇರುಪೇಟೆಗಳಿಗೆ ಹೋಲಿಸಿದರೆ ವಿಶಿಷ್ಟವಾಗಿ ನಿಲ್ಲುತ್ತದೆ. ಯುರೋಪಿನಲ್ಲಿ ಯುದ್ಧ, ಹಣದುಬ್ಬರ ಹೆಚ್ಚಳ ಮತ್ತು ಬ್ಯಾಂಕ್ ಬಡ್ಡಿ ದರ ಏರಿಕೆಯ ಕಾಲಘಟ್ಟದಲ್ಲಿ ಕೂಡ ಭಾರತದ ಷೇರು ಮಾರುಕಟ್ಟೆಗಳು ಉತ್ತಮ ಸಾಧನೆ ತೋರಿರುವುದು ಪ್ರವರ್ಧಮಾನಕ್ಕೆ ಬರುತ್ತಿರುವ ಭಾರತದ ಶಕ್ತಿಯನ್ನು ತೋರಿಸುತ್ತಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಭಾರತದ ಆರ್ಥಿಕತೆಯ ಮೂಲಭೂತ ಅಂಶಗಳು ಇತರ ದೇಶಗಳಿಗೆ ಹೋಲಿಸಿದರೆ ಬಲಿಷ್ಠವಾಗಿವೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಸಣ್ಣ ಹೂಡಿಕೆದಾರರು ನೆಚ್ಚಿಕೊಳ್ಳಬಹುದಾದ ಶಕ್ತಿಗಳಾಗಿ ಬೆಳೆದಿದ್ದಾರೆ. ಈ ಸ್ಥಿತಿ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ.

### ನಿರಂತರ ಮಳೆಯಿಂದಾಗಿ ಕಾಫಿ ಬೆಳೆಗಾರರಿಗೆ ಸಂಕಷ್ಟ

# ಹಣ್ಣಾದ ಕಾಫಿಬೀಜ ಮಣ್ಣು ಪಾಲು

● ಲೋಕೇಶ್. ಡಿ.ಪಿ

ಸೋಮವಾರಪೇಟೆ (ಕೊಡಗು ಜಿಲ್ಲೆ): ಚಳಿಗಾಲದ ಹೊಸ್ತಿಲಲ್ಲೂ ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಮುಂದುವರಿದಿದೆ. ಜಿಲ್ಲೆಯಲ್ಲಿ ಕಾಫಿ ಬೀಜ ಹಣ್ಣಾಗಿದೆ. ಬೆಳೆಗಾರರು ಅತ್ತ ಕೊಯ್ಯಲಾಗದೇ, ಗಿಡದಲ್ಲಿ ಬಿಡಲು ಆಗದೇ ಪರದಾಡುತ್ತಿದ್ದಾರೆ. ಕಾಫಿ ಹಣ್ಣುಗಳು ಉದುರಿ ಮಣ್ಣುಸೇರುತ್ತಿವೆ.

ತಾಲ್ಲೂಕಿನಲ್ಲಿಯೇ 28,590 ಹೆಕ್ಟೇರ್‌ನಲ್ಲಿ ಕಾಫಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಅಂದಾಜು 1.07 ಲಕ್ಷ ಹೆಕ್ಟೇರ್‌ನಲ್ಲಿ ಕಾಫಿ ಕೃಷಿ ಇದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಿಂದಲೇ ಅರೇಬಿಕಾ ಕಾಫಿ ಹಣ್ಣಾಗಲು ಪ್ರಾರಂಭವಾಗಿದೆ. ನಿರಂತರ ಮಳೆಯಿಂದಾಗಿ ಗಿಡದಿಂದ ಕಾಫಿ ಬೀಜ ಬಿಡಿಸಲೂ ಸಾಧ್ಯವಾಗುತ್ತಿಲ್ಲ. ಉದುರುತ್ತಿರುವ ಕಾಫಿ ಹಣ್ಣುಗಳು ಪಕ್ಷಿಗಳ ಪಾಲಾಗುತ್ತಿವೆ.



ಕಾಫಿಬೆಳೆ ಕೊಯ್ಲು ಮಾಡುತ್ತಿರುವ ಕಾರ್ಮಿಕ ಮಹಿಳೆ

ಇಲ್ಲಿಯವರೆಗೂ ಹೆಚ್ಚಿನ ಕಾಫಿ ತೋಟಗಳಲ್ಲಿ ಕಾರ್ಮಿಕರ ಕೊರತೆಯಿಂದಾಗಿ ಕಳೆ ತೆಗೆಯುವುದು ಸೇರಿದಂತೆ, ನಿಯಮಿತವಾಗಿ ಕೃಷಿ ಚಟುವಟಿಕೆಯೂ ಸಾಧ್ಯವಾಗಿಲ್ಲ.

‘ಗಿಡದಿಂದ ಕಾಫಿ ಬಿಡಿಸಿದರೂ, ಒಣಗಿಸಲು ಮಳೆ ಬಿಡುವು ನೀಡುತ್ತಿಲ್ಲ. ಇದರಿಂದ ಗುಣಮಟ್ಟ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ’ ಎಂದು ಕಾಫಿ ಬೆಳೆಗಾರ, ಗಣಗೂರು ಗ್ರಾಮದ ಕಿರಣ್ ಅವರು ತಿಳಿಸಿದರು.

‘ಹಣ್ಣು ಉದುರಿ ಮಣ್ಣು ಸೇರುತ್ತಿದೆ. ಮಳೆ ಏರಿಳಿತದಿಂದಾಗಿ ಹಲವೆಡೆಗಳಲ್ಲಿ ಕಾಫಿ ಮತ್ತು ಕಾಳು ಮೆಣಸು ಫಸಲು ಹಾಗೂ ಗಿಡಗಳು ನಾಶವಾಗಿವೆ’ ಎಂದು ಹೆಗ್ಗುಳ ಗ್ರಾಮದ ಕಾಫಿ ಬೆಳೆಗಾರ ಸತೀಶ್ ಅವರು ಮಾಹಿತಿ ನೀಡಿದರು.

ಕಾಫಿ ತೋಟದ ನಿರ್ವಹಣೆ ಕಷ್ಟಕರವಾಗುತ್ತಿದೆ. ಪ್ರಸಕ್ತ ವರ್ಷ 50 ಕೆ.ಜಿ. ತೂಕದ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿ ಚೀಲಕ್ಕೆ ಈಗ ₹ 16 ಸಾವಿರದವರೆಗೆ ಬೆಲೆ ಇದೆ. ಆದರೆ, ಹವಾಮಾನ ವೈಪರೀತ್ಯದಿಂದಾಗಿ ಅದರ ಲಾಭ ಬೆಳೆಗಾರರಿಗೆ ದಕ್ಕುತ್ತಿಲ್ಲ.

‘ಅಕಾಲಿಕ ಮಳೆ, ಕಾರ್ಮಿಕರ ಕೊರತೆ, ಉತ್ಪಾದನಾ ವೆಚ್ಚ ಹೆಚ್ಚಳ, ಸರ್ಕಾರದ ನಿರ್ಲಕ್ಷ್ಯದಿಂದಾಗಿ ಜಿಲ್ಲೆಯಲ್ಲಿ ಕಾಫಿ ಕೃಷಿ ನಾಶವಾಗುವ ಹಂತ ತಲುಪಿದೆ. ಕಾಫಿ ಹೂ ಅರಳುವ ಸಂದರ್ಭದಲ್ಲಿ ಮಳೆ ಬೀಳುವುದಿಲ್ಲ. ಕೊಯ್ಲಿನ ಸಮಯದಲ್ಲೂ ಬೀಳುತ್ತಿದೆ. ಫಸಲು ಹಾನಿಯಿಂದಾದ ಬೆಳೆಗಾರರ ಕಷ್ಟವನ್ನು ಕೇಳುವವರು ಇಲ್ಲದಂತಾಗಿದೆ’ ಎಂದು ಸೋಮವಾರಪೇಟೆ ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಮೋಹನ್ ಬೋಪಣ್ಣ ಅವರು ಬೇಸರ ವ್ಯಕ್ತಪಡಿಸಿದರು.

## ಕಿರಣ್ ಮಜುಂದಾರ್ ಪತಿ ಜಾನ್ ಶಾ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು (ಪಿಟಿಐ): ಬಯೋಕಾನ್ ಕಂಪನಿಯ ಕಾರ್ಯನಿರ್ವಾಹಕ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಅವರ ಪತಿ ಜಾನ್ ಶಾ (73) ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಸೋಮವಾರ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರು ಕೆಲವು ಕಾಲದಿಂದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದರು.

ಜಾನ್ ಶಾ ಅವರು ಬಯೋಕಾನ್ ಲಿಮಿಟೆಡ್ ಕಂಪನಿಯ ಮಾಜಿ ಉಪಾಧ್ಯಕ್ಷ ಕೂಡ ಹೌದು. ಅವರು, ಮಧುರಾ ಕೋಟ್ಸ್ ಲಿಮಿಟೆಡ್‌ನ ಅಧ್ಯಕ್ಷರಾಗಿ 1991ರಿಂದ 1998 ರವರೆಗೆ ಕೆಲಸ ಮಾಡಿದ್ದರು. ಕೋಟ್ಸ್ ವಿಯೆಲ್ಲಾ ಗ್ರೂಪ್‌ನ ಹಣಕಾಸು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಕೂಡ ಕರ್ತವ್ಯ ನಿಭಾಯಿಸಿದ್ದರು.



ಜಾನ್ ಶಾ

1999ರಲ್ಲಿ ಬಯೋಕಾನ್ ಆಡಳಿತ ಮಂಡಳಿಯನ್ನು ಸೇರುವ ಮೊದಲು ಜಾನ್ ಶಾ ಅವರು ಕೋಟ್ಸ್ ವಿಯೆಲ್ಲಾ ಕಂಪನಿಯಲ್ಲಿ ಮೂವತ್ತು ವರ್ಷ ಕರ್ತವ್ಯ ನಿಭಾಯಿಸಿದ್ದರು.

‘ಸಣ್ಣ ಕಂಪನಿಯಾಗಿದ್ದ ಬಯೋಕಾನ್, ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧವಾಗಿ ಬೆಳೆಯುವಲ್ಲಿ ಜಾನ್ ಶಾ ಅವರ ಕೊಡುಗೆ ಬಹಳ ದೊಡ್ಡದು. ಉಪಾಧ್ಯಕ್ಷರಾಗಿ ಅವರು ಬಯೋಕಾನ್ ಸಮೂಹವು ಹಣಕಾಸಿನ ವಿಚಾರಗಳಲ್ಲಿ ಬೆಳವಣಿಗೆ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಂಪನಿಯ ಕಾರ್ಪೊರೇಟ್ ಆಡಳಿತಕ್ಕೆ ಅವರ ಕೊಡುಗೆ ಮಹತ್ವದ್ದು’ ಎಂದು ಕಂಪನಿ ಹೇಳಿದೆ.

ಕಿರಣ್ ಅವರ ತಾಯಿ ಯಾಮಿನಿ ಮಜುಂದಾರ್ ಅವರು ಕೂಡ ಜೂನ್ ತಿಂಗಳಲ್ಲಿ ಕ್ಯಾನ್ಸರ್ ಕಾರಣದಿಂದಾಗಿ ಮೃತಪಟ್ಟಿದ್ದರು. ಕಿರಣ್ ಅವರು ಜಾನ್ ಶಾ ಅವರ ಜೊತೆ 1998ರಲ್ಲಿ ವಿವಾಹ ಆಗಿದ್ದರು.

## ಕೆನ್ಯಾದಲ್ಲಿ ಪಾಕಿಸ್ತಾನ ಪತ್ರಕರ್ತನ ಹತ್ಯೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಹಿರಿಯ ಪತ್ರಕರ್ತನನ್ನು ಕೆನ್ಯಾದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ಅವರ ಪತ್ನಿ ಸೋಮವಾರ ಹೇಳಿದ್ದಾರೆ.

ಈ ಪತ್ರಕರ್ತನ ವಿರುದ್ಧ ದೇಶದ ಭದ್ರತಾ ಸಂಸ್ಥೆಗಳು ದೇಶದ್ರೋಹ ಆರೋಪ ಪ್ರಕರಣ ದಾಖಲಿಸಿದ್ದವು.

ಎಆರ್‌ವೈ ಟಿವಿಯ ಮಾಜಿ ವರದಿಗಾರ ಮತ್ತು ಟಿ.ವಿ ನಿರೂಪಕ ಅರ್ಷದ್ ಷರೀಫ್ (49) ಅವರು ಕೆನ್ಯಾಗೆ ಸ್ಥಳಾಂತರಗೊಂಡಿದ್ದರು. ಷರೀಫ್ ಅವರ ಪತ್ನಿ ಜವೇರಿಯಾ ಸಿದ್ದಿಕ್, ಸೋಮವಾರ ಟ್ವಿಟರ್‌ನಲ್ಲಿ ಅವರ ಸಾವಿನ ಸುದ್ದಿ ಖಚಿತಪಡಿಸಿದ್ದಾರೆ.

‘ನಾನು ಇಂದು ಸ್ನೇಹಿತ, ಪತಿ ಮತ್ತು ನೆಚ್ಚಿನ ಪತ್ರಕರ್ತನನ್ನು ಕಳೆದುಕೊಂಡಿದ್ದೇನೆ. ಪೊಲೀಸರ ಪ್ರಕಾರ ಕೆನ್ಯಾದಲ್ಲಿ ಗುಂಡಿಟ್ಟು ಕೊಲೆ ಮಾಡಲಾಗಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಅಸೋಸಿಯೇಟೆಡ್ ಪ್ರೆಸ್ ವರದಿ ಪ್ರಕಾರ, ಮಕ್ಕಳ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ರೀತಿಯ ಕಾರನ್ನು ಹುಡುಕುವ ಸಂದರ್ಭದಲ್ಲಿ ಷರೀಫ್ ಅವರನ್ನು ಭಾನುವಾರ ರಾತ್ರಿ ಕೆನ್ಯಾ ಪೊಲೀಸರು ಗುಂಡಿಕ್ಕಿ ಕೊಂದಿದ್ದಾರೆ.

ಇಮ್ರಾನ್ ಖಾನ್ ಅವರ ತೆಹ್ರೀಕ್‌-ಎ-ಇನ್ಸಾಫ್ ಪಕ್ಷ ಮತ್ತು ಅದರ ಹಿರಿಯ ನಾಯಕರು ಷರೀಫ್ ಹತ್ಯೆ ಖಂಡಿಸಿ, ತನಿಖೆಗೆ ಒತ್ತಾಯಿಸಿದ್ದಾರೆ.



| Per word | Ordinary | Bold | Ordinary Semi Display | Bold Semi Display |
|---|---|---|---|---|
| | 70 | 100 | 80 | 135 |
| CD Per Sqcm | Single Col | Double Col | Multi Col | |
| | 480 | 450 | 475 | |

| SPECIAL OFFER | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

ಸಂಕ್ಷಿಪ್ತ ಸುದ್ದಿ

## ಹಳಿತಪ್ಪಿದ ಸರಕು ರೈಲಿನ ಬೋಗಿಗಳು: ಸಂಚಾರ ರದ್ದು

**ನಾಗ್ಪುರ (ಪಿಟಿಐ):** ಸರಕು ಸಾಗಣೆ ರೈಲೊಂದರ 20 ಬೋಗಿಗಳು ಹಳಿತಪ್ಪಿದ ಪ್ರಕರಣ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿ ಭಾನುವಾರ ರಾತ್ರಿ 11:30ಕ್ಕೆ ನಡೆದಿದೆ. ಇದರಿಂದಾಗಿ ರೈಲು ಮಾರ್ಗಕ್ಕೆ ಅಡಚಣೆ ಆದ ಕಾರಣ ಹಲವಾರು ಪ್ರಯಾಣಿಕ ರೈಲುಗಳನ್ನು ರದ್ದು-ಗೊಳಿಸಲಾಯಿತು, ಕೆಲ ರೈಲುಗಳ ಮಾರ್ಗ ಬದಲಿಸಿ ಸಂಚಾರಕ್ಕೆ ಅನುವು ಮಾಡಲಾಯಿತು, ಇನ್ನೂ ಕೆಲವು ರೈಲುಗಳ ಸಂಚಾರವನ್ನು ಕೆಲ ಕಾಲ ತಡೆಹಿಡಿಯಲಾಯಿತು ಎಂದು ರೈಲ್ವೆ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದರು.

ನಾಗ್ಪುರ ವಿಭಾಗದ ಮಾಲ್ಖೇಡ್ ಮತ್ತು ತಿಮಾತ್ಲ ರೈಲು ನಿಲ್ದಾಣಗಳ ನಡುವೆ ಈ ಘಟನೆ ಸಂಭವಿಸಿದೆ. ಯಾವುದೇ ಸಾವಿನ ವರದಿಯಾಗಿಲ್ಲ ಎಂದು ಕೇಂದ್ರೀಯ ರೈಲ್ವೆ ತಿಳಿಸಿದೆ.

## ಸಗಣಿಯಿಂದ ತಯಾರಿಸಿದ್ದ ಹಣತೆ ಬಳಕೆ

**ಲಖನೌ (ಪಿಟಿಐ):** ಅಯೋಧ್ಯೆಯಲ್ಲಿ ಭಾನುವಾರ ಏಕಕಾಲದಲ್ಲಿ 15 ಲಕ್ಷ ದೀಪಗಳು ಏಕಕಾಲದಲ್ಲಿ ಬೆಳಗಿದವು. ಈ ದೃಶ್ಯವನ್ನು ಮುಜಾಫರ್‌ನಗರದ ತನ್ನ ಮನೆಯಲ್ಲಿ ಕುಳಿತು ಟಿ.ವಿ.ಯಲ್ಲಿ ನೋಡಿದ ಸಂದೀಪ್ ಅರ್ಯ ಅವರ ಕಣ್ಣಾಲಿಗಳು ತುಂಬಿ ಬಂದವು.

ದೀಪೋತ್ಸವದಲ್ಲಿ ಬೆಳಗಿದ ಬಹುತೇಕ ಹಣತೆಗಳನ್ನು ಸಗಣಿಯಿಂದ ತಯಾರಿಸಿದ್ದು, ಅಯೋಧ್ಯೆಯ ಆಡಳಿತಕ್ಕೆ ನೀಡಲಾಗಿತ್ತು. ತಾನು ನಡೆಸುವ ಗೋಶಾಲೆ ಜೊತೆಗೆ ಸಹಭಾಗಿತ್ವವಿದ್ದ 300 ಮಹಿಳೆಯರು ಈ ಹಣತೆಗಳನ್ನು ತಯಾರಿಸಿದ್ದರು.

## ಸಿಡಿಮದ್ದು ಸ್ಫೋಟ ಮಹಿಳೆ ಸಾವು

**ಗೊಂಡಾ (ಪಿಟಿಐ):** ಪಟಾಕಿ ತಯಾರಿಸಲು ಮನೆಯಲ್ಲಿ ಸಂಗ್ರಹಿಸಿದ್ದ ಸಿಡಿಮದ್ದುಗಳು ಸ್ಫೋಟಗೊಂಡು ಮಹಿಳೆಯೊಬ್ಬರು ಮೃತಪಟ್ಟು, ಅವರ ಮಗ ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ನವಾಬ್‌ಗಂಜ್ ಪ್ರದೇಶದಲ್ಲಿ ಸೋಮವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ಮಹಿಳೆಯನ್ನು ಖೈರುನ್ನಿಶಾ (52) ಮತ್ತು ಗಾಯಗೊಂಡ ವ್ಯಕ್ತಿಯನ್ನು ಇಬ್ರಾಹಿಂ (32) ಎಂದು ಗುರುತಿಸಲಾಗಿದೆ. ಸ್ಫೋಟದಿಂದ ಮನೆಯ ಛಾವಣಿಯು ಹಾನಿಗೀಡಾಗಿದೆ ಮತ್ತು ಪಕ್ಕದ ಮನೆಗೂ ಹಾನಿಯಾಗಿದೆ. ವಿಧಿವಿಜ್ಞಾನ ತಂಡವು ಸ್ಥಳಕ್ಕೆ ಧಾವಿಸಿದ್ದು, ಕೂಲಂಕುಶವಾಗಿ ತನಿಖೆ ನಡೆಸಲಾಗುತ್ತಿದೆ ಪೊಲೀಸರು ಮಾಹಿತಿ ನೀಡಿದ್ದಾರೆ.

## ಟಿಎಂಸಿಯ ಮುಖಂಡರ ಜೊತೆಗೆ ಸುವೇಂದು ಚರ್ಚೆ!

**ಸುರಿ, ಪಶ್ಚಿಮ ಬಂಗಾಳ (ಪಿಟಿಐ):** ವಿಧಾನಸಭೆಯ ವಿರೋಧಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಸೋಮವಾರ ಇಲ್ಲಿನ ಕಾಳಿ ದೇವಸ್ಥಾನ ದಲ್ಲಿ ಸ್ಥಳೀಯ ಸುರಿ ನಗರಸಭೆಯ ಇಬ್ಬರು ಟಿಎಂಸಿ ಸದಸ್ಯರ ಜೊತೆಗೆ ಕಾಣಿಸಿಕೊಂಡಿರುವುದು ಹಲವು ಊಹಾಪೋಹಗಳಿಗೆ ಕಾರಣವಾಗಿದೆ.

ಬಿರ್‌ಭುಮ್ ಜಿಲ್ಲೆಯ ಸುರಿ ಪಟ್ಟಣದ ಕಾಳಿ ದೇವಸ್ಥಾನದಲ್ಲಿ ಅಧಿಕಾರಿ ಮತ್ತು ಸುರಿ ನಗರಸಭೆಯ ಮಾಜಿ ಅಧ್ಯಕ್ಷರೂ ಆದ ಉಜ್ವಲ್ ಚಟರ್ಜಿ ಮತ್ತು ಸದಸ್ಯ ಕುಂದನ್ ಡೇ ಅವರ ನಡುವೆ ಸಭೆ ನಡೆದಿದೆ. ಸುವೇಂದು ಅಧಿಕಾರಿ ಅವರೇ ಈ ಸಭೆಯ ಚಿತ್ರವನ್ನು ಟ್ವೀಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಸದ್ಯ, ಪುರಿ ನಗರಸಭೆ ಅಧ್ಯಕ್ಷರಾಗಿರುವ ಅನುಬ್ರತಾ ಮೊಂಡಲ್ ಅವರು ಜಾನುವಾರುಗಳ ಕಳ್ಳಸಾಗಣೆ ಪ್ರಕರಣದ ಸಂಬಂಧ ಸಿಬಿಐ ವಶದಲ್ಲಿದ್ದಾರೆ. ಮೊಂಡಲ್ ಅವರನ್ನು ಈ ಹಿಂದೆ ಅಧಿಕಾರಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು.

ಸುವೇಂದು ಅಧಿಕಾರಿ ಅವರ ಜೊತೆಗಿನ ಭೇಟಿ ಕಾಕತಾಳೀಯವಾಗಿದ್ದು, ಇದಕ್ಕೆ ಯಾವುದೇ ರಾಜಕೀಯ ಮಹತ್ವವಿಲ್ಲ ಎಂದು ಸುರಿ ನಗರಸಭೆಯ ಇಬ್ಬರು ಸದಸ್ಯರು ಪ್ರತಿಕ್ರಿಯಿಸಿದ್ದಾರೆ.

ಯೋಧರ ಜೊತೆ ಕಾರ್ಗಿಲ್‌ನಲ್ಲಿ ದೀಪಾವಳಿ ಆಚರಿಸಿದ ಮೋದಿ • ಪ್ರಧಾನಿಯಿಂದ ಶಾಂತಿಮಂತ್ರ

# ‘ಯುದ್ಧ ಆದ್ಯತೆಯಲ್ಲ, ಕೊನೆಯ ಆಯ್ಕೆ’

**ಕಾರ್ಗಿಲ್ (ಪಿಟಿಐ):** ‘ಭಾರತ ಎಂದಿಗೂ ಶಾಂತಿಯನ್ನು ಬಯಸುತ್ತದೆ. ಯುದ್ಧವು ದೇಶದ ಆದ್ಯತೆಯಲ್ಲ, ಅದು ಕೊನೆಯ ಆಯ್ಕೆ. ನಮ್ಮ ಸಶಸ್ತ್ರ ಪಡೆಗಳು ಬಲಿಷ್ಠವಾಗಿವೆ. ದೇಶದ ಮೇಲೆ ಕೆಂಗಣ್ಣು ಬೀರುವ ದುಷ್ಟ ಶಕ್ತಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲು ಸಮರ್ಥವಾಗಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದರು.

ಕಾರ್ಗಿಲ್‌ಗೆ ಸೋಮವಾರ ಭೇಟಿ ನೀಡಿದ ಪ್ರಧಾನಿ, ಯೋಧರ ಜೊತೆ ದೀಪಾವಳಿ ಆಚರಿಸಿ, ಮಾತನಾಡಿದರು. ಭಾರತವು ಯುದ್ಧವನ್ನು ವಿರೋಧಿಸುತ್ತದೆ. ಆದರೆ ಶಾಂತಿ ವಾತಾವರಣ ಇರಬೇಕಾದರೆ ಶಕ್ತಿ ಅಗತ್ಯ ಎಂದು ಅವರು ಒತ್ತಿ ಹೇಳಿದರು. ದೇಶದ ಶಕ್ತಿಯು ವೃದ್ಧಿಯಾಗುತ್ತಿದ್ದು, ಜಾಗತಿಕ ಶಾಂತಿ ಹಾಗೂ ಸಮೃದ್ಧಿಗೂ ನೆರವಾಗಲಿದೆ ಎಂದ ಅವರು, ‘ಸಮತೋಲಿತ ಶಕ್ತಿ’ಯನ್ನು ಹೊಂದಿರುವ ಭಾರತದತ್ತ ಇಡೀ ಜಗತ್ತು ನೋಡುತ್ತಿದೆ ಎಂದು ಪ್ರತಿಪಾದಿಸಿದರು.

ರಾಮಾಯಣ ಹಾಗೂ ಮಹಾಭಾರತವನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಪ್ರಧಾನಿ, ಲಂಕಾ ಆಗಿರಲಿ ಅಥವಾ ಕುರುಕ್ಷೇತ್ರವಾಗಿರಲಿ, ಯುದ್ಧವನ್ನು ತಪ್ಪಿಸುವುದು ಭಾರತದ ಸಂಸ್ಕೃತಿ. ಜಾಗತಿಕ ಶಾಂತಿಯನ್ನು ಭಾರತ ಬಯಸುತ್ತದೆ ಎಂದು ಅವರು ಹೇಳಿದರು.

‘ಏಳೆಂಟು ವರ್ಷಗಳ ಅವಧಿಯಲ್ಲಿ ದೇಶದ ಆರ್ಥಿಕತೆಯು ಐದನೇ ಸ್ಥಾನಕ್ಕೆ ಜಿಗಿದು, ಬೃಹತ್ ಆರ್ಥಿಕ ಶಕ್ತಿಯಾಗಿ ಬದಲಾಗಿದೆ. ದೇಶದಲ್ಲಿ 80 ಸಾವಿರ ನವೋದ್ಯಮಗಳು ಜನ್ಮತಳೆದಿವೆ. ಇಸ್ರೊ ದಾಖಲೆಯ 36 ಉಪಗ್ರಹಗಳನ್ನು ಏಕಕಾಲಕ್ಕೆ ಉಡ್ಡಯನ ಮಾಡಿದೆ. ಈ ಎಲ್ಲವೂ ಹೆಮ್ಮೆ ಮೂಡಿಸುತ್ತವೆ’ ಎಂದು ಮೋದಿ ಪ್ರತಿಪಾದಿಸಿದರು.

ದೇಶದಿಂದ ಭಯೋತ್ಪಾದನೆ, ನಕ್ಸಲ್‌ವಾದ ಹಾಗೂ ತೀವ್ರವಾದವನ್ನು ಹೊರಗಟ್ಟಲು ಸರ್ಕಾರ ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದ್ದು, ಆಂತರಿಕ ಹಾಗೂ ಬಾಹ್ಯ ಶತ್ರುಗಳ ವಿರುದ್ಧ ದೇಶ ಹೋರಾಡುತ್ತಿದೆ ಎಂದರು.

‘ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ಭಾರತವು ನಿರ್ಣಾಯಕ ಘಟ್ಟದಲ್ಲಿದೆ. ಭ್ರಷ್ಟ ವ್ಯಕ್ತಿಯು ಎಷ್ಟೇ ಪ್ರಭಾವಿಯಾಗಿದ್ದರೂ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಪ್ರಧಾನಿ ಹೇಳಿದರು.

ರಾಜಕೀಯ ನಾಯಕರನ್ನು ಹಣಿಯಲು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಸರ್ಕಾರ ಬಳಸಿಕೊಳ್ಳುತ್ತಿದೆ ಎಂಬುದಾಗಿ ಪ್ರತಿಪಕ್ಷಗಳು ಆರೋಪಿಸುತ್ತಿವೆ. ಆದರೆ ಆಡಳಿತಾರೂಢ ಬಿಜೆಪಿ ಈ ಆರೋಪಗಳನ್ನು ಅಲ್ಲಗಳೆದಿದೆ.

ದೇಶದ ಅಭಿವೃದ್ಧಿ ಹಾಗೂ ಸಾಮರ್ಥ್ಯ ವೃದ್ಧಿಗೆ ಇದ್ದ ಅವಕಾಶಗಳನ್ನು ತಡೆಹಿಡಿದಿದ್ದ ಹಿಂದಿನ ಸರ್ಕಾರಗಳನ್ನು ಟೀಕಿಸಿದ ಪ್ರಧಾನಿ, ದುರ್ಬಲ ಆಡಳಿತದ ನ್ಯೂನತೆಗಳನ್ನು ತಮ್ಮ ಸರ್ಕಾರ ಸರಿಪಡಿಸಿದ ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಗಿಲ್‌ನಲ್ಲಿ ಸೋಮವಾರ ಭಾಗಿಯಾಗಿದ್ದ ದೀಪಾವಳಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಯೋಧರು ಸಂಭ್ರಮಿಸಿದರು
– ಪಿಟಿಐ ಚಿತ್ರ

### ಮುಖ್ಯಾಂಶಗಳು

- ಆತ್ಮನಿರ್ಭರದಿಂದ ರಕ್ಷಣಾ ಸ್ವಾವಲಂಬನೆಯತ್ತ ಹೆಜ್ಜೆ
- 400ಕ್ಕೂ ಹೆಚ್ಚು ರಕ್ಷಣಾ ಸಲಕರಣೆ ಆಮದು ಸ್ಥಗಿತ
- ದೇಶದಲ್ಲೇ ತಯಾರಾಗುತ್ತಿವೆ ರಕ್ಷಣಾ ಸಾಮಗ್ರಿ:ಮೋದಿ

**ಭಾರತದ ಭದ್ರತೆಗೆ ಸಶಸ್ತ್ರ ಪಡೆಗಳೇ ಆಧಾರ ಸ್ತಂಭ. ಉಕ್ರೇನ್ ಯುದ್ಧದ ಸಮಯದಲ್ಲಿ ತ್ರಿವರ್ಣಧ್ವಜ ರಕ್ಷಣಾ ಕವಚವಾಗಿ ಕೆಲಸ ಮಾಡಿತ್ತು**
**ನರೇಂದ್ರ ಮೋದಿ,** ಪ್ರಧಾನಿ

### ಹುತಾತ್ಮರ ಸ್ಮರಣೆ

ಪ್ರತೀ ವರ್ಷದ ದೀಪಾವಳಿಯನ್ನು ಯೋಧರ ಜೊತೆ ಆಚರಿಸುವ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಾರಿಯೂ ಸಂಪ್ರದಾಯ ಮುಂದುವರಿಸಿದ್ದಾರೆ. 1999ರಲ್ಲಿ ಪಾಕಿಸ್ತಾನದ ಜೊತೆ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತದ ಯೋಧರು ಪರಾಕ್ರಮ ತೋರಿದ್ದರು. ಈ ಜಾಗದಲ್ಲಿ ಯೋಧರ ಜೊತೆ ಪ್ರಧಾನಿ ಅವರು ಈ ಬಾರಿಯ ಹಬ್ಬ ಆಚರಿಸಿದರು. ಯೋಧರ ಹೋರಾಟವನ್ನು ಸ್ಮರಿಸಿದ ಅವರು, ಯೋಧರ ಕುಟುಂಬ ತಮ್ಮ ಕುಟುಂಬ ಎಂದರು. ದೀಪಾವಳಿಯ ಸಿಹಿ ಹಾಗೂ ಬೆಳಕನ್ನು ಯೋಧರ ಮಧ್ಯದಲ್ಲೇ ಕಾಣುತ್ತೇನೆ ಎಂದರು.

2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಪ್ರತೀ ವರ್ಷದ ದೀಪಾವಳಿಯನ್ನು ವಿವಿಧ ಸೇನಾ ನೆಲೆಗಳಲ್ಲಿ ಪ್ರಧಾನಿ ಆಚರಿಸಿದ್ದಾರೆ. 2014ರಲ್ಲಿ ದೀಪಾವಳಿಯನ್ನು ಸಿಯಾಚಿನ್‌ನಲ್ಲಿ ಆಚರಿಸಿದ್ದರು. 2015ರಲ್ಲಿ ಪಂಜಾಬ್, 2016ರಲ್ಲಿ ಚೀನಾ ಗಡಿ ಸಮೀಪಕ್ಕೆ ಹೋಗಿದ್ದರು. ಅದರ ಮರುವರ್ಷ ಉತ್ತರ ಕಾಶ್ಮೀರದ ಗುರೆಜ್, 2018ರಲ್ಲಿ ಉತ್ತರಾಖಂಡದ ಹರ್ಸಿಲ್‌ನಲ್ಲಿ ಯೋಧರ ಜತೆ ದಿನ ಕಳೆದಿದ್ದರು. 2019ರಲ್ಲಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಾಗ ಅವರು ಜಮ್ಮು ಕಾಶ್ಮೀರದ ರಜೌರಿಗೆ ತೆರಳಿದ್ದರು. ನಂತರದ ವರ್ಷ ಲೊಂಗೇವಾಲಾದಲ್ಲಿದ್ದರು. ಕಳೆದ ವರ್ಷ ನೌಶೇರಾದಲ್ಲಿ ದೀಪಾವಳಿ ಸಡಗರದಲ್ಲಿ ಭಾಗಿಯಾಗಿದ್ದರು.

## ಟೆಕ್ಸಾಸ್‌ನಲ್ಲಿ ದೀಪಾವಳಿ ಆಚರಣೆ

**ಹ್ಯೂಸ್ಟನ್(ಪಿಟಿಐ):** ಅಮೆರಿಕದ ಟೆಕ್ಸಾಸ್‌ನ ಗವರ್ನರ್ ಗ್ರೆಗ್ ಅಬಾಟ್ ಅವರು ಆಸ್ಟಿನ್‌ನಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ಭಾನುವಾರ ಇಂಡೊ-ಅಮೆರಿಕನ್ ಸಮುದಾಯದವರೊಂದಿಗೆ ಸೋಮವಾರ ದೀಪಾವಳಿ ಆಚರಿಸಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಬ್ಬದ ಶುಭಾಶಯ ಕೋರಿದ್ದಾರೆ.

ಅಬಾಟ್ ಮತ್ತು ಪ್ರಥಮ ಮಹಿಳೆ ಸೆಸಿಲಿಯಾ ಅಬಾಟ್ ಅವರು ಭಾರತೀಯ ಉಡುಗೆಗಳನ್ನು ಧರಿಸಿ, ದೀಪಗಳನ್ನು ಬೆಳಗಿದರು. ಅಬಾಟ್ ದಂಪತಿ ಪ್ರಧಾನಿ ಮೋದಿ ಹಾಗೂ ಭಾರತದ ಜನರು ಹಾಗೂ ಟೆಕ್ಸಾಸ್‌ನಲ್ಲಿ ನೆಲೆಸಿರುವ ಭಾರತೀಯ ಅಮೆರಿಕನ್ನರಿಗೆ ದೀಪಾವಳಿಯ ಶುಭಾಶಯಗಳನ್ನು ಕೋರಿದರು.

‘ದೀಪಾವಳಿಯನ್ನು ನಾವು ಆಚರಿಸಿದೆವು. ಕತ್ತಲೆಯ ಮೇಲೆ ಬೆಳಕಿನ ವಿಜಯ, ಕೆಟ್ಟದ್ದರ ಮೇಲೆ ಒಳ್ಳೆಯತನ ಮತ್ತು ಹತಾಶೆಯ ಮೇಲೆ ಭರವಸೆಯ ವಿಜಯವನ್ನು ಆಚರಿಸಿದೆವು. ಬೆಳಕಿನ ಹಬ್ಬವನ್ನು ಆಚರಿಸುವವರಿಗೆ ದೀಪಾವಳಿಯ ಶುಭಾಶಯಗಳು!’ ಅಬಾಟ್ ಟ್ವೀಟ್ ಮಾಡಿದ್ದಾರೆ.

ದೀಪಾವಳಿ ಆಚರಣೆಯ ಸಂದರ್ಭದಲ್ಲಿ ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

# ಮುಂದಿನ 2 ತಿಂಗಳಲ್ಲಿ ಪ್ರಧಾನಿ 3 ಬಾರಿ ರಾಜ್ಯಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2023 ರ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನವೆಂಬರ್‌ನಿಂದ ಡಿಸೆಂಬರ್ ಅವಧಿ ಯಲ್ಲಿ ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಲಿದ್ದಾರೆ.

ನವೆಂಬರ್ 11ರಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ದಲ್ಲಿ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆಯನ್ನು ಅನಾವರಣ ಗೊಳಿಸಲಿದ್ದಾರೆ. ಆ ಬಳಿಕ ಡಿಸೆಂಬರ್‌ನಲ್ಲಿ ಕಾರವಾರ ಮತ್ತು ಶಿವಮೊಗ್ಗದಲ್ಲಿ ನಡೆಯುವ ಕಾರ್ಯ ಕ್ರಮಗಳಲ್ಲಿ ಭಾಗವಹಿಸಲಿದ್ದು, ಬಿಜೆಪಿ ಪರ ಅಲೆ ಎಬ್ಬಿಸುವ ಪ್ರಯತ್ನ ನಡೆ ಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಮೋದಿಯವರನ್ನು ಕರೆಸಬೇಕು ಎಂಬ ಬೇಡಿಕೆ ಇದೆ. ‘ಸಾಮಾನ್ಯವಾಗಿ ಮೋದಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಭೇಟಿ ನೀಡುತ್ತಾರೆ. ನಮ್ಮ ಭಾಗಕ್ಕೆ ಬಂದಿಲ್ಲ. ಆದ್ದರಿಂದ ಚುನಾವಣೆಗೂ ಮುನ್ನ ಕಾರವಾರಕ್ಕೆ ಭೇಟಿ ನೀಡಬೇಕು ಎಂಬ ಬೇಡಿಕೆ ಇಟ್ಟಿದ್ದೇವೆ, ಅವರು ಬರುವ ಸಾಧ್ಯತೆ ಇದೆ’ ಎಂದು ಕಾರವಾರದ ಬಿಜೆಪಿ ಮೂಲಗಳು ಹೇಳಿವೆ.

**ಚುನಾವಣಾ ತಂತ್ರಗಾರಿಕೆ ಶಾ ಕೈಗೆ:** ‘ಗೃಹ ಸಚಿವ ಅಮಿತ್ ಶಾ ಅವರು ಹಿಮಾಚಲ ಪ್ರದೇಶ ಮತ್ತು ಗುಜರಾತ್ ರಾಜ್ಯಗಳ ವಿಧಾನಸಭಾ ಚುನಾವಣೆಯ ಬಳಿಕ ಕರ್ನಾಟಕದ ಚುನಾವಣೆಯತ್ತ ಚಿತ್ತ ಹರಿಸಲಿದ್ದಾರೆ. ಇಲ್ಲಿನ ಚುನಾವಣೆಯ ತಂತ್ರಗಳನ್ನು ಅವರೇ ರೂಪಿಸುವುದರ ಜತೆಗೆ, ಚುಕ್ಕಾಣಿಯನ್ನೂ ಅವರೇ ನೋಡಿಕೊಳ್ಳಲಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಸದ್ಯಕ್ಕೆ ಎರಡು ರಾಜ್ಯಗಳ ಚುನಾವಣೆ ಮುಗಿಯುವವರೆಗೆ ರಾಜ್ಯದಲ್ಲಿ ಅಭಿವೃದ್ಧಿ ಮತ್ತು ಬಾಕಿ ಉಳಿದಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಗಮನ ಕೇಂದ್ರೀಕರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೂಚನೆ ನೀಡಿದ್ದಾರೆ.

‘ಇದಕ್ಕೂ ಮುಂಚೆ 10 ವಿಭಾಗಗಳಿಗೆ ಒಬ್ಬರಂತೆ ಕೇಂದ್ರ ಸಚಿವರು ಅಥವಾ ನೆರೆಯ ರಾಜ್ಯಗಳಲ್ಲಿರುವ ಪಕ್ಷದ ಪ್ರಮುಖ ನಾಯಕರನ್ನು ಉಸ್ತುವಾರಿ ಗಳನ್ನಾಗಿ ನೇಮಿಸಲಾಗುವುದು. ಇವರು ತಮ್ಮ ವಿಭಾಗಗಳ ವ್ಯಾಪ್ತಿಗೆ ಬರುವ ವಿಧಾನಸಭಾ ಕ್ಷೇತ್ರಗಳ ಪೈಕಿ ಅತಿಹೆಚ್ಚು ಸ್ಥಾನಗಳನ್ನು ಗೆಲ್ಲಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಇವರು ನವೆಂಬರ್‌ನಿಂದಲೇ ಬೂತ್ ಮಟ್ಟದಿಂದ ಕಾರ್ಯ ನಿರ್ವಹಿಸುವುದರ ಜತೆಗೆ ಮಿಷನ್ 150 ಗುರಿ ಮುಟ್ಟಲು ಶ್ರಮಿಸಲಿದ್ದಾರೆ’ ಎಂದು ಬಿಜೆಪಿಯ ನಾಯಕರೊಬ್ಬರು ತಿಳಿಸಿದರು.

### ಶೇ 40ರಷ್ಟು ಹೊಸಬರಿಗೆ ಟಿಕೆಟ್?

ಜನಸಂಕಲ್ಪಯಾತ್ರೆ ಮತ್ತು ವಿವಿಧ ಮೋರ್ಚಾಗಳ ಸಮಾವೇಶ ಡಿಸೆಂಬರ್ 24ಕ್ಕೆ ಮುಗಿಯಲಿದ್ದು, ಆ ಬಳಿಕ ಪೇಜ್ ಪ್ರಮುಖ್ ಮಟ್ಟದ ಕಾರ್ಯಕರ್ತರನ್ನು ಚುನಾವಣೆಗೆ ಸನ್ನದ್ಧ ಗೊಳಿಸುವ ಕಾರ್ಯಕ್ಕೆ ವರಿಷ್ಠರು ಕೈ ಹಾಕಲಿದ್ದಾರೆ. ನಂತರ ಪಕ್ಷ ಚುನಾವಣೆಗೆ ಇನ್ನಷ್ಟು ಆಕ್ರಮಣಕಾರಿಯಾಗಿ ಹೆಜ್ಜೆ ಇಡಲಿದೆ. ಚುನಾವಣೆಯಲ್ಲಿ ಶೇ 40ರಷ್ಟು ಹೊಸಬರಿಗೆ ಟಿಕೆಟ್ ಕೊಡುವ ಸಾಧ್ಯತೆ ಇದೆ. ಪ್ರಾಮಾಣಿಕ, ನಿಷ್ಠೆಯಿಂದ ಕೆಲಸ ಮಾಡುವವರಿಗೆ ಆದ್ಯತೆ ನೀಡ ಲಾಗು ವುದು. ಭ್ರಷ್ಟಾಚಾರದಿಂದ ಹೆಸರು ಕೆಡಿಸಿ ಕೊಂಡವರಿಗೆ ಮಣೆ ಹಾಕುವುದಿಲ್ಲ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.

## ಗುಜರಾತ್: ಶೇ 30ರಷ್ಟು ಕ್ಷೇತ್ರಗಳಲ್ಲಿ ಹೊಸಬರಿಗೆ ಅವಕಾಶ?

ಪ್ರಜಾ ಮತ
ಜನತಂತ್ರದ ಹಬ್ಬ 2022

**ಅಹಮದಾಬಾದ್:** ಮೂರು ದಶಕಗಳಿಂದ ಗುಜರಾತ್‌ನಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು ಆಡಳಿತ ವಿರೋಧಿ ಅಲೆಯಿಂದ ಪಾರಾಗಲು ಹಲವು ತಂತ್ರಗಳನ್ನು ಹೆಣೆಯುತ್ತಿದ್ದು ಹಾಲಿ ಶಾಸಕರಲ್ಲಿ ಹಲವರನ್ನು ಕೈಬಿಡಲು ಮತ್ತು ಶೇ 30ರಷ್ಟು ಕ್ಷೇತ್ರಗಳಲ್ಲಿ ಹೊಸಬರಿಗೆ ಟಿಕೆಟ್ ನೀಡಲು ಚಿಂತನೆ ನಡೆಸಿದೆ.



ಅಮಿತ್ ಶಾ

ದೀಪಾವಳಿ ರಜೆ ಬಳಿಕ ಗುಜರಾತ್ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವ ಸಾಧ್ಯತೆ ಇದ್ದು ಬಿಜೆಪಿಯು 182 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಭರದ ಸಿದ್ಧತೆ ನಡೆಸಿದೆ. ಪಕ್ಷದ ಮೂಲಗಳ ಪ್ರಕಾರ, ‘ಈವರೆಗೆ ಕಂಡಿಲ್ಲದಂಥ ಪಟ್ಟಿ’ಯನ್ನು ಪಕ್ಷದ ಹೈಕಮಾಂಡ್ ಸಿದ್ಧ ಪಡಿಸುತ್ತಿದೆ. ಹೀಗಾಗಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ಎರಡು ದಿನಗಳಿಂದ ಪಕ್ಷದ ಮುಖಂಡರ ಜೊತೆ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ.

**ಹೊಸಬರಿಗೆ ಮಣೆ:** 182 ಕ್ಷೇತ್ರಗಳ ಪೈಕಿ 60ರಿಂದ 70 ಕ್ಷೇತ್ರಗಳಲ್ಲಿ (ಅಂದರೆ ಶೇ 30ರಿಂದ ಶೇ 40) ಹೊಸಬರನ್ನು ಅಭ್ಯರ್ಥಿಗಳನ್ನಾಗಿ ಮಾಡಲು ಪಕ್ಷ ಯೋಜಿಸಿದೆ. 2017ರಲ್ಲಿ ಜಯಗಳಿಸಿದ 99 ಶಾಸಕರ ಪೈಕಿ ಸುಮಾರು 25ರಿಂದ 30 ಶಾಸಕರಿಗೆ ಈ ಬಾರಿ ಟಿಕೆಟ್ ನೀಡದೆ ಇರಲು ಚಿಂತನೆ ನಡೆದಿದೆ. ಇವರಲ್ಲಿ ಕೆಲವರು ವಿಜಯ ರೂಪಾಣಿ ಅವರ ಸರ್ಕಾರದಲ್ಲಿ ಸಚಿವರೂ ಆಗಿದ್ದರು.

‘ಮೂರರಿಂದ ನಾಲ್ಕು ಬಾರಿ ಜಯಗಳಿಸಿದ ಹಿರಿಯರಿಗೂ ಈ ಬಾರಿ ಟಿಕೆಟ್ ನೀಡುವುದಿಲ್ಲ’ ಎಂದು ಪಕ್ಷದ ಮೂಲಗಳು ತಿಳಿಸಿವೆ.

### ಬಿಜೆಪಿಯ ‘ಗೌರವ ಯಾತ್ರೆ’ಗೆ ಸಿಗದ ನಿರೀಕ್ಷಿತ ಜನಸ್ಪಂದನೆ

ಗುಜರಾತ್ ಚುನಾವಣೆಯ ಪ್ರಚಾರವನ್ನು ‘ಗೌರವ ಯಾತ್ರೆ’ಯೊಂದಿಗೆ ಬಿಜೆಪಿ ಆರಂಭಿಸಿದೆ. ರಾಜ್ಯದ ಬಿಜೆಪಿ ನಾಯಕರು, ಕೇಂದ್ರ ಸಚಿವರು ಈ ಯಾತ್ರೆಯಲ್ಲಿ ಭಾಗವಹಿಸಿದ್ದರೂ ನಿರೀಕ್ಷಿತ ಮಟ್ಟದ ಜನಸ್ಪಂದನೆ ಯಾತ್ರೆಗೆ ದೊರೆಯಲಿಲ್ಲ. ಯಾತ್ರೆಯ ಸಂದರ್ಭದಲ್ಲಿ ಜನರನ್ನು ಆಕರ್ಷಿಸಲು ರಾಜ್ಯದ ನಾಯಕರಿಗೆ ಸಾಧ್ಯವಾಗಿಲ್ಲ ಎಂಬುದು ಬಿಜೆಪಿ ವರಿಷ್ಠರ ಗಮನಕ್ಕೆ ಬಂದಿದೆ. ಯಾತ್ರೆಗೆ ಜನರು ಮಿಶ್ರ ಪ್ರತಿಕ್ರಿಯೆ ನೀಡಿದ್ದಾರೆ ಎಂಬ ಸಂದೇಶ ವರಿಷ್ಠರಿಗೆ ರವಾನೆಯಾಗಿದೆ.

2002ರಲ್ಲಿನ ಕೋಮು ಗಲಭೆಯ ಬಳಿಕ, ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು ‘ಗೌರವ ಯಾತ್ರೆ’ಯನ್ನು ಪ್ರಾರಂಭಿಸಿದ್ದರು. ನಂತರ 2017ರಲ್ಲೂ ಬಿಜೆಪಿ ‘ಗೌರವ ಯಾತ್ರೆ’ ಕೈಗೊಂಡಿತ್ತು.

## ಹಿಮಾಚಲ ಪ್ರದೇಶ: ಕಾಂಗ್ರೆಸ್ ಪ್ರಚಾರಕ್ಕೆ ಪ್ರಿಯಾಂಕಾ ನೇತೃತ್ವ

**ನವದೆಹಲಿ:** ಹಿಮಾಚಲ ಪ್ರದೇಶದಲ್ಲಿ ಜೈರಾಮ್ ಠಾಕೂರ್ ನೇತೃತ್ವದ ಬಿಜೆಪಿ ಸರ್ಕಾರ ಉರುಳಿಸುವ ಭರವಸೆ ಹೊಂದಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷದ ಚುನಾವಣಾ ಪ್ರಚಾರವನ್ನು ಮುನ್ನಡೆಸಲಿದ್ದಾರೆ.

‘ಭಾರತ್ ಜೋಡೊ ಯಾತ್ರೆ’ಯಲ್ಲಿ ರಾಹುಲ್ ಗಾಂಧಿ ತೊಡಗಿಸಿಕೊಂಡಿರುವುದರಿಂದ ಹಿಮಾಚಲ ಪ್ರದೇಶದಲ್ಲಿ ಚುನಾವಣಾ ಪ್ರಚಾರ ಮುನ್ನಡೆಸುವ ಜವಾಬ್ದಾರಿಯನ್ನು ತಮ್ಮ ಸಹೋದರಿ ಪ್ರಿಯಾಂಕಾ ಗಾಂಧಿ ಅವರ ಹೆಗಲಿಗೆ ವರ್ಗಾಯಿಸಿದ್ದಾರೆ. ರಾಜಕೀಯ ಸನ್ನಿವೇಶ ಆಧರಿಸಿ ರಾಹುಲ್ ತಮ್ಮ ನಿರ್ಧಾರ ಬದಲಿಸಿ, ಕೊನೆ ಹಂತದಲ್ಲಿ ಪ್ರಚಾರದಲ್ಲಿ ಭಾಗವಹಿಸಿದರೂ ಅಚ್ಚರಿ ಇಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.



ಪ್ರಿಯಾಂಕಾ ಗಾಂಧಿ

ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಕೊನೆಗೊಂಡ ಮರು ದಿನವೇ ಅ.31ರಿಂದ ಪ್ರಿಯಾಂಕಾ ಗಾಂಧಿ ಅವರು ಎಂಟು ರ‍್ಯಾಲಿಗಳು ಮತ್ತು ರೋಡ್ ಶೋಗಳಲ್ಲಿ ಭಾಗವಹಿಸಲಿದ್ದಾರೆ. ಅ.31ರಂದು ಮಂಡಿ ಮತ್ತು ಕಲ್ಲು, ನ.3ರಂದು ಕಾಂಗ್ರಾ ಮತ್ತು ಚಂಬಾ ಹಾಗೂ ನ.7ರಂದು ಹಮಿರ್‌ಪುರ್ ಮತ್ತು ಉನಾದಲ್ಲಿ ಪ್ರಚಾರ ಮಾಡಲಿದ್ದಾರೆ. ಹಾಗೆಯೇ ನ.12ರ ಚುನಾವಣೆಗೆ ಮುನ್ನ ಪ್ರಚಾರದ ಕೊನೆ ದಿನವಾದ ನ.10 ರಂದು ಶಿಮ್ಲಾ ಮತ್ತು ಸಿರ್ಮೌರ್‌ನಲ್ಲಿ ಪ್ರಿಯಾಂಕಾ ರ‍್ಯಾಲಿ ನಡೆಸಲಿದ್ದಾರೆ.

ಕಾಂಗ್ರೆಸ್‌ಗೆ ವೀರಭದ್ರ ಸಿಂಗ್ ಅವರಂತಹ ವರ್ಚಸ್ವಿ ನಾಯಕನ ಅನುಪಸ್ಥಿತಿ ಕಾಡುತ್ತಿದೆ. ಅವರ ನಿಧನದ ನಂತರ ಅವರ ಪತ್ನಿ, ಸಂಸದೆ ಪ್ರತಿಭಾ ಸಿಂಗ್ ಅವರು ರಾಜ್ಯ ಘಟಕದ ನೇತೃತ್ವ ವಹಿಸಿಕೊಂಡು ಪಕ್ಷವನ್ನು ಮುನ್ನಡೆಸುತ್ತಿದ್ದಾರೆ.

# 9 ಕುಲಪತಿಗಳು ಸದ್ಯಕ್ಕೆ ನಿರಾಳ

ಒಂದನೇ ಪುಟದಿಂದ...

**ರಾಜ್ಯಪಾಲರಿಂದ ಷೋಕಾಸ್ ನೋಟಿಸ್:** ಇದರ ಬೆನ್ನಲ್ಲೇ ಸುದ್ದಿಗೋಷ್ಠಿ ನಡೆಸಿದ ರಾಜ್ಯಪಾಲರು, ‘ರಾಜೀನಾಮೆ ನೀಡದ ಕುಲಪತಿಗಳಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿದ್ದು, ನ.3ರಂದು ಸಂಜೆ 5ಗಂಟೆಯವರೆಗೆ ಸಮಯ ನೀಡಲಾಗಿದೆ. ಕುಲಪತಿಗಳು ನೀಡುವ ಉತ್ತರವನ್ನು ಪರಿಶೀಲಿಸಿದ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಹೇಳಿದರು.

‘ರಾಜೀನಾಮೆ ನೀಡುವ ಮೂಲಕ ಗೌರವಯುತ ನಿರ್ಗಮನಕ್ಕೆ ಕುಲಪತಿಗಳಿಗೆ ಅವಕಾಶ ನೀಡಲಾಗಿತ್ತೇ ಹೊರತು ಅವರನ್ನು ವಜಾಗೊಳಿಸಿರಲಿಲ್ಲ. ಹೀಗಾಗಿ ನೈಸರ್ಗಿಕ ನ್ಯಾಯ ನಿರಾಕರಣೆಯಾಗಿಲ್ಲ’ ಎಂದು ಖಾನ್ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು.

ಇದೇ ವೇಳೆ ಅರ್ಜಿದಾರರ ಮನವಿ ಆಲಿಸಿದ ಹೈಕೋರ್ಟ್, ರಾಜ್ಯಪಾಲರು ಈಗಾಗಲೇ ಷೋಕಾಸ್ ನೋಟಿಸ್ ನೀಡಿದ್ದಾರೆ. ಅದಕ್ಕೆ ನೀಡುವ ಉತ್ತರದ ಆಧಾರದ ಮೇಲೆ ರಾಜ್ಯಪಾಲರು ನಿರ್ಧಾರ ತೆಗೆದುಕೊಳ್ಳುವವರೆಗೆ ಕುಲಪತಿಗಳು ಅಧಿಕಾರದಲ್ಲಿ ಮುಂದುವರಿಯಬಹುದು ಎಂದು ತಿಳಿಸಿತು.

ಕುಲಪತಿಗಳ ರಾಜೀನಾಮೆ ಕೇಳುವ ಮೊದಲು ಅವರಿಗೆ ಸಮರ್ಥಿಸಿಕೊಳ್ಳಲು ಅವಕಾಶ ನೀಡದಿರುವ ಕುರಿತು ಹೈಕೋರ್ಟ್‌ನಿಂದ ಟೀಕೆಗಳು ಎದುರಾಗಬಹುದು ಎಂಬುದನ್ನು ಅರಿತ ರಾಜ್ಯಪಾಲರು, ಕೂಡಲೇ 9 ಕುಲಪತಿಗಳಿಗೆ ಷೋಕಾಸ್ ನೋಟಿಸ್ ನೀಡಲು ನಿರ್ಧರಿಸಿದರು ಎಂದು ಮೂಲಗಳು ತಿಳಿಸಿವೆ.

**ಕೆಲ ಮಾಧ್ಯಮಗಳಿಗೆ ನಿರಾಕರಣೆ:** ರಾಜ್ಯಪಾಲರು ಸೋಮವಾರ ನಡೆಸಿದ ಸುದ್ದಿಗೋಷ್ಠಿಗೆ ಬರಲು ‘ಕೈರಳಿ’, ‘ರಿಪೋರ್ಟರ್’, ‘ಮೀಡಿಯಾ ಒನ್’, ‘ಜೈ ಹಿಂದ್’ ಸುದ್ದಿ ವಾಹಿನಿಗಳಿಗೆ ಅವಕಾಶ ನೀಡಲಿಲ್ಲ. ಇದನ್ನು ವಿರೋಧಿಸಿರುವ ಕೇರಳದ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ‘ಇದು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಅತಿಕ್ರಮಣ’ ಎಂದು ದೂರಿದೆ.

### ಯೆಚೂರಿ ಕಿಡಿ

‘ಇಂತಹ ನಿರ್ದೇಶನ ನೀಡಲು ರಾಜ್ಯಪಾಲರಿಗೆ ಅಧಿಕಾರವೇ ಇಲ್ಲ. ಇದು ಕೇರಳದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸಲು ಮತ್ತು ನಾಶಪಡಿಸಲು ರಾಜಕೀಯ ಪ್ರೇರಿತ ಕ್ರಮವಾಗಿದೆ’ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಕಿಡಿಕಾರಿದ್ದಾರೆ.

**ರಾಜಭವನದ ಮುಂದೆ ಪ್ರತಿಭಟನೆ:** ರಾಜ್ಯಪಾಲರ ನಿರ್ಧಾರವನ್ನು ವಿರೋಧಿಸಿ ಎಡಪಂಥೀಯ ಸಂಘಟನೆಗಳು ರಾಜಭವನದ ಮುಂಭಾಗ ಪ್ರತಿಭಟನೆ ನಡೆಸಿವೆ. ಇನ್ನೊಂದೆಡೆ ಅಕ್ರಮ ನೇಮಕಾತಿ ವಿಚಾರವಾಗಿ ರಾಜ್ಯಪಾಲರ ನಿರ್ಧಾರವನ್ನು ಕೇರಳದ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿಸಿವೆ.

# ಮ್ಯಾನ್ಮಾರ್ ಸೇನೆ ದಾಳಿ: 60 ಜನರ ಸಾವು

**ಬ್ಯಾಂಕಾಕ್ (ಎಪಿ):** ಮ್ಯಾನ್ಮಾರ್‌ನ ಅಲ್ಪ ಸಂಖ್ಯಾತ ಕಚಿನ್ ಜನಾಂಗದ ಪ್ರಮುಖ ರಾಜಕೀಯ ಸಂಘಟನೆಯೊಂದು ಕಾರ್ಯಕ್ರಮ ಹಮ್ಮಿಕೊಂಡಿದ್ದ ವೇಳೆ ಅಲ್ಲಿನ ಸೇನೆ ವಾಯುದಾಳಿ ನಡೆಸಿದೆ. ದಾಳಿಯಲ್ಲಿ ಸಂಗೀತಗಾರರೂ ಸೇರಿ 60ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಕಚಿನ್ ಇಂಡಿಪೆಂಡೆನ್ಸ್ ಆರ್ಗನೈಸೇಷನ್ ಎಂಬ ಸಂಘಟನೆಯು ತನ್ನ 62ನೇ ವಾರ್ಷಿಕೋತ್ಸವವನ್ನು ಅಂಗ್ ಬಾರ್ ಲೇ ಗ್ರಾಮದ ಬಳಿ ಭಾನುವಾರ ಸಂಜೆ ಆಯೋಜಿಸಿತ್ತು. ಸಮಾರಂಭವನ್ನು ಗುರಿ ಮಾಡಿಕೊಂಡು ಈ ದಾಳಿ ನಡೆಸಲಾಗಿದೆ ಎಂದು ಸಂಘಟನೆಯ ಸದಸ್ಯರು ಮತ್ತು ರಕ್ಷಣಾ ಕಾರ್ಯಕರ್ತರು ಸೋಮವಾರ ತಿಳಿಸಿದ್ದಾರೆ.

ರಾತ್ರಿ ಸುಮಾರು 8 ಗಂಟೆಗೆ ವಾಯುಪಡೆಯು ನಾಲ್ಕು ಬಾಂಬ್‌ಗಳನ್ನು ಸಮಾರಂಭ ನಡೆಯುತ್ತಿದ್ದ ಸ್ಥಳದ ಮೇಲೆ ಹಾಕಿದೆ. ಸುಮಾರು 500 ಜನರು ಸಮಾರಂಭದಲ್ಲಿ ಭಾಗಿಯಾಗಿದ್ದರು. ಕಚಿನ್ ಅಧಿಕಾರಿಗಳು, ಸೈನಿಕರು, ಸಂಗೀತಗಾರರು ಮತ್ತು ಮುಂದಿನ ಸಾಲಿನಲ್ಲಿ ಕುಳಿತಿದ್ದ ಗಣ್ಯರಲ್ಲಿ ಹಲವರು ಸಾವಿಗೀಡಾಗಿದ್ದಾರೆ ಎಂದು ಕಚಿನ್ ಕಲಾವಿದರ ಸಂಘದ ವಕ್ತಾರರು ತಿಳಿಸಿದ್ದಾರೆ.

ಗಾಯಗೊಂಡವರಿಗೆ ಚಿಕಿತ್ಸೆ ನೀಡುವುದನ್ನು ಸರ್ಕಾರಿ ಭದ್ರತಾ ಪಡೆಗಳು ತಡೆದವು ಎಂದು ಸ್ಥಳೀಯ ಸುದ್ದಿ ಮಾಧ್ಯಮವೊಂದು ವರದಿ ಮಾಡಿದೆ.

ಆಂಗ್ ಸನ್ ಸೂ ಕಿ ನೇತೃತ್ವದ ಚುನಾಯಿತ ಸರ್ಕಾರವನ್ನು ಬೀಳಿಸಿ ಅಲ್ಲಿಯ ಸೇನೆಯು ಅಧಿಕಾರ ಕಬಳಿಸಿದಾಗಿನಿಂದ ನಡೆಸಿರುವ ಏಕ ಸಮಯದ ದಾಳಿಗಳಲ್ಲಿ ಇದೇ ಮೊದಲ ಬಾರಿಗೆ ಅತಿಹೆಚ್ಚು ಜನರ ಸಾವು ವರದಿಯಾಗಿದೆ ಎನ್ನಲಾಗಿದೆ. ಈ ಕುರಿತು ಸೇನೆ ಅಧಿಕೃತ ಹೇಳಿಕೆ ನೀಡಿಲ್ಲ.



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

# ‘ಕಲುಷಿತ ನಗರಗಳ ಪಟ್ಟಿಯಲ್ಲಿ ದೆಹಲಿಯ ಹೆಸರಿಲ್ಲ’

**ನವದೆಹಲಿ:** ‘ಏಷ್ಯಾದ ಅತ್ಯಂತ ಕಲುಷಿತವಾಗಿರುವ 10 ನಗರಗಳ ಪಟ್ಟಿಯಲ್ಲಿ ಭಾರತದ 8 ನಗರಗಳಿವೆ. ಆದರೆ, ಆ ಪಟ್ಟಿಯಲ್ಲಿ ದೆಹಲಿಯ ಹೆಸರು ಇಲ್ಲ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋಮವಾರ ಪ್ರತಿಪಾದಿಸಿದ್ದಾರೆ.



ಅರವಿಂದ ಕೇಜ್ರಿವಾಲ್

ವರದಿಯೊಂದನ್ನು ಉಲ್ಲೇಖಿಸಿರುವ ಕೇಜ್ರಿವಾಲ್, ‘ಕೆಲ ವರ್ಷಗಳ ಹಿಂದೆ ದೆಹಲಿಯನ್ನು ವಿಶ್ವದಲ್ಲಿನ ಅತ್ಯಂತ ಕಲುಷಿತ ನಗರಗಳ ಪೈಕಿ ಒಂದು ಎಂದು ಪರಿಗಣಿಸಲಾಗಿತ್ತು. ಆದರೆ, ಏಷ್ಯಾದಲ್ಲಿ ಕಲುಷಿತಗೊಂಡಿರುವ 10 ನಗರಗಳ ಪಟ್ಟಿಯಲ್ಲಿ ದೆಹಲಿ ಹೆಸರಿಲ್ಲ. ಇನ್ನು ಮುಂದೆಯೂ ಇರುವುದಿಲ್ಲ’ ಎಂದಿದ್ದಾರೆ.

‘ಕೆಲವರು ಪರಿಸರ ಮಾಲಿನ್ಯದ ವಿರುದ್ಧ ನೀವು ಗೆಲುವು ಸಾಧಿಸಿರುವಿರಾ? ಈಗ ನಿಮಗೆ ತೃಪ್ತಿಯಾಯಿತಾ ಎಂದು ಕೇಳುತ್ತಾರೆ. ದೆಹಲಿಯು ಇನ್ನೂ ಪರಿಸರ ಮಾಲಿನ್ಯದ ವಿರುದ್ಧ ಸಂಪೂರ್ಣ ವಿಜಯ ಸಾಧಿಸಿಲ್ಲ. ಆದರೆ, ಸದ್ಯಕ್ಕೆ ವಿಶ್ವದ ಕಲುಷಿತ ನಗರಗಳ ಪಟ್ಟಿಯಲ್ಲಿ ದೆಹಲಿಯ ಹೆಸರಿಲ್ಲ. ನಾವು ಸರಿಯಾದ ಹಾದಿಯಲ್ಲಿದ್ದೇವೆ ಎಂಬುದಕ್ಕೆ ಇದು ಪ್ರೋತ್ಸಾಹದಾಯಕ. ಆದರೆ, ವಿಶ್ವದ ಅತ್ಯಂತ ಸ್ವಚ್ಛ ನಗರ ದೆಹಲಿ ಆಗಬೇಕೆಂಬುದು ನಮ್ಮ ಗುರಿ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಈ ಸಂಬಂಧ ಟ್ವಿಟ್ಟರ್‌ನಲ್ಲಿ ಬರೆದುಕೊಂಡಿರುವ ಕೇಜ್ರಿವಾಲ್, ‘ದೆಹಲಿಯ ಜನರು ತುಂಬಾ ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ಇಂದು ನಾವು ಸಾಕಷ್ಟು ಸುಧಾರಿಸಿದ್ದೇವೆ. ವಿಶ್ವದ ಅತ್ಯುತ್ತಮ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಸ್ಥಾನ ಕಂಡುಕೊಳ್ಳಲು ನಾವು ಶ್ರಮಿಸುವುದನ್ನು ಮುಂದುವರಿಸುತ್ತೇವೆ’ ಎಂದೂ ಹೇಳಿದ್ದಾರೆ.

### ದೆಹಲಿ: ಕುಸಿದ ವಾಯುಗುಣಮಟ್ಟ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸೋಮವಾರ ವಾಯುಗುಣಮಟ್ಟವು ಅತ್ಯಂತ ಕಳಪೆ ಗುಣಮಟ್ಟಕ್ಕೆ ಕುಸಿದಿದೆ.

ಪ್ರತಿಕೂಲ ಹವಾಮಾನದ ಜತೆಗೆ ದೆಹಲಿ ಪರಿಸರದಲ್ಲಿ ದೀಪಾವಳಿಯ ಕಾರಣ ಪಟಾಕಿ ಹೆಚ್ಚಿದ್ದರಿಂದ ಮಾಲಿನ್ಯಕಾರಕಗಳ ಶೇಖರಣೆಯೂ ಹೆಚ್ಚಾಗಿದೆ. ಹೀಗಾಗಿ ವಾಯುವಿನ ಗುಣಮಟ್ಟವು ಅತ್ಯಂತ ಕಳಪೆ ಗುಣಮಟ್ಟಕ್ಕೆ ಕುಸಿದಿದೆ.

ಭಾನುವಾರ ಸಂಜೆ, ದೆಹಲಿಯಲ್ಲಿ 24 ಗಂಟೆಗಳ ಸರಾಸರಿ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯುಐ) 259ರಷ್ಟು ಇತ್ತು. ಇದು ಕಳೆದ ಏಳು ದೀಪಾವಳಿಯ ಅವಧಿಯಲ್ಲಿ ಅತ್ಯಂತ ಕಡಿಮೆ ವಾಯು ಗುಣಮಟ್ಟ ಎನಿಸಿಕೊಂಡಿದೆ.

ತಾಪಮಾನ ಮತ್ತು ಗಾಳಿ ವೇಗದಲ್ಲಿ ಉಂಟಾದ ಕುಸಿತ ಮತ್ತು ರಾಜಧಾನಿಯ ಹಲವು ಭಾಗಗಳಲ್ಲಿ ಜನರು ಪಟಾಕಿಗಳನ್ನು ಸಿಡಿಸುತ್ತಿರುವುದರಿಂದ ಮಾಲಿನ್ಯದ ಮಟ್ಟವು ಭಾನುವಾರ ರಾತ್ರಿ ಏರಿಕೆಯಾಗಿದೆ.

ಸೋಮವಾರ ಬೆಳಿಗ್ಗೆ 8 ಗಂಟೆ ಹೊತ್ತಿಗೆ ಎಕ್ಯುಐ ಮಟ್ಟ 301 ತಲುಪಿ, ಗಾಳಿ ಗುಣಮಟ್ಟ ಹದಗೆಟ್ಟಿದೆ.

### ನೆದರ್ಲೆಂಡ್ಸ್ ಎದುರು ಬಾಂಗ್ಲಾದೇಶ ತಂಡಕ್ಕೆ ಒಂಬತ್ತು ರನ್‌ಗಳ ಜಯ

# ತಸ್ಕಿನ್ ಆಟಕ್ಕೆ ಒಲಿದ ಗೆಲುವು

ಹೋಬರ್ಟ್ (ಪಿಟಿಐ): ವೇಗದ ಬೌಲರ್ ತಸ್ಕಿನ್ ಅಹ್ಮದ್ (25ಕ್ಕೆ 4) ಅವರ ವೈಯಕ್ತಿಕ ಶ್ರೇಷ್ಠ ಬೌಲಿಂಗ್‌ನ ಬಲದಿಂದ ಬಾಂಗ್ಲಾದೇಶ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ನೆದರ್ಲೆಂಡ್ಸ್ ತಂಡವನ್ನು 9 ರನ್‌ಗಳಿಂದ ಮಣಿಸಿತು.

ಹೋಬರ್ಟ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 144 ರನ್ ಗಳಿಸಿತು. ನೆದರ್ಲೆಂಡ್ಸ್ 135 ರನ್‌ಗಳಿಗೆ ಆಲೌಟಾಯಿತು. ಬಾಂಗ್ಲಾ ತಂಡ ಟಿ20 ವಿಶ್ವಕಪ್ ಟೂರ್ನಿಯ 'ಸೂಪರ್ 12' ಹಂತದಲ್ಲಿ ಪಡೆದ ಮೊದಲ ಗೆಲುವು ಇದಾಗಿದೆ.

ಟಾಸ್ ಗೆದ್ದ ನೆದರ್ಲೆಂಡ್ಸ್ ಫೀಲ್ಡಿಂಗ್ ಮಾಡಲು ನಿರ್ಧರಿಸಿತು. ನಜ್ಮುಲ್ ಹೊಸೇನ್ (25 ರನ್, 20 ಎ.) ಮತ್ತು ಸೌಮ್ಯ ಸರ್ಕಾರ್ ಮೊದಲ ವಿಕೆಟ್‌ಗೆ 43 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಆದರೆ ಮಧ್ಯಮ ಕ್ರಮಾಂಕದಲ್ಲಿ ತಂಡ ಕುಸಿತ ಅನುಭವಿಸಿತು. ಲಿಟನ್ ದಾಸ್ ಮತ್ತು ಶಕೀಬ್ ಅಲ್ ಹಸನ್ ಕ್ರಮವಾಗಿ 9 ಹಾಗೂ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಅಫೀಫ್ ಹೊಸೇನ್ (38 ರನ್, 27 ಎ.) ಮತ್ತು ಕೊನೆಯಲ್ಲಿ ಬಿರುಸಿನ ಆಟವಾಡಿದ ಮೊಸದ್ದೆಕ್ ಹೊಸೇನ್ (ಔಟಾಗದೆ 20, 12 ಎ.) ಅವರ ಬ್ಯಾಟಿಂಗ್ ನೆರವಿನಿಂದ ತಂಡದ ಮೊತ್ತ 140ರ ಗಡಿ ದಾಟಿತು.



ಬಾಂಗ್ಲಾದೇಶದ ತಸ್ಕಿನ್ ಅಹ್ಮದ್ (ಮಧ್ಯದಲ್ಲಿ) ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ನೆದರ್ಲೆಂಡ್ಸ್ ತಂಡವನ್ನು ಕಟ್ಟಿಹಾಕಲು ಬಾಂಗ್ಲಾ ಶಿಸ್ತಿನ ಬೌಲಿಂಗ್ ನಡೆಸುವುದು ಅಗತ್ಯವಾಗಿತ್ತು. ಆ ಜವಾಬ್ದಾರಿಯನ್ನು ತಸ್ಕಿನ್ ಅಚ್ಚುಕಟ್ಟಾಗಿ ನಿರ್ವಹಿಸಿದರೆ, ಹಸನ್ ಮಹಮೂದ್ (15ಕ್ಕೆ 2) ಹಾಗೂ ಇತರ ಬೌಲರ್‌ಗಳು ತಕ್ಕ ಸಾಥ್ ನೀಡಿದರು. ತಸ್ಕಿನ್ ಮೊದಲ ಎರಡು ಎಸೆತಗಳಲ್ಲಿ ವಿಕ್ರಮ್‌ಜೀತ್ ಸಿಂಗ್ (0) ಮತ್ತು ಬಸ್ ಡಿ ಲೀಡ್ (0) ಅವರನ್ನು ಪೆವಿಲಿಯನ್‌ಗಟ್ಟಿ ಎದುರಾಳಿಗಳಿಗೆ ಆಘಾತ ನೀಡಿದರು.

ಮ್ಯಾಕ್ಸ್ ಒಡೌಡ್ (8) ಮತ್ತು ಟಾಮ್ ಕೂಪರ್ (0) ರನೌಟ್ ಆಗಿ ಮರಳಿದ್ದು, ನೆದರ್ಲೆಂಡ್ಸ್ ತಂಡಕ್ಕೆ ಹಿನ್ನಡೆ ಉಂಟುಮಾಡಿತು.

15 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡ ತಂಡದ ಇನಿಂಗ್ಸ್‌ಗೆ ಕಾಲಿನ್ ಆ್ಯಕರ್‌ಮನ್ (62 ರನ್, 48 ಎ., 4X6, 6X2) ಮತ್ತು ಸ್ಕಾಟ್ ಎಡ್ವರ್ಡ್ಸ್ (16) ಅಲ್ಪ ಜೀವ ತುಂಬಿದರು. ಎಡ್ವರ್ಡ್ಸ್ ವಿಕೆಟ್ ಪಡೆದ ನಾಯಕ ಶಕೀಬ್ ಅಲ್ ಹಸನ್ ಈ ಜತೆಯಾಟ ಮುರಿದರು.

ಆ್ಯಕರ್‌ಮನ್ ಮತ್ತು ಕೊನೆಯಲ್ಲಿ ಬಿರುಸಿನ ಆಟವಾಡಿದ ಪಾಲ್ ವಾನ್ ಮೀಕೆರೆನ್ (24 ರನ್, 14 ಎ.) ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಪ್ರಯತ್ನಿಸಿದರೂ, ಬಾಂಗ್ಲಾ ಬೌಲರ್‌ಗಳು ಅದಕ್ಕೆ ಅವಕಾಶ ನೀಡಲಿಲ್ಲ.

**ಮುಖ್ಯಾಂಶಗಳು**

- 25 ರನ್‌ಗಳಿಗೆ 4 ವಿಕೆಟ್ ಪಡೆದ ತಸ್ಕಿನ್
- ವಿಶ್ವಕಪ್ ಸೂಪರ್ 12 ಹಂತದಲ್ಲಿ ಬಾಂಗ್ಲಾಕ್ಕೆ ಮೊದಲ ಜಯ
- ಕಾಲಿನ್ ಆ್ಯಕರ್‌ಮನ್ ಅರ್ಧಶತಕ ವ್ಯರ್ಥ

ಬಾಂಗ್ಲಾದೇಶ ತನ್ನ ಮುಂದಿನ ಪಂದ್ಯದಲ್ಲಿ ಗುರುವಾರ ಸಿಡ್ನಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದ್ದರೆ, ಅದೇ ದಿನ ನೆದರ್ಲೆಂಡ್ಸ್ ತಂಡ ಭಾರತದ ವಿರುದ್ಧ ಆಡಲಿದೆ.

**ಸಂಕ್ಷಿಪ್ತ ಸ್ಕೋರ್:** ಬಾಂಗ್ಲಾದೇಶ 8 ವಿಕೆಟ್‌ಗಳಿಗೆ 144 (ನಜ್ಮುಲ್ ಹೊಸೇನ್ 25, ಸೌಮ್ಯ ಸರ್ಕಾರ್ 14, ಅಫೀಫ್ ಹೊಸೇನ್ 38, ನೂರುಲ್ ಹಸನ್ 13, ಮೊಸದ್ದೆಕ್ ಹೊಸೇನ್ ಔಟಾಗದೆ 20, ಪಾಲ್ ವಾನ್ ಮೀಕೆರೆನ್ 21ಕ್ಕೆ 2, ಬಸ್ ಡಿ ಲೀಡ್ 29ಕ್ಕೆ 2, ಟಿಮ್ ಪ್ರಿಂಗ್ಲ್ 10ಕ್ಕೆ 1)

ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 135 (ಕಾಲಿನ್ ಆ್ಯಕರ್‌ಮನ್ 62, ಸ್ಕಾಟ್ ಎಡ್ವರ್ಡ್ಸ್ 16, ಪಾಲ್ ವಾನ್ ಮೀಕೆರೆನ್ 24, ತಸ್ಕಿನ್ ಅಹ್ಮದ್ 25ಕ್ಕೆ 4, ಹಸನ್ ಮಹಮೂದ್ 15ಕ್ಕೆ 2, ಶಕೀಬ್ ಅಲ್ ಹಸನ್ 32ಕ್ಕೆ 1, ಸೌಮ್ಯ ಸರ್ಕಾರ್ 29ಕ್ಕೆ 1) ಫಲಿತಾಂಶ: ಬಾಂಗ್ಲಾದೇಶಕ್ಕೆ 9 ರನ್ ಗೆಲುವು

# ದಕ್ಷಿಣ ಆಫ್ರಿಕಾ ಕಾಡಿದ ಮಳೆ

### ಜಿಂಬಾಬ್ವೆ ವಿರುದ್ಧದ ಪಂದ್ಯ ರದ್ದು; ಡಿಕಾಕ್ ಆಟ ವ್ಯರ್ಥ

ಹೋಬರ್ಟ್ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ಗೆಲುವಿಗೆ ಮತ್ತೆ ಮಳೆ ಅಡ್ಡಿಯಾಗಿದೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಜಿಂಬಾಬ್ವೆ ವಿರುದ್ಧ ಇನ್ನೇನು ಗೆಲುವು ದಕ್ಕಿತು ಎನ್ನುವಷ್ಟರಲ್ಲಿ ಸುರಿದ ಮಳೆ, ತೆಂಬಾ ಬವುಮ ಬಳಗಕ್ಕೆ ನಿರಾಸೆ ಉಂಟುಮಾಡಿತು.

ಹೋಬರ್ಟ್‌ನಲ್ಲಿ ಸೋಮವಾರ ನಡೆದ ಪಂದ್ಯ ಮಳೆಯಿಂದ ತಡವಾಗಿ ಆರಂಭವಾಯಿತು. ಇದರಿಂದ ಓವರ್‌ಗಳ ಸಂಖ್ಯೆಯನ್ನು 9ಕ್ಕೆ ಇಳಿಸಲಾಗಿತ್ತು.

ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ 5 ವಿಕೆಟ್‌ಗೆ 79 ರನ್ ಗಳಿಸಿತು. ದಕ್ಷಿಣ ಆಫ್ರಿಕಾ ಇನಿಂಗ್ಸ್ ವೇಳೆ ಮಳೆ ಸುರಿದ ಕಾರಣ ಗೆಲುವಿಗೆ 7 ಓವರ್‌ಗಳಲ್ಲಿ 64 ರನ್ ಗಳಿಸುವ ಪರಿಷ್ಕೃತ ಗುರಿ ನೀಡಲಾಯಿತು.

ಆರಂಭಿಕ ಬ್ಯಾಟರ್ ಕ್ವಿಂಟನ್ ಡಿಕಾಕ್ (ಔಟಾಗದೆ 47, 18 ಎ., 4X8, 6X1) ಅವರ ಅಬ್ಬರದ ಆಟದ ನೆರವಿನಿಂದ ದಕ್ಷಿಣ ಆಫ್ರಿಕಾ 3 ಓವರ್‌ಗಳಲ್ಲಿ 51 ರನ್ ಕಲೆಹಾಕಿತು. ಈ ವೇಳೆ ಮತ್ತೆ ಮಳೆ ಸುರಿದ ಕಾರಣ ಅಂಪೈರ್‌ಗಳನ್ನು ಪಂದ್ಯವನ್ನು ರದ್ದುಗೊಳಿಸಿದರು. ಈ ವೇಳೆ ಗೆಲುವಿಗೆ 13 ರನ್‌ಗಳು ಬೇಕಿದ್ದವು.

1992ರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಗೆಲುವಿನತ್ತ ದಾಪುಗಾಲಿಟ್ಟಿದ್ದ ದಕ್ಷಿಣ ಆಫ್ರಿಕಾ ತಂಡಕ್ಕೆ ಮಳೆ ನಿರಾಸೆ ಉಂಟುಮಾಡಿತ್ತು. ಈ ಬಾರಿ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲಿ ತಂಡವನ್ನು ಮಳೆ ಕಾಡಿದೆ.

**ಮದೆವೆರೆ ಆಸರೆ:** ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ ತಂಡ, ಲುಂಗಿ ಗಿಡಿ (20ಕ್ಕೆ2) ಅವರ ಮಾರಕ ದಾಳಿಗೆ ನಲುಗಿ, 19 ರನ್ ಗಳಿಸುವಷ್ಟರಲ್ಲೇ ನಾಲ್ಕು ವಿಕೆಟ್ ಕಳೆದುಕೊಂಡಿತು.



ಕ್ವಿಂಟನ್ ಡಿಕಾಕ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ವೆಸ್ಲಿ ಮದೆವೆರೆ (ಔಟಾಗದೆ 35, 18 ಎ.) ಮತ್ತು ಮಿಲ್ಟನ್ ಶುಂಬಾ ಅವರು ಮರುಹೋರಾಟ ನಡೆಸಿದರು.

**ಸಂಕ್ಷಿಪ್ತ ಸ್ಕೋರ್:** ಜಿಂಬಾಬ್ವೆ 9 ಓವರ್‌ಗಳಲ್ಲಿ 5 ವಿಕೆಟ್‌ಗೆ 79 (ರೆಗಿಸ್ ಚಕಾಬ್ವ 8, ವೆಸ್ಲಿ ಮದೆವೆರೆ ಔಟಾಗದೆ 35, ಮಿಲ್ಟನ್ ಶುಂಬಾ 18, ಲುಂಗಿ ಗಿಡಿ 20ಕ್ಕೆ 2, ವೇಯ್ನ್ ಪಾರ್ನೆಲ್ 6ಕ್ಕೆ 1) ದಕ್ಷಿಣ ಆಫ್ರಿಕಾ 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 51 (ಕ್ವಿಂಟನ್ ಡಿ ಕಾಕ್ ಔಟಾಗದೆ 47) ಫಲಿತಾಂಶ: ಮಳೆಯಿಂದ ಪಂದ್ಯ ರದ್ದು. ಎರಡೂ ತಂಡಗಳಿಗೆ ತಲಾ ಒಂದು ಪಾಯಿಂಟ್.

**ಸಂಕ್ಷಿಪ್ತ ಸುದ್ದಿ**

## ಕ್ರಿಕೆಟ್: ಸಸೆಕ್ಸ್ ಪರ ಪೂಜಾರ ಆಟ

ಹೋವ್ (ಪಿಟಿಐ): ಭಾರತದ ಚೇತೇಶ್ವರ್ ಪೂಜಾರ ಅವರು 2023ರ ಕೌಂಟಿ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಸಸೆಕ್ಸ್ ತಂಡದ ಪರ ಆಟ ಮುಂದುವರಿಸಲಿದ್ದಾರೆ. ಕೌಂಟಿ ಕ್ಲಬ್ ಸೋಮವಾರ ಈ ವಿಷಯ ತಿಳಿಸಿದೆ.

ಕಳೆದ ವರ್ಷ ಸಸೆಕ್ಸ್ ತಂಡ ಸೇರಿದ್ದ ಟೆಸ್ಟ್ ಪರಿಣತ ಪೂಜಾರ, 109.4ರ ಸರಾಸರಿಯಲ್ಲಿ 1000ಕ್ಕೂ ಅಧಿಕ ರನ್ ಪೇರಿಸಿ ಗಮನಸೆಳೆದಿದ್ದರು. ದಾಖಲೆಯ ಮೂರು ದ್ವಿಶತಕಗಳು ಅದರಲ್ಲಿ ಸೇರಿದ್ದವು.

50 ಓವರ್‌ಗಳ ಮಾದರಿಯ ರಾಯಲ್ ಲಂಡನ್ ಕಪ್ ಟೂರ್ನಿಯಲ್ಲಿ, ಗಾಯಗೊಂಡ ಟಾಮ್ ಹೇನ್ಸ್ ಜಾಗದಲ್ಲಿ ತಂಡವನ್ನು ಮುನ್ನಡೆಸಿದ್ದ ಪೂಜಾರ, ಸೆಮಿಫೈನಲ್‌ವರೆಗೆ ತಲುಪಿಸಿದ್ದರು. ಈ ಟೂರ್ನಿಯಲ್ಲಿ 89.14ರ ಸರಾಸರಿಯಲ್ಲಿ 111.62 ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದ್ದರು. ಸರ್ರೆ ತಂಡದ ಎದುರು 131 ಎಸೆತಗಳಲ್ಲಿ 174 ರನ್ ಅವರ ಗರಿಷ್ಠ ವೈಯಕ್ತಿಕ ಮೊತ್ತವಾಗಿತ್ತು.

## ಫುಟ್‌ಬಾಲ್: ಎಫ್‌ಸಿ ಡೆಕ್ಕನ್ ಜಯಭೇರಿ

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 4–0ಯಿಂದ ಬಿಯುಎಫ್‌ಸಿ ತಂಡವನ್ನು ಸೋಲಿಸಿತು.

ವಿಜೇತ ತಂಡದ ಪರ ಮೊಹಮ್ಮದ್ ಸಿಬಿಲಿ (45 + 2ನೇ ನಿಮಿಷ), ಪ್ರಸನ್ನ ಕುಮಾರ್ (62ನೇ ನಿಮಿಷ) ಮತ್ತು ಪ್ರದೀಪ್ ಆರ್. (87ನೇ ನಿ.) ಗೋಲು ದಾಖಲಿಸಿದರು. ಮತ್ತೊಂದು ಗೋಲು 'ಉಡುಗೊರೆ' ರೂಪದಲ್ಲಿ ಬಿಯುಎಫ್‌ಸಿ ತಂಡದ ದರ್ಶನ್ (32ನೇ ನಿ.) ಅವರಿಂದ ಬಂದಿತು.

ಇನ್ನುಳಿದ ಪಂದ್ಯಗಳಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ 1–0ಯಿಂದ ರೂಟ್ಸ್ ಎಫ್‌ಸಿ ಎದುರು, ಕೊಡಗು ಎಫ್‌ಸಿ 3–2ರಿಂದ ಅಗ್ನಿಪುತ್ರ ಎಫ್‌ಸಿ ಎದುರು, ಎಫ್‌ಸಿ ಬೆಂಗಳೂರು ಯುನೈಟೆಡ್ 4–1ರಿಂದ ಥಾಂಕೊಸ್ ಸ್ಟೂಡೆಂಟ್ಸ್ ಯೂನಿಯನ್ ವಿರುದ್ಧ ಗೆಲುವು ಸಾಧಿಸಿದವು.

# 'ಸ್ಪೈಡರ್‌ಕ್ಯಾಮ್': ಚರ್ಚೆ ಮುನ್ನೆಲೆಗೆ

ಮೆಲ್ಬರ್ನ್ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದ ವೇಳೆ ಸ್ಪೈಡರ್‌ಕ್ಯಾಮ್ ಬಳಕೆಯ ಅಗತ್ಯವಿದೆಯೇ ಎಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

ಭಾರತ– ಪಾಕಿಸ್ತಾನ ನಡುವಣ ಭಾನುವಾರ ಮೆಲ್ಬರ್ನ್‌ನಲ್ಲಿ ನಡೆದ ಪಂದ್ಯದ ವೇಳೆ ಚೆಂಡು ಸ್ಪೈಡರ್‌ಕ್ಯಾಮ್‌ನ ಕೇಬಲ್‌ಗೆ ಬಡಿದದ್ದು ಈ ಕುರಿತು ಚರ್ಚೆ ಶುರುವಾಗಲು ಕಾರಣ.

ಪಾಕಿಸ್ತಾನದ ಬ್ಯಾಟರ್ ಶಾನ್ ಮಸೂದ್ ಅವರು ಮುಗಿಲೆತ್ತರಕ್ಕೆ ಹೊಡೆದ ಚೆಂಡು ಸ್ಪೈಡರ್‌ಕ್ಯಾಮ್‌ನ ಕೇಬಲ್‌ಗೆ ಬಡಿದು ದಿಕ್ಕು ಬದಲಿಸಿತ್ತು. ಇಲ್ಲದಿದ್ದರೆ ವಿರಾಟ್ ಕೊಹ್ಲಿಗೆ ಸುಲಭ ಕ್ಯಾಚ್ ಆಗುವ ಸಾಧ್ಯತೆಯಿತ್ತು. ಚೆಂಡು ಕೇಬಲ್‌ಗೆ ಬಡಿದ ಕಾರಣ ಮಸೂದ್‌ಗೆ ಒಂದು ರೀತಿಯಲ್ಲಿ ಜೀವದಾನ ಲಭಿಸಿತ್ತು. ಅಂಪೈರ್ ಆ ಎಸೆತವನ್ನು 'ಡೆಡ್‌ಬಾಲ್' ಎಂದು ಘೋಷಿಸಿದ್ದರು.

ಆಟದ ದೃಶ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಟಿ.ವಿ ವೀಕ್ಷಕರ ಮುಂದಿಡುವ ಉದ್ದೇಶದಿಂದ 10 ವರ್ಷಗಳ ಹಿಂದೆ ಸ್ಪೈಡರ್‌ಕ್ಯಾಮ್ ಬಳಕೆ ಆರಂಭವಾಗಿತ್ತು. 2007 ರಲ್ಲಿ ರೆಬೆಲ್ ಇಂಡಿಯನ್ ಕ್ರಿಕೆಟ್ ಲೀಗ್‌ನಲ್ಲಿ ಮೊದಲ ಬಾರಿ ಇದರ ಬಳಕೆ ನಡೆದರೆ,



ಸ್ಪೈಡರ್‌ಕ್ಯಾಮ್ –ಸಂಗ್ರಹ ಚಿತ್ರ

2010 ರಿಂದ ಐಪಿಎಲ್‌ನಲ್ಲೂ ಬಳಕೆ ಶುರುವಾಯಿತು. ಆ ಬಳಿಕ ಐಸಿಸಿ ಟೂರ್ನಿಗಳಲ್ಲೂ ಇದರ ಬಳಕೆ ಆರಂಭವಾಯಿತು.

ಈ ತಂತ್ರಜ್ಞಾನದ ಬಳಕೆಯ ಬಗ್ಗೆ ಹಿಂದೆಯೂ ಹಲವು ಸಲ ಪರ–ವಿರೋಧ ಚರ್ಚೆ ನಡೆದಿತ್ತು. 2014–15 ರಲ್ಲಿ ಭಾರತ– ಆಸ್ಟ್ರೇಲಿಯಾ ಟೆಸ್ಟ್ ಸರಣಿಯ ಪಂದ್ಯದಲ್ಲಿ ಕ್ಯಾಮರಾ ಕೇಬಲ್ ಅಡ್ಡಬಂದ ಕಾರಣ ಸ್ಟೀವ್ ಸ್ಮಿತ್ ಕ್ಯಾಚ್ ಕೈಚೆಲ್ಲಿದ ಘಟನೆ ನಡೆದಿತ್ತು.

'ಅದೃಷ್ಟವು ಶಾನ್ ಮಸೂದ್ ಜತೆಗಿತ್ತು. ಆರಂಭದಲ್ಲಿ ರನೌಟ್‌ನಿಂದ ಬಚಾವಾಗಿದ್ದರು. ಆ ಬಳಿಕ ಕ್ಯಾಚ್ ಔಟ್ ಆಗುವುದರಿಂದ ಅಲ್ಪದರದಲ್ಲೇ ಪಾರಾಗಿದ್ದರು. ಅಷ್ಟು ಮಾತ್ರವಲ್ಲದೆ, ಸ್ಪೈಡರ್‌ಕ್ಯಾಮ್ ಕೂಡಾ ಅವರ ನೆರವಿಗೆ ನಿಂತಿತು' ಎಂದು ಕ್ರಿಕೆಟ್ ಪ್ರೇಮಿಯೊಬ್ಬರು 'ಟ್ವೀಟ್' ಮಾಡಿದ್ದಾರೆ.

ಈ ಪಂದ್ಯದಲ್ಲಿ ಮಸೂದ್ ಅವರು 42 ಎಸೆತಗಳಲ್ಲಿ 52 ರನ್ ಗಳಿಸಿದ್ದರು.

## ಕೊಹ್ಲಿಯಿಂದ ಮಾತ್ರ ಸಾಧ್ಯ: ಹಾರ್ದಿಕ್

ಮೆಲ್ಬರ್ನ್: 'ಆ ರೀತಿಯಲ್ಲಿ ಸಿಕ್ಸರ್ ಹೊಡೆಯುವುದು ವಿರಾಟ್ ಕೊಹ್ಲಿ ಅವರಿಂದ ಮಾತ್ರ ಸಾಧ್ಯ' ಎಂದು ಭಾರತದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು, ಕೊಹ್ಲಿ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ.



ಹಾರ್ದಿಕ್ ಪಾಂಡ್ಯ

ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ಗೆಲುವಿಗೆ ಕೊನೆಯ 8 ಎಸೆತಗಳಲ್ಲಿ 28 ರನ್‌ಗಳು ಬೇಕಿದ್ದವು. ಹ್ಯಾರಿಸ್ ರವೂಫ್ ಬೌಲ್ ಮಾಡಿದ 19ನೇ ಓವರ್‌ನ ಕೊನೆಯ ಎರಡು ಎಸೆತಗಳಲ್ಲಿ ಕೊಹ್ಲಿ ಚೆಂಡನ್ನು ಸಿಕ್ಸರ್‌ಗೆ ಅಟ್ಟಿದ್ದರು. ಇದರಿಂದ ಅಂತಿಮ ಓವರ್‌ನಲ್ಲಿ ಗಳಿಸುವ ರನ್ 16ಕ್ಕೆ ಇಳಿಕೆಯಾಗಿತ್ತು. ರವೂಫ್ ಬೌಲಿಂಗ್‌ನಲ್ಲಿ ಕೊಹ್ಲಿ, ಅತಿಯಾದ ಒತ್ತಡದ ನಡುವೆಯೂ ಸಿಕ್ಸರ್ ಹೊಡೆದದ್ದು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

'ನಾನೂ ಹಲವು ಸಿಕ್ಸರ್ ಹೊಡೆದಿದ್ದೇನೆ. ಆದರೆ ಕೊಹ್ಲಿಯ ಆ ಎರಡು ಸಿಕ್ಸರ್‌ಗಳು ತುಂಬಾ ತುಂಬಾ ವಿಶೇಷವಾದುದು. ಕೊಹ್ಲಿ ಹೊರತುಪಡಿಸಿ, ಬೇರೆ ಯಾರದೇ ಬ್ಯಾಟ್‌ನಿಂದ ಆ ರೀತಿಯ ಹೊಡೆತಗಳು ಬರುತ್ತಿರಲಿಲ್ಲ' ಎಂದು ಬಿಸಿಸಿಐ ವೆಬ್‌ಸೈಟ್‌ಗೆ ಹಾರ್ದಿಕ್ ತಿಳಿಸಿದ್ದಾರೆ.

### ಆಸ್ಟ್ರೇಲಿಯಾ– ಶ್ರೀಲಂಕಾ ತಂಡಗಳ ಹಣಾಹಣಿ ಇಂದು

# ಫಿಂಚ್ ಪಡೆಗೆ ಜಯದ ವಿಶ್ವಾಸ

ಪರ್ತ್ (ಎಎಫ್‌ಪಿ): ಮೊದಲ ಪಂದ್ಯದಲ್ಲಿ ನಿರಾಸೆ ಅನುಭವಿಸಿರುವ ಆಸ್ಟ್ರೇಲಿಯಾ ತಂಡವು ಪುಟಿದೇಳುವ ವಿಶ್ವಾಸದಲ್ಲಿದೆ. ಮಂಗಳವಾರ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12 ಹಂತದ ತನ್ನ ಎರಡನೇ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಆ್ಯರನ್ ಫಿಂಚ್ ನಾಯಕತ್ವದ ಆತಿಥೇಯ ಆಸ್ಟ್ರೇಲಿಯಾ ಮೊದಲ ಸೆಣಸಾಟದಲ್ಲಿ ನ್ಯೂಜಿಲೆಂಡ್ ಎದುರು 89 ರನ್‌ಗಳ ಭಾರೀ ಅಂತರದ ಸೋಲನುಭವಿಸಿತ್ತು. ಆದರೆ ಶ್ರೀಲಂಕಾ ತಂಡವು ಭಾನುವಾರ ಐರ್ಲೆಂಡ್‌ಗೆ ಸೋಲುಣಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು.

'ನಮ್ಮ ತಂಡದ ಆಡುವ 11ರ ಬಳಗದ ಮೇಲೆ ವಿಶ್ವಾಸವಿದೆ. ಕಿವೀಸ್ ಎದುರಿನ ಪಂದ್ಯದಲ್ಲಿ ನಾವು ಚೆನ್ನಾಗಿ ಆಡಲಿಲ್ಲ ಎಂಬುದು ನಿಜ. ಆದರೆ ಒಮ್ಮೆ ನಾವು ಲಯ ಕಂಡುಕೊಂಡರೆ ನಮ್ಮನ್ನು ಮಣಿಸುವುದು ಕಷ್ಟ' ಎಂದು ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಮಿಚೆಲ್ ಮಾರ್ಷ್ ಹೇಳಿದ್ದಾರೆ.

ಶ್ರೀಲಂಕಾ ತಂಡವು ಮೊದಲ ಹಣಾಹಣಿಯಲ್ಲಿ ಸ್ಪಿನ್ನರ್‌ಗಳಾದ



ಆ್ಯರನ್ ಫಿಂಚ್– ಎಎಫ್‌ಪಿ ಚಿತ್ರ

ಮಹೀಶ್ ತೀಕ್ಷಣ ಮತ್ತು ವನಿಂದು ಹಸರಂಗ ಅವರ ಬೌಲಿಂಗ್ ನೆರವಿನಿಂದ ಐರ್ಲೆಂಡ್ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿತ್ತು. ಈ ಜೋಡಿಯು ತಮ್ಮ ದೇಶಕ್ಕೆ ಪ್ರವಾಸ ಕೈಗೊಂಡಿದ್ದ ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಬೌಲಿಂಗ್ ಕೈಚಳಕದ ಮೂಲಕ ಕಾಡಿದ್ದರು. ಆದರೆ ಇಲ್ಲಿಯ ವಾತಾವರಣ ಭಿನ್ನವಿದೆ.

'ಆಸ್ಟ್ರೇಲಿಯಾ ತಂಡವು ನ್ಯೂಜಿಲೆಂಡ್‌ಗೆ ಸೋತಿದೆ. ಆದರೆ ನಾವು ಗೆದ್ದಿದ್ದೇವೆ. ಹೀಗಾಗಿ ನಮಗೆ ಆತ್ಮವಿಶ್ವಾಸ ಅವರಿಗಿಂತ ಹೆಚ್ಚು ಇದೆ' ಎಂದು ತೀಕ್ಷಣ ಅವರು ಹೇಳಿದ್ದಾರೆ.

ಉಭಯ ತಂಡಗಳ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಲಾಗಿದೆ.

**ಪಂದ್ಯ ಆರಂಭ:** ಸಂಜೆ 4.30

**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

### ಋತುವಿನ 13ನೇ ರೇಸ್ ಗೆದ್ದ ಮ್ಯಾಕ್ಸ್ ವರ್ಸ್ಟ್ಯಾಪನ್

# ಫಾರ್ಮುಲಾ ಒನ್: ರೆಡ್‌ಬುಲ್‌ಗೆ ಪ್ರಶಸ್ತಿ

ಆಸ್ಟಿನ್ (ಎಪಿ/ರಾಯಿಟರ್ಸ್): ಅದ್ಭುತಾ ಚಾಲನಾ ಕೌಶಲ ಮೆರೆದ ರೆಡ್‌ಬುಲ್ ತಂಡದ ಮ್ಯಾಕ್ಸ್ ವರ್ಸ್ಟ್ಯಾಪನ್ ಅವರು ಭಾನುವಾರ ನಡೆದ ಅಮೆರಿಕ ಗ್ರ್ಯಾನ್ ಪ್ರಿ ರೇಸ್ ಗೆದ್ದುಕೊಂಡರು. ಈ ಮೂಲಕ ತಮ್ಮ ತಂಡಕ್ಕೆ ಈ ಋತುವಿನ 'ಫಾರ್ಮುಲಾ ಒನ್ ಕನ್‌ಸ್ಟ್ರಕ್ಟರ್ಸ್' (ತಂಡ ವಿಭಾಗ) ಕಿರೀಟ ತಂದುಕೊಟ್ಟರು.

ರೆಡ್‌ಬುಲ್ ತಂಡ ಇದರೊಂದಿಗೆ ಮರ್ಸಿಡಿಸ್ ತಂಡದ ಪ್ರಾಬಲ್ಯವನ್ನು ಕೊನೆಗೊಳಿಸಿತು. ಮರ್ಸಿಡಿಸ್ ಸತತ ಎಂಟು ವರ್ಷಗಳಿಂದ ತಂಡ ವಿಭಾಗದ ಪ್ರಶಸ್ತಿ ಗೆಲ್ಲುತ್ತಾ ಬಂದಿತ್ತು. ರೆಡ್‌ಬುಲ್ 2013ರಲ್ಲಿ ಕೊನೆಯದಾಗಿ ಪ್ರಶಸ್ತಿ ಜಯಿಸಿತ್ತು.

ವರ್ಸ್ಟ್ಯಾಪನ್ ಅವರ ಪ್ರಯತ್ನದಿಂದ ರೆಡ್‌ಬುಲ್ ತಂಡದ ಪಾಯಿಂಟ್‌ಗಳ ಸಂಖ್ಯೆ 656ಕ್ಕೆ ಹೆಚ್ಚಿತು. ಎರಡನೇ ಸ್ಥಾನದಲ್ಲಿರುವ ಫೆರಾರಿ ತಂಡದ ಬಳಿ 469 ಪಾಯಿಂಟ್ಸ್‌ಗಳಿವೆ. ಋತುವಿನಲ್ಲಿ ಇನ್ನು ಮೂರು ರೇಸ್‌ಗಳು ಇದ್ದು, ಫೆರಾರಿ ಚಾಲಕರು ಅವುಗಳನ್ನು ಗೆದ್ದರೂ


ಮ್ಯಾಕ್ಸ್ ವರ್ಸ್ಟ್ಯಾಪನ್ ಅವರು ರೆಡ್‌ಬುಲ್ ತಂಡದ ಸದಸ್ಯರ ಜೊತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ರೆಡ್‌ಬುಲ್ ತಂಡವನ್ನು ಹಿಂದಿಕ್ಕಲು ಆಗದು.

**ದಾಖಲೆ ಸರಿಗಟ್ಟಿದ ವರ್ಸ್ಟ್ಯಾಪನ್:** ಎರಡು ವಾರಗಳ ಹಿಂದೆ ನಡೆದ ಜಪಾನ್ ಗ್ರ್ಯಾನ್‌ಪ್ರಿನಲ್ಲಿ ಗೆದ್ದು ಈ ಋತುವಿನ ಫಾರ್ಮುಲಾ ಒನ್ ವಿಶ್ವಚಾಂಪಿಯನ್ ಆಗಿದ್ದ, ವರ್ಸ್ಟ್ಯಾಪನ್ ಜಯದ ಓಟ ಮುಂದುವರಿಸಿದರು.

ಅವರಿಗೆ ಈ ಋತುವಿನಲ್ಲಿ ಲಭಿಸಿದ 13ನೇ ಗೆಲುವು ಇದು. ಫಾರ್ಮುಲಾ ಒನ್ ಋತುವಿನಲ್ಲಿ ಅತ್ಯಧಿಕ ಗೆಲುವು ಪಡೆದಿರುವ ಮೈಕಲ್ ಶುಮಾಕರ್ ಮತ್ತು ಸೆಬಾಸ್ಟಿಯನ್ ವೆಟೆಲ್ ಅವರ ಹೆಸರಲ್ಲಿರುವ ದಾಖಲೆ ಸರಿಗಟ್ಟಿದರು.

## ಉದ್ದೀಪನ ಮದ್ದು: ಚಿನ್ನ ಕಳೆದುಕೊಂಡ ನತಾಲಿಯಾ

ಮೊನಾಕೊ (ಎಪಿ): ರಷ್ಯಾದ ಮಹಿಳಾ ಅಥ್ಲೀಟ್ ನತಾಲಿಯಾ ಅಂತ್ಯುಕ್ ಅವರು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಜಯಿಸಿದ ಚಿನ್ನದ ಪದಕವನ್ನು ಕಳೆದುಕೊಂಡಿದ್ದಾರೆ.

ಕೂಟದ 400 ಮೀ. ಹರ್ಡಲ್ಸ್ ವಿಭಾಗದಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು. ಆದರೆ ಉದ್ದೀಪನ ಮದ್ದು ಸೇವನೆ ಆರೋಪದ ಹಿನ್ನೆಲೆಯಲ್ಲಿ ಅವರ ಅಂದಿನ ಫಲಿತಾಂಶವನ್ನು ಅಮಾನ್ಯ ಮಾಡಲಾಗಿದೆ. ಇದರಿಂದಾಗಿ ಆ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದಿದ್ದ ಅಮೆರಿಕದ ಲಶಿಂದಾ ಡೆಮಸ್ ಅವರು ಚಿನ್ನದ ಪದಕವನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ.

ಕ್ರೀಡಾ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಂತ್ಯುಕ್ ನತಾಲಿಯಾ ಅವರು ಈಗಾಗಲೇ ನಾಲ್ಕು ವರ್ಷಗಳ ನಿಷೇಧ ಶಿಕ್ಷೆ ಎದುರಿಸುತ್ತಿದ್ದಾರೆ.

2013ರಿಂದ 2015ರವರೆಗಿನ ಅವರ ಫಲಿತಾಂಶಗಳನ್ನು ಅನರ್ಹ ಮಾಡಲಾಗಿದೆ.


ಫೆಡರೇಷನ್ ಆಫ್ ಮಿಕ್ಸೆಡ್ ನೆಟ್‌ಬಾಲ್ ವತಿಯಿಂದ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಆಯೋಜಿಸಿದ್ದ ಮಿಕ್ಸೆಡ್ ನೆಟ್‌ಬಾಲ್ ಫೆಡರೇಷನ್ ಕಪ್ ಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡವನ್ನು 25–22 ರಲ್ಲಿ ಮಣಿಸಿ ಚಾಂಪಿಯನ್ ಆದ ಕರ್ನಾಟಕ ತಂಡ. ನಿಂತವರು (ಎಡದಿಂದ) ಸೂರಜ್, ಯು.ಬಿ.ಅರುಣ್, ಟಿ.ಕೀರ್ತಿ, ಸುಹಾಸ್ ಗೌಡ, ಉದಯ್, ರಕ್ಷಿತ್ ರಾಘವ್, ಸಂಜಯ್, ರೋಹಿತ್ ಚೇತನ್. ಕುಳಿತವರು: ದೀಕ್ಷಾಂಜಲಿ, ಕೆ.ದಕ್ಷಾ, ಎಲ್.ಕಾವ್ಯಾ, ನವ್ಯಶ್ರೀ, ತನುಜಾ ಮತ್ತು ಗಗನಾ

## ಪೆಗುಲಾಗೆ ಕಿರೀಟ

ಮೆಕ್ಸಿಕೊ ಸಿಟಿ (ಎಪಿ): ಅಮೆರಿಕದ ಜೆಸ್ಸಿಕಾ ಪೆಗುಲಾ ಅವರು ಇಲ್ಲಿ ನಡೆದ ಗ್ವಾಡಾಜಲಾರ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಇದರೊಂದಿಗೆ ವೃತ್ತಿಜೀವನದ ಮೊದಲ ಡಬ್ಲ್ಯುಟಿಎ 1000 ಪ್ರಶಸ್ತಿಗೆ ಮುತ್ತಿಟ್ಟರು.


ಜೆಸ್ಸಿಕಾ ಪೆಗುಲಾ

28 ವರ್ಷದ ಜೆಸ್ಸಿಕಾ ಅವರು ಭಾನುವಾರ ಸಂಜೆ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ 6-2, 6-3ರಿಂದ ಗ್ರೀಸ್‌ನ ಮರಿಯಾ ಸಕ್ಕರಿ ಅವರನ್ನು ಪರಾಭವಗೊಳಿಸಿದರು.

ಪ್ರಶಸ್ತಿ ಹಾದಿಯಲ್ಲಿ ಜೆಸ್ಸಿಕಾ ಅವರು ನಾಲ್ಕು ಮಂದಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತರಿಗೆ ಸೋಲುಣಿಸಿದ್ದರು.

ಜೆಸ್ಸಿಕಾ ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಸವಾಲು ಮೀರಿದ್ದರು.

# ಮಹಿಳಾ ಕುಸ್ತಿ: ಫೈನಲ್‌ಗೆ ಪುಷ್ಪಾ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ): ಕಿತ್ತೂರು ಉತ್ಸವ ಅಂಗವಾಗಿ ಸೋಮವಾರ ಆರಂಭಗೊಂಡ ರಾಜ್ಯಮಟ್ಟದ ಕುಸ್ತಿಯ ಮಹಿಳಾ ವಿಭಾಗದ ವಿವಿಧ ವಯೋವರ್ಗಗಳಲ್ಲಿ ಏಳು ಮಂದಿ ಫೈನಲ್‌ಗೆ ಪ್ರವೇಶಿಸಿದರು.

46 ಕೆ.ಜಿ ವಿಭಾಗದಲ್ಲಿ ಧಾರವಾಡದ ಪುಷ್ಪಾ ನಾಯ್ಕ 6-3 ಅಂಕಗಳಿಂದ ಹಳಿಯಾಳದ ನಿಶಾ ಉರಗಾಣಿ ವಿರುದ್ಧ ಗೆದ್ದರೆ, ಗೋಕಾಕದ ಅಮೂಲ್ಯ ಕುಂದರಗಿ ಬೆಳಗಾವಿಯ ತ್ರಿಶಾ ಪಾಟೀಲ ಅವರನ್ನು ಮಣಿಸಿದರು.

50 ಕೆ.ಜಿ ವಿಭಾಗದಲ್ಲಿ ಗದುಗಿನ ಸೋನಿಯಾ ಜಾಧವ, ಬೆಳಗಾವಿಯ ಭಕ್ತಿ ಪಾಟೀಲ ವಿರುದ್ಧ 10–0 ಅಂಕಗಳಿಂದ ಗೆಲುವು ಸಾಧಿಸಿದರೆ, ಧಾರವಾಡ ಜಿಲ್ಲೆಯ ಹಳಿಯಾಳದ ಗೋಪವ್ವ ಕೊಡಕಿ, ಕಾವೇರಿ ತಳಗೇರಿ ಅವರನ್ನು 10–0 ರಲ್ಲಿ ಸೋಲಿಸಿದರು.


ಮಹಿಳೆಯರ 55 ಕೆ.ಜಿ. ವಿಭಾಗದ ಕುಸ್ತಿಯಲ್ಲಿ ಬಳ್ಳಾರಿಯ ಶ್ವೇತಾ ಅಣ್ಣಿಗೇರಿ, ಗದುಗಿನ ಐಶ್ವರ್ಯ ಕರಿಗಾರ ನಡುವಿನ ಸೆಣಸಾಟ

–ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

55 ಕೆ.ಜಿ. ವಿಭಾಗದಲ್ಲಿ ಬಳ್ಳಾರಿಯ ಶ್ವೇತಾ ಅಣ್ಣಿಗೇರಿ 3-1 ಅಂಕಗಳಿಂದ ಗದುಗಿನ ಐಶ್ವರ್ಯ ಕರಿಗಾರ ವಿರುದ್ಧ, ಹಳಿಯಾಳದ ಗಾಯತ್ರಿ ಸುತಾರ 3-1 ಅಂಕಗಳಿಂದ ರಕ್ಷಿತಾ ಸೂರ್ಯವಂಶಿ ವಿರುದ್ಧ, 60 ಕೆ.ಜಿ ವಿಭಾಗದಲ್ಲಿ ಗದುಗಿನ ರಾಧಿಕಾ ತೊಂಡಿಹಾಳ ಬೆಳಗಾವಿಯ ಪ್ರಾಂಜಲ್ ಟಿ. ವಿರುದ್ಧ ಗೆದ್ದರು.

ಪುರುಷರ 74 ಕೆ.ಜಿ ವಿಭಾಗದಲ್ಲಿ ಅಥಣಿಯ ಮಲ್ಲೇಶ ಮೇತ್ರಿ, ಬೆಳಗಾವಿಯ ಅರ್ಜುನ್ ಕೆ. ಅವರನ್ನು ಸೋಲಿಸಿದರು.


### ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಸೈನಾ ಕಣಕ್ಕೆ

# ಲಕ್ಷ್ಯ ಸೇನ್–ಶ್ರೀಕಾಂತ್ ಮುಖಾಮುಖಿ

ಪ್ಯಾರಿಸ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ.

ಮಂಗಳವಾರದಿಂದ ಇಲ್ಲಿ ಆರಂಭವಾಗುವ ಟೂರ್ನಿಯಲ್ಲಿ ಭಾರತದ ಇಬ್ಬರೂ ಆಟಗಾರರು ಸಿಂಗಲ್ಸ್ ವಿಭಾಗದಲ್ಲಿ ಸೆಣಸಲಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಎಂಟು ಮತ್ತು 11ನೇ ಸ್ಥಾನದಲ್ಲಿರುವ ಲಕ್ಷ್ಯ ಮತ್ತು ಶ್ರೀಕಾಂತ್ ವೃತ್ತಿಜೀವನದಲ್ಲಿ ಎರಡನೇ ಮುಖಾಮುಖಿಗೆ ವೇದಿಕೆ ಸಿದ್ಧಗೊಂಡಿದೆ.

ಇತ್ತೀಚೆಗೆ ಮುಗಿದ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಲಕ್ಷ್ಯ, ಉತ್ತಮ ಸಾಮರ್ಥ್ಯ ತೋರಿದ್ದರು. ಆದರೆ ಕ್ವಾರ್ಟರ್ ಫೈನಲ್‌ನಲ್ಲಿ ತನಗಿಂತ ಕೆಳ ರ‍್ಯಾಂಕಿನ ಜಪಾನ್ ಆಟಗಾರ ಕೊಡಾಯಿ ನರವೊಕಾ ಎದುರು ಎಡವಿದ್ದರು.


ಲಕ್ಷ್ಯ ಸೇನ್– ಪಿಟಿಐ ಚಿತ್ರ


ಕಿದಂಬಿ ಶ್ರೀಕಾಂತ್– ಎಎಫ್‌ಪಿ ಚಿತ್ರ

ಲಕ್ಷ್ಯ ಮತ್ತು ಶ್ರೀಕಾಂತ್ ಈ ಹಿಂದೆ 2021ರ ವಿಶ್ವ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಿದ್ದರು. ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಲಕ್ಷ್ಯ ಅವರನ್ನು ಮಣಿಸಿದ್ದ ಶ್ರೀಕಾಂತ್ ಫೈನಲ್ ತಲುಪಿ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡಿದ್ದರು.

ಫ್ರೆಂಚ್ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗೆದ್ದವರು ಎರಡನೇ ಸುತ್ತಿನಲ್ಲಿ ಡೆನ್ಮಾರ್ಕ್‌ನ ಆ್ಯಂಡರ್ಸ್ ಆ್ಯಂಟನ್ಸನ್ ಅವರನ್ನು ಎದುರಿಸುವರು.

ಭಾರತದ ಇನ್ನೊಬ್ಬ ಆಟಗಾರ ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾದ ಡರೆನ್ ಲಿವ್ ಎದುರು ಆಡಲಿದ್ದಾರೆ. ಡರೆನ್ ಎದುರು ಆಡಿದ 11ರ ಪೈಕಿ ಏಳು ಪಂದ್ಯಗಳಲ್ಲಿ ಪ್ರಣಯ್ ಜಯ ಸಾಧಿಸಿದ್ದು ಇಲ್ಲಿಯೂ ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

ಒಲಿಂಪಿಕ್ಸ್ ಕಂಚು ವಿಜೇತೆ, ಸೈನಾ ನೆಹ್ವಾಲ್ ಅವರು ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಜರ್ಮನಿಯ ಯುವೊನ್ನೆ ಲಿ ಅವರನ್ನು ಎದುರಿಸುವರು. 2020ರಲ್ಲಿ ನಡೆದ ಪಂದ್ಯವೊಂದರಲ್ಲಿ ಭಾರತದ ಆಟಗಾರ್ತಿ ಲಿ ಅವರನ್ನು ಮಣಿಸಿದ್ದರು.

ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಎಂ.ಆರ್. ಅರ್ಜುನ್–ಧ್ರುವ ಕಪಿಲ ಕಣಕ್ಕಿಳಿಯಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ–ಗಾಯತ್ರಿ ಗೋಪಿಚಂದ್, ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.